ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ನವೆಂಬರ್, ೨೦೧೫ | ಸಂಪಾದಕ : ಡಿ.ಎಸ್.ನಾಗಭೂಷಣ | ಸಂಪುಟ: ೫ ಸಂಚಿಕೆ: ೪

ಚಂದಾ : ರೂ. ೧೫೦/-(ಅಕ್ಟೋಬರ್, ೨೦೧೫-ಆಗಸ್ಟ್, ೨೦೧೬) ಬಿಡಿ ಪ್ರತಿ: ರೂ. ೨೦/- ಪುಟ: ೨೦

ವಿಳಾಸ: ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨ ೪೨೨೮೪ *ಈ ಮೇಲ್:* dsnagabhushana@gmail.com

ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ದೇಶಾದ್ಯಂತ ಹದಗೆಡುತ್ತಾ ಬಂದ ಕೋಮು ಪರಿಸ್ಥಿತಿ ಇತ್ತೀಚಿನ ದಾದ್ರಿ ಘಟನೆಯಿಂದ ತನ್ನ ನಿರ್ಣಾಯಕ ಘಟ್ಟವನ್ನು ಮುಟ್ಟಿದೆ ಎಂದು ಹೇಳಬೇಕು. ಮುಸ್ಲಿಂ ವ್ಯಕ್ತಿಯೊಬ್ಬ ತನ್ನ ಮನೆಯಲ್ಲಿ ಗೋಮಾಂಸವನ್ನು ಬಚ್ಚಿಟ್ಟುಕೊಂಡಿದ್ದಾನೆ ಎಂಬ ವದಂತಿಯ ಆಧಾರದ ಮೇಲೆ, ಆತನ ಕುಟುಂಬದ ಸದಸ್ಯರ ಮುಂದೆಯೇ ಆತನನ್ನು ಹೊಡೆದು ಕೊಲ್ಲಲಾಗಿದೆ. ಊರಿನ ಗುಡಿಯೊಂದರ ಧ್ವನಿವರ್ಧಕದ ಮೂಲಕ ಈ ವದಂತಿಯನ್ನು ಹಬ್ಬಿಸಿ ಜನರನ್ನು ಪ್ರಚೋದಿಸಿ ಈ ಕೊಲೆಯನ್ನು ವ್ಯವಸ್ಥಿತವಾಗಿಯೇ ಮಾಡಲಾಗಿದೆ. ನಮ್ಮ ಜನ ಏಕೆ ಇಷ್ಟು ಅಮಾನುಷವಾಗಿ ಮತಾಂಧರಾಗಿದ್ದಾರೆ ಎಂಬುದು ತಿಳಿಯದಾಗಿದೆ. ಗೋವಿನ ಹೆಸರಿನಲ್ಲಿ ಮನುಷ್ಯರನ್ನು ಕೊಲ್ಲುವುದೇ? ಆತ ತನ್ನ ಮನೆಯಲ್ಲಿ ಗೋಮಾಂಸ ಇಟ್ಟುಕೊಂಡಿದ್ದನೆಂದರೂ ಈ ಕೊಲೆ ಅನಾಗರಿಕ, ಅಕ್ಷಮ್ಯವೇ. ಈ ಸಂಬಂಧ ಯಾರನ್ನಾದರೂ ದಿಗಿಲುಗೊಳಿಸುವ ಇನ್ನೊಂದು ಅಂಶವೆಂದರೆ, ಒಂದು ಸಮೀಕ್ಷೆಯ ಪ್ರಕಾರ(*ಔಟ್‌ಲುಕ್* ಅಕ್ಟೋ. ೧೯) ಈ ದೇಶದ ಬಹುತೇಕ ಜನ ಇದನ್ನು ಒಪ್ಪುವರಾದರೂ ಶೇ.೧೭.೫ ಜನ ಈ ಹತ್ಯೆ ಸರಿ ಎನ್ನುತ್ತಾರೆ ಎಂಬುದು. ಇದೇನೂ ಕಡಿಮೆ ಗಾತ್ರದ ಜನರ ಅಭಿಪ್ರಾಯವಲ್ಲ. ಇದೇ ಬಿಜೆಪಿ ಮತ್ತು ಅದರ ಪರಿವಾರ ಈ ದೇಶದಲ್ಲಿ ಕೂಡಿಟ್ಟಿರುವ ಅಪಾಯಕಾರಿ ರಾಜಕೀಯ ಬಂಡವಾಳ. ಇದರ ಸುತ್ತಲೇ ಹಿಂದೂವಾದಿ ರಾಜಕಾರಣದ ಎಲ್ಲ ವ್ಯವಹಾರಗಳೂ ನಡೆಯುತ್ತಿರುವುದು ಮತ್ತು ಬೆಳೆಯುತ್ತಿರುವುದು.

ಈ ಹಿಂದೂವಾದಿಗಳಿಗೆ, ಗೋರಕ್ಷಕ ಸಂಘದವರು ಸಹಾಯ ಬೇಡಿ ವಿವೇಕಾನಂದರ ಬಳಿ ಬಂದಾಗ ಅವರಿಗೆ ವಿವೇಕಾನಂದರು ಏನು ಹೇಳಿದರೆಂಬುದನ್ನು ಯಾರಾದರೂ ನೆನಪಿಸಬೇಕಿದೆ. ನಿಜ ಸಂಗತಿ ಎಂದರೆ ಇವರು ಹಿಂದೂಗಳಲ್ಲ; ಹಿಂದೂವಾದಿಗಳಷ್ಟೆ. ಹಾಗಾಗಿಯೇ ಇವರ್‍ಯಾರಿಗೂ ಆಧುನಿಕ ಕಾಲದ ಸವಾಲುಗಳೆದುರು ಸನಾತನ ಸತ್ಯದ ಬೆಳಕಿನಲ್ಲಿ ಹಿಂದೂ ಧರ್ಮವನ್ನು ಪುನರ್‌ವ್ಯಾಖ್ಯಾನಿಸಿದ ಪರಮಹಂಸ, ವಿವೇಕಾನಂದ, ದಯಾನಂದ ಸರಸ್ವತಿ, ರಮಣ ಮಹರ್ಷಿಗಳ ಅನುಭಾವಿ ಪರಂಪರೆಯ ವಾಸನೆಯೂ ಇದ್ದಂತಿಲ್ಲ. ಇವರ ನಾಯಕರೇನಿದ್ದರೂ ಆಧುನಿಕತೆಯ ಭಯವನ್ನೆದುರಿಸಲು ಹಿಂದೂ ಧರ್ಮವನ್ನು ಕ್ರಿಶ್ಚಿಯನ್ ಮತದ ಪ್ರತಿಬಿಂಬದಂತೆ ಮರುನಿರ್ಮಾಣ ಮಾಡಲೆಳಸಿದ ಸಾವರ್ಕರ್, ಹೆಡಗೆವಾರ್, ಗುರೂಜಿ ಮುಂತಾದ ಘರ್ಷಣಾತ್ಮಕ ರಾಜಕಾರಣದ ನೇತಾರರು.

ಅಮಾಯಕ ಮುಸ್ಲಿಮನೊಬ್ಬನ ದಾರುಣ ಹತ್ಯೆ ದಾದ್ರಿ ಘಟನೆಯ ಅರ್ಥ ದುರಂತವಾದರೆ, ಅಷ್ಟೇ ದಾರುಣವಾದ ಇನ್ನರ್ಥ ದುರಂತವೆಂದರೆ, ಆಳುವ ಸರ್ಕಾರ, ವಿಶೇಷವಾಗಿ ನಮ್ಮ ವಾಕ್‌ಪಟು ಪ್ರಧಾನಿ ಮೋದಿಯವರು ಈ ಬಗ್ಗೆ ಒಂದೂ ಮಾತಾಡದೆ ಇದ್ದು, ರಾಷ್ಟ್ರಪತಿಗಳು ಅನಿವಾರ್ಯವಾಗಿ ಮಾತಾಡಬೇಕಾಗಿ ಬಂದ ನಂತರ ಇದನ್ನು 'ದುರದೃಷ್ಟಕರ ಘಟನೆ' ಎಂದಷ್ಟೇ ಕರೆದು, ಇದರಲ್ಲಿ ಕೇಂದ್ರದ ಪಾತ್ರವೇನೂ ಇಲ್ಲವೆಂದು ಹೇಳಿ ಕೈತೊಳೆದುಕೊಂಡದ್ದು. ಅಂದರೆ ಮೋದಿಯವರಿಗೆ ಇದೊಂದು, ದಾದ್ರಿ ಇರುವ ಉ.ಪ್ರ.ದ ಸರ್ಕಾರ ನಿಭಾಯಿಸಬೇಕಾದ ಕಾನೂನು ಮತ್ತು ಶಿಸ್ತಿನ ಪ್ರಕರಣ! ಈ ಸಂದರ್ಭದಲ್ಲಿ ದೇಶದ ಪ್ರಧಾನ ಮಂತ್ರಿಯೊಬ್ಬರ ಬಾಯಿಂದ ಇದಕ್ಕಿಂತ ಹೆಚ್ಚಿನ ಆತ್ಮದ್ರೋಹದ ಮಾತು ಹೊರಬರಲಾರದೇನೋ. ತಮ್ಮ ಪಕ್ಷದ ಮತ್ತು ಅದರ ಸೋದರ ಸಂಘಟನೆಗಳು ಒಂದೇ ಸಮನೆ ತಮ್ಮ ಪ್ರಚೋದನಾತ್ಮಕ ಹೇಳಿಕೆಗಳಿಂದ ಸೃಷ್ಟಿಸುತ್ತಿರುವ ಅನ್ಯಧರ್ಮ ಅಸಹಿಷ್ಣುತೆಯ ವಾತಾವರಣದ ಪರಿಣಾಮ ಈ ಘಟನೆ ಎಂಬುದು ಗೊತ್ತಾಗದಷ್ಟು ಅಮಾಯಕರೇ ನಮ್ಮ ಪ್ರಧಾನಮಂತ್ರಿಗಳು? ಹಾಗಿಲ್ಲದಿದ್ದಲ್ಲಿ ಅವರ ಪರೋಕ್ಷ ಒಪ್ಪಿಗೆಯಿಂದಲೇ ಇಂತಹ ಘಟನೆಗಳು ಯಾವುದೇ ತಡೆಯಿಲ್ಲದೆ ಒಂದಾದ ಮೇಲೊಂದರಂತೆ ನಡೆಯುತ್ತಿವೆ ಎಂದೇ ದೇಶ ಭಾವಿಸಬೇಕಾಗುತ್ತದೆ. ಕನಿಷ್ಠ ಅವರ ಬೆಂಬಲಿಗರು ಹಾಗೆ ಭಾವಿಸಿದಂತಿದೆ. ಇದು ರಾಷ್ಟ್ರೀಯ ದುರಂತ. ಪಾಕಿಸ್ತಾನದ ಕವಿಯೊಬ್ಬ ಇತ್ತೀಚೆಗೆ, 'ಅಯ್ಯೋ ಭಾರತವೇ, ನೀನೂ ನನ್ನ ದೇಶದಂತೆಯೇ ಆಗಿಬಿಟ್ಟೆಯಾ!' ಎಂದೊಂದು ಕವಿತೆ ಬರೆದು ದುಃಖಿಸಿದ್ದಾನಂತೆ. ಆದರೆ ನಮ್ಮ ಹಿಂದುತ್ವವಾದಿಗಳಿಗೆ ಇದು ಸಂಭ್ರಮದ ಸಂಗತಿಯಾಗಿದೆ. ದಾದ್ರಿ ಘಟನೆಯ ಜೊತೆಗೇ ದೇಶದ ವಿವಿಧ ಭಾಗಗಳಿಂದ ನಿರಂತರವಾಗಿ ವರದಿಯಾಗುತ್ತಿರುವ ವಿವಿಧ ಕಾರಣಗಳ ಮೇಲೆ ದಲಿತರ ಮೇಲಿನ ಹಲ್ಲೆ, ಕೊಲೆ, ಸಜೀವ ದಹನದಂತಹ ಬರ್ಬರ ಪ್ರಕರಣಗಳು ಹಿಂದೂವಾದದ ಅರ್ಥವೇನೆಂಬುದನ್ನು ಸಾರಿ ಹೇಳತೊಡಗಿವೆ.

ಇದು ಘನತೆ-ಗೌರವಗಳುಳ್ಳ ಹಲವು ನಾಯಕರನ್ನೊಳಗೊಂಡ ಬಿಜೆಪಿಯ ದುರಂತವೂ ಹೌದು. ಇದು, ಇದರ ಪಿತಾಮಹ ಆರೆಸ್ಸೆಸ್ ಎಂಬತ್ತರ ದಶಕದಲ್ಲಿ ತನ್ನ ಘನಗಂಭೀರ ಪ್ರತಿಪಾದನೆಗಳ ಮೂಲಕ ದೇಶದ ಗಮನ ಸೆಳೆಯಲಾಗುವುದಿಲ್ಲವೆಂದು ತೀರ್ಮಾನಿಸಿ, ಮಲಗಿದ್ದ ವಿಶ್ವ ಹಿಂದೂ ಪರಿಷತ್ತನ್ನು ಬಡಿದೆಬ್ಬಿಸುವುದರ ಜೊತೆಗೇ ಬಜರಂಗದಳದಂತಹ ಪಡ್ಡೆಗಳ ಪಡೆಯೊಂದನ್ನು ಹುಟ್ಟುಹಾಕಿ ತನ್ನ ಬಲವನ್ನು ಪರೋಕ್ಷವಾಗಿ ಹೆಚ್ಚಿಸಿಕೊಳ್ಳಲು ಮಾಡಿದ ಪ್ರಯತ್ನದ ಫಲವೇ ಆಗಿದೆ. ಇದು ಹಿಂದೂ ಯುವ ಸೇನೆ, ಶ್ರೀರಾಮ ಸೇನೆ, ಹಿಂದೂ ಜಾಗರಣ ವೇದಿಕೆ ಇತ್ಯಾದಿಗಳ ಹೆಸರಿನ ಮತ್ತಷ್ಟು ಉಪ ಸಂಘಟನೆಗಳನ್ನು ಹುಟ್ಟು ಹಾಕಿ, ಬಿಜೆಪಿ ಇರಲಿ, ಆರೆಸ್ಸೆಸ್ಸಿಗೂ ಇವುಗಳ ಚೇಷ್ಟೆಗಳನ್ನು ನಿಯಂತ್ರಿಸುವುದು ಕಷ್ಟವಾಗಿದೆ. ಈ ಗೊಂದಲದಲ್ಲಿ ಇವುಗಳ ಕೆಲ ಸದಸ್ಯರು ಬಿಜೆಪಿ ಸೇರಿಕೊಂಡು ಮಂತ್ರಿಗಳೂ ಆಗಿದ್ದಾರೆ. ಇವರೇ ಈಗ ದಾದ್ರಿಯಂತಹ ಘಟನೆಗಳಿಗೆ ಕಾರಣವಾಗಿ, ಅವುಗಳನ್ನು ಆಕಸ್ಮಿಕ, ಯಃಕಶ್ಚಿತ್ ಘಟನೆಗಳೆಂದು ಕರೆಯುತ್ತಿರುವುದು. ಇದು ಹೀಗೇ ಮುಂದುವರೆದರೆ, ದೇಶವನ್ನು ತನ್ನ ಕಲ್ಪನೆಯ ಹಿಂದೂ ರಾಷ್ಟ್ರವನ್ನಾಗಿ ಮಾಡುವ ಆರೆಸ್ಸೆಸ್ಸಿನ ಯೋಜನೆ ರಾಷ್ಟ್ರದ ವಿಘಟನೆಯಲ್ಲಿ ಮಾತ್ರ ಅಂತ್ಯವಾದೀತು, ಎಚ್ಚರ! ಹಾಗೇ, ಸುಮ್ಮನೆ ದೇಶ ವಿದೇಶ ತಿರುಗುವ ನಮ್ಮ ಪ್ರಧಾನ ಮಂತ್ರಿಗಳೂ ಒಂದಷ್ಟು ಕಾಲ ದೇಶದಲ್ಲೇ ನೆಲೆಸಿ ಭಾರತ ಅಂದರೆ ಗುಜರಾತ್ ಅಲ್ಲ ಎಂದು ತಿಳಿಯುವುದೂ ಒಳ್ಳೆಯದು!

ಬಿಜೆಪಿಗೆ ಸದ್ಯಕ್ಕೆ ಎದುರಾಗಿರುವ ಇನ್ನೊಂದು ರಾಜಕೀಯ ಸಂಕಟವೆಂದರೆ, ಅದರ ಮಿತ್ರಪಕ್ಷ ಶಿವಸೇನೆ ಬಿಜೆಪಿಯ ಹಿಂದೂವಾದದ ಎದುರು ತನ್ನ ಹಿಂದೂವಾದ ಕಳೆಗುಂದುತ್ತಾ ತನ್ನ ರಾಜಕೀಯ ಪಾಬಲ್ಯ ಕಡಿಮೆಯಾಗುತ್ತಿರುವ ಆತಂಕದಲ್ಲಿ ಅದು ಸ್ಪರ್ಧಾತ್ಮಕ ಹಿಂದೂ ಕೋಮುವಾದಿ ರಾಜಕಾರಣಕ್ಕೆ ಇಳಿದಿರುವುದು. ಇದು ಮೋದಿ ಸರ್ಕಾರ ಬಂದ ಮೇಲೆ ಹಳಿತಪ್ಪಿಹೋಗಿರುವ ಭಾರತ-ಪಾಕಿಸ್ತಾನ ಸಂಬಂಧಗಳು ಇನ್ನಷ್ಟು ರೂಕ್ಷ ರೂಪ ತಾಳಿ, ಅವನ್ನು ಒಂದು ಹದಕ್ಕೆ ತರಬಹುದಾದ ಎರಡೂ ದೇಶಗಳ ಜನರ ನಡುವಣ ಸಾಹಿತ್ಯ-ಸಂಗೀತ-ಕಲೆ-ಕ್ರೀಡಾ ಸಂಬಂಧಗಳ ಪ್ರಯತ್ನಗಳನ್ನು ಶಿವಸೇತನೆ ಗೂಂಡಾಗಿರಿ ವಿಫಲಗೊಳಿಸುತ್ತಿರುವುದು. ಪಾಕಿಸ್ತಾನದ ಸೂಫಿ ಗಾಯಕರ ಸಂಗೀತ ಕಾರ್ಯಕ್ರಮಕ್ಕೆ ತಡೆಯೊಡ್ಡಿದ, ಪಾಕಿಸ್ತಾನದ ಮಾಜಿ ವಿದೇಶಾಂಗ ಮಂತ್ರಿ ಕಸೂರಿಯವರ ಪುಸ್ತಕವೊಂದರ ಬಿಡುಗಡೆಯನ್ನು

ಆಯೋಜಿಸಿದ್ದ ಅಡ್ವಾಣಿಯವರ ಆಪ್ತರಲ್ಲೊಬ್ಬರಾದ ಸುಧೀಂದ್ರ ಕುಲಕರ್ಣಿಯವರ ಮುಖಕ್ಕೆ ಮಸಿ ಬಳಿದ, ಪಾಕಿಸ್ತಾನದ ಕ್ರಿಕೆಟ್ ಮಂಡಳಿಯ ಮುಖ್ಯಸ್ಥರು ಮತ್ತು ಭಾರತದ ಕ್ರಿಕೆಟ್ ಮಂಡಳಿಯ ಮುಖ್ಯಸ್ಥರನ್ನು ಭೇಟಿಯಾಗದಂತೆ ಹಿಂಸಾತ್ಮಕವಾಗಿ ತಡೆದ ಘಟನೆಗಳು ಮತ್ತು ಇವುಗಳಲ್ಲಿ ಎದ್ದು ಕಂಡ ಪೋಲೀಸರ(ಅಂದರೆ ಆಡಳಿತದ) ನಿಷ್ಕ್ರಿಯತೆ, ಬಿಜೆಪಿ ಎಂತಹ ಸ್ವಯಂಕೃತ ಇಕ್ಕಟ್ಟಿಗೆ ಸಿಕ್ಕಿದೆ ಎಂಬುದನ್ನು ಸೂಚಿಸುತ್ತದೆ. ಕಾನೂನು ಪ್ರಕಾರ ಆಡಳಿತ ನಡೆಸಬಲ್ಲ ರಾಜಕೀಯ ಪ್ರಬುದ್ಧತೆಯನ್ನು ಸಾಧಿಸಿದೆ ಎಂದು ನಂಬಿ ಜನತೆ ನೀಡಿರುವ ಜನಾದೇಶದ ಹಿಂದಿರುವ ಜವಾಬ್ದಾರಿಯನ್ನು ರಾಷ್ಟ್ರೀಯ ಪಕ್ಷವಾದ ಬಿಜೆಪಿ ಮರೆಯಲಾಗದು. ದೇಶದ ರಾಜಕಾರಣ ಎರಡು ಧೃವೀಕೃತ ರಾಜಕೀಯ ನಿಲುವುಗಳ ಬಂಧಿಯಾಗದೆ, ವಿರೋಧಿಗೂ ಒಂದಿಷ್ಟು ಜಾಗ ಇರುವಂತಹ ಆಡಳಿತ ನೀತಿಯನ್ನು ರೂಪಿಸಿಕೊಳ್ಳಬೇಕಾದ ಅಗತ್ಯವನ್ನು ಬಿಜೆಪಿ ಆದಷ್ಟು ಬೇಗ ಮನಗಾಣಬೇಕಿದೆ. ಶಿವಸೇನೆ ಮತ್ತಿತರ(ಉದಾ: ಗೋಡ್ಸೆ ಹುಟ್ಟುಹಬ್ಬ ಆಚರಿಸ ಹೊರಟಿರುವ) ಕುಚೇಷ್ಟೆಯ ಸಂಘಟನೆಗಳನ್ನು ಕಟುನಿಟ್ಟಾದ ಕ್ರಮಗಳ ಮೂಲಕ(ಮಾತುಗಳ ಮೂಲಕ ಅಲ್ಲ) ಹದ್ದುಬಸ್ತಿನಲ್ಲಿಡಬೇಕಿದೆ.

ಈ ದುರಂತಮಯ ಹಿನ್ನೆಲೆಯಲ್ಲಿ ಕಾಂಗ್ರೆಸ್ ರಾಜಕಾರಣವನ್ನು ನೋಡಿದರೆ ನಿಜವಾಗಿಯೂ ಆತಂಕವಾಗುತ್ತದೆ. ನಮ್ಮ ಸಿದ್ಧರಾಮಯ್ಯನವರ ತುಕ್ಕು ಹಿಡಿದ ಅಹಿಂದ ರಾಜಕಾರಣವನ್ನೇ ನೋಡಿ. ಮೊನ್ನೆ ಮೊಗವೀರ ಸಮಾವೇಶದಲ್ಲಿ ಇವರು 'ಜಾತಿಭೂತ ಹೋಗುವವರೆಗೆ ಮೀಸಲಾತಿ ಹೋಗುವುದಿಲ್ಲ' ಎಂದು ಘೋಷಿಸಿದ್ದಾರೆ. ಆಯಿತು. ಹಾಗಾದರೆ ಜಾತಿಭೂತವನ್ನು ಓಡಿಸುವವರಾರು? ಹೇಗೆ? ಅದನ್ನು ಓಡಿಸಲೆಂದೇ ಮೀಸಲಾತಿ ವ್ಯವಸ್ಥೆಯನ್ನು ತಂದಿದ್ದಲ್ಲವೆ? ಅದು ಈವರೆಗೆ ಜಾತಿಭೂತವನ್ನು ಎಷ್ಟು ದೂರದವರೆಗೆ ಓಡಿಸಿದೆ? ಸಿದ್ಧರಾಮಯ್ಯನವರು ಲೆಕ್ಕಹಾಕಿ ಹೇಳಬಲ್ಲರೆ? ಒಂದು ಕಡೆ ಜಾತಿ ಸಮಾವೇಶಗಳಲ್ಲಿ ಭಾಗವಹಿಸಿ ಜಾತಿಭೂತವನ್ನು ಬಡಿದೆಬ್ಬಿಸುತ್ತಾ, ಇನ್ನೊಂದು ಕಡೆ ಅಧಿಕಾರ ಸ್ವೀಕರಿಸಿದೊಡನೆ ಅದರ ಭದ್ರತೆಗಾಗಿ ತಮ್ಮ ಅಧಿಕೃತ ಕಛೇರಿಯಲ್ಲಿ ಬ್ರಾಹ್ಮಣ ಪುರೋಹಿತನೊಬ್ಬನಿಂದ ಪೂಜೆ ಮಾಡಿಸಿ ತೀರ್ಥಪ್ರಸಾದ ಸ್ವೀಕರಿಸಿ ಜಾತಿ ಪದ್ಧತಿಗೆ ಸಾರ್ವಜನಿಕವಾಗಿ ಅಧಿಕೃತ ಮುದ್ರೆ ಒತ್ತುವ ಸಿದ್ಧರಾಮಯ್ಯ ಸಾಮಾಜಿಕ ನ್ಯಾಯ ಕಲ್ಪನೆಯನ್ನೇ ಅಶ್ಲೀಲಗೊಳಿಸಿಬಿಟ್ಟಿದ್ದಾರೆ. ಇದು ಅವರ ಚೇಲಾಗಳನ್ನು ಬಿಟ್ಟು, ಅಹಿಂದ ಜಾತಿಗಳೂ ಸೇರಿದಂತೆ ಸಮಾಜದ ಎಲ್ಲ ವಿವೇಕವಂತರಿಗೂ ಈಗ ಮನದಟ್ಟಾಗಿದೆ. ಆದರೆ ಜಾತಿ ರಾಜಕಾರಣವನ್ನು ಬಿಟ್ಟು ಇನ್ನೆಲ್ಲ ರಾಜಕಾರಣವನ್ನೂ ಮರೆತಂತಿರುವ ಸಿದ್ಧರಾಮಯ್ಯ ತಮ್ಮ ಜೊತೆಗೆ ಕಾಂಗ್ರೆಸ್ಸನ್ನೂ ವಿನಾಶದ ಅಂಚಿಗೆ ಒಯ್ಯುತ್ತಿರುವಂತೆ ಕಾಣುತ್ತಿದೆ.

ಸಿದ್ಧರಾಮಯ್ಯನವರ ಸರ್ಕಾರ ರೈತರ ಆತ್ಮಹತ್ಯೆ ಸಮಸ್ಯೆಯಯನ್ನು ಮುಖಾಮುಖಿಯಾದ ರೀತಿಯನ್ನೇ ನೋಡಿ. ನಮ್ಮ ಮಾಧ್ಯಮಗಳು ಅಗ್ಗದ ಜನಪ್ರಿಯತೆಗಾಗಿ ರೈತನನ್ನು 'ಅನ್ನದಾತ' ಎಂದು ಕರೆದ ಸರಳೀಕೃತ ಅಭಿದಾನದ ಒತ್ತಡಗಳಿಗೆ ಸಿಕ್ಕಂತೆ ಕಂಡ ಸರ್ಕಾರ, ರೈತರ ಆತ್ಮಹತ್ಯೆಗಳ ಮೂಲದಲ್ಲಿರುವ ಸಮಸ್ಯೆಯ ತಾತ್ವಿಕತೆಯನ್ನು ಗುರುತಿಸುವ ಪ್ರಯತ್ನವನ್ನೇ ಮಾಡದೆ, ಸಾರಾಸಗಟಾಗಿ ಸಾಲಬಡ್ಡಿ ಮನ್ನಾ, ಪರಿಹಾರ ಮೊತ್ತದ ಏರಿಕೆ ಹಾಗೂ ಕುಟುಂಬ ಮಾಸಾಶನಗಳಂತಹ ಹಣಕಾಸಿನ ಪರಿಹಾರವನ್ನು ಘೋಷಿಸಿರುವುದು ಅದರ ಬೌದ್ಧಿಕ ದಾರಿದ್ರ್ಯವನ್ನಷ್ಟೇ ಸೂಚಿಸುತ್ತದೆ. ರೈತರ ಆತ್ಮಹತ್ಯೆ ಒಂದು ಸಂಕೀರ್ಣ ಸಮಸ್ಯೆಯಾಗಿದ್ದು, ಅವರ ಸಾಲದ ಹಿಂದೆ ತತ್ಕಾಲೀನ ಹಣಕಾಸಿನ ನೆರವು ಪರಿಹರಿಸಬಹುದಾದ ಅಂಶಗಳಿಗೆ ಹೊರತಾದ ಹಲವು ಅಂಶಗಳಿವೆ ಎಂಬುದನ್ನು ಸರ್ಕಾರ ಗಮನಿಸದೇ ಹೋಗಿದೆ. ಇದು ರೋಗ ಲಕ್ಷಣವನ್ನೇ ರೋಗವೆಂದು ತೀರ್ಮಾನಿಸಿ ಕೊಡುವ ಅಡ್ಡನಾಡಿ ವೈದ್ಯನೊಬ್ಬನ ಔಷಧಿ ಅನತಿ ಕಾಲದಲ್ಲೇ ರೋಗಿಯನ್ನು ಕೊಲ್ಲುವಂತೆ ಸರ್ಕಾರದ ಈ ಸುಲಭ ಪರಿಹಾರ ನಮ್ಮ ಕೃಷಿ ಸಮುದಾಯ-ಸಂಸ್ಕೃತಿಯನ್ನೇ ಕೊಲ್ಲಬಲ್ಲುದಾಗಿದೆ.

ಈ ಸಂದರ್ಭದಲ್ಲಿ ಸರ್ಕಾರ ಹಾಕಿಕೊಳ್ಳಬೇಕಿದ್ದ ಮುಖ್ಯ ಪ್ರಶ್ನೆ ಇದಾಗಿತ್ತು: ಇಂದಿನ ರೈತನನ್ನು ರೈತ ಎಂಬ ಶಬ್ದದ ಸಾಂಪ್ರದಾಯಿಕ ಅರ್ಥದಲ್ಲಿ ಮಾತ್ರ ನೋಡಲು ಸಾಧ್ಯವೇ? ಜೊತೆಗೆ ಈ ಪ್ರಶ್ನೆಗಳನ್ನೂ: ಆತನ ಕೃಷಿಯೇತರ 'ಹವ್ಯಾಸ'ಗಳಿಗೆ ಅವನು ಹಕ್ಕುದಾರನಾದರೂ, ಅವುಗಳಿಗೆ ಸರ್ಕಾರ ಹೊಣೆಯಾಗಬೇಕೆ? ರೈತನೇಕೆ ತನ್ನ ಜಮೀನಿನ, ತನ್ನ ಕೃಷಿಯ ಇತಿ-ಮಿತಿಗಳನ್ನು ಮೀರಿದ ಹಣಕಾಸಿನ ಬಲೆಗೆ ಬೀಳುತ್ತಿದ್ದಾನೆ? ಇಂತಹ ಬೆಳವಣಿಗೆಗಳ ಹಿಂದೆ ಇರುವ ಸಾಮಾಜಿಕ, ಸಾಂಸ್ಕೃತಿಕ ಒತ್ತಡಗಳಾದರೂ ಎಂತಹವು? ಇದಕ್ಕೆ ಪ್ರಸಕ್ತ ಶೈಲಿಯ ರಾಜಕಾರಣ ಎಷ್ಟು ಕಾರಣ?

ಸರಣಿ ಆತ್ಮಹತ್ಯೆಗಳಂತಹ ಗಂಭೀರ ಪರಿಸ್ಥಿತಿಯ ಸಂದರ್ಭದಲ್ಲೂ ಇಂತಹ ಒಂದು ಸಣ್ಣ(ಮಾದರಿ) ಪ್ರಮಾಣದದ್ದಾದರೂ ಅಧ್ಯಯನಕ್ಕೂ ಮುಂದಾಗದೆ ಇಂತಹ ಸುಲಭ ಪರಿಹಾರಕ್ಕೆ ಮುಂದಾಗುವ (ಅದೂ ರಾಹುಲ್‌ಗಾಂಧಿಯವರ ಪ್ರೇರಣೆ ಎಂಬ *ಜೀಹುಜೂರ್* ರಾಜಕಾರಣದ ಹೆಸರಿನಲ್ಲಿ) ರಾಜಕಾರಣ ಅತ್ಯಂತ ಬೇಜವಾಬ್ದಾರಿತನದ್ದೇ ಎಂದು ಹೇಳಬೇಕು. ಸಿದ್ಧರಾಮಯ್ಯನವರು ರಚಿಸಿಕೊಂಡಿರುವ ಸಂಪುಟ ಮತ್ತು ಅದನ್ನು ಅಷ್ಟು ಸುಲಭವಾಗಿ ನಿವಾರಿಸಿಕೊಳ್ಳಲಾಗದಂತೆ ಅವರು ಸಿಕ್ಕಿಬಿದ್ದಿರುವ ರಾಜಕಾರಣ ಕರ್ನಾಟಕದ ಪಾಲಿನ ಒಂದು ದೊಡ್ಡ ದೌರ್ಭಾಗ್ಯವೇ ಆಗಿದೆ.

-ಸಂಪಾದಕ

ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಕಳೆದ ಸಂಚಿಕೆಯ ನಿಮ್ಮ ಸಂಪಾದಕೀಯ ಟಿಪ್ಪಣಿಗಳಲ್ಲಿ ಆರೆಸ್ಸೆಸ್ ಮತ್ತು ಸರ್ಕಾರದ ನಡುವಣ ಸಂಬಂದದ ಬಗ್ಗೆ ನೀವು ಎತ್ತಿರುವ ಪ್ರಶ್ನೆ ತುಂಬ ಮೂಲಭೂತವಾದದ್ದು ಮತ್ತು ಮಹತ್ವದ್ದು. ಯಾವುದೇ ಜನಾದೇಶವಿಲ್ಲದೆ ರಾಷ್ಟ್ರದ ದಿಕ್ಕನ್ನು ನಿರ್ಣಾಯಕವಾಗಿ ಬದಲಾಯಿಸುವ ಅಪಾಯಕಾರಿ ಹುನ್ನಾರ ಗುಪ್ತವಾಗಿ ಜಾರಿಯಲ್ಲಿದ್ದಂತಿದೆ. ಆದರೆ ನೀವೇ ಸೂಚಿಸಿದಂತೆ ಇದನ್ನು ಪ್ರಶ್ನಿಸಬೇಕಾದ ವಿರೋಧ ಪಕ್ಷಗಳು, ವಿಶೇಷವಾಗಿ ಕಾಂಗ್ರೆಸ್ ನರಸತ್ತು ಬಿದ್ದಂತಿವೆ. ಹಾಗಾಗಿ ಈಗ ರಾಜಕೀಯೇತರ ಜನಪರ ಮುಖಂಡರ ಜವಾಬ್ದಾರಿ ಹೆಚ್ಚಿದೆ. ಎಸ್.ಆರ್. ಹಿರೇಮಠ, ಎಚ್.ಎಸ್. ದೊರೆಸ್ವಾಮಿ, ದೇವನೂರ ಮಹಾದೇವ, ಕಡಿದಾಳು ಶಾಮಣ್ಣ ಮುಂತಾದವರು ಈಗ ಜನರನ್ನು ಎಚ್ಚರಿಸುವ ಕೆಲಸಕ್ಕೆ ಮುಂದಾಗಬೇಕಿದೆ.

-ಎಂ.ಆರ್. ಕೃಷ್ಣಯ್ಯಗೌಡ, ಮೈಸೂರು,

ದೇವರಾಜ ಅರಸರನ್ನು ಕುರಿತ ಎನ್.ಎಸ್. ಶಂಕರ್ ಅವರ ನೆನಪು ಕುತೂಹಲಕಾರಿಯಾಗಿದೆ. ಅವರು ಸಾಂಸ್ಥೀಕರಿಸಿರೆಂದು ಹೇಳಲಾದ ಭ್ರಷ್ಟಾಚಾರದ ಮಾತು ಅತ್ತಿರಲಿ, ಆ ಭ್ರಷ್ಟಾಚಾರವನ್ನು ಅಗತ್ಯ ಮಾಡಿದ ರಾಜಕಾರಣ ಸೃಷ್ಟಿಸಿದ ಹಿಂದುಳಿದ ವರ್ಗಗಳ ನಾಯಕರು ಅಂದು ಅರಸರಿಗೆ ಏನು ಮಾಡಿದರು ಮತ್ತು ಇಂದು ಅವರು ಏನಾಗಿದ್ದಾರೆ ಮತ್ತು ಏಕೆ ಎಂಬುದರ ಬಗ್ಗೆಯೂ ಶಂಕರ್ ಬರೆದಿದ್ದರೆ ಚೆನ್ನಿತ್ತು. ಇನ್ನು ಮೀಸಲಾತಿ ಕುರಿತ ಅವರ 'ವಿಭಿನ್ನ ಅನುಭವ ಲೋಕಗಳು ಮೇಳವಿಸಿ ಇಡೀ ಸಮಾಜ ಮೈಮುರಿದೇಳುವ ರೋಮಾಂಚನದ ಕಲ್ಪನೆ'ಯ ಮಾತು ಇಂದು ಸರ್ಕಾರಿ ಕಛೇರಿಗಳನ್ನು ಹೊಕ್ಕಾಗ ಭೋಳೆ ಮಾತು ಮಾತ್ರ ಎನಿಸುತ್ತದೆ. ಇಂತಹ ಮಾತುಗಳ ಕಾಲ ಮುಗಿದಿದೆ.

-ಆರ್. ಎಂ. ಜಾಧವ್, ದಾವಣಗೆರೆ

ಗ್ರೀಸ್ ಮತ್ತು ಚೀನಾದ ಆರ್ಥಿಕ ಕುಸಿತ ಕುರಿತ ಡಾ.ಎಚ್.ಎ. ಶಂಕರನಾರಾಯಣರ ಮತ್ತು 'ಯುವ ಸಮಾಜವಾದಿ ಚಿಂತನ ವೇದಿಕೆ'ಯಲ್ಲಿನ ಮಲೆನಾಡಿನಲ್ಲಿ ಭತ್ತದ ಬೇಸಾಯ ಕುರಿತ ಎನ್. ಪ್ರವೀಣ್ ಕುಮಾರರ ಲೇಖನಗಳು ನನಗೆ ತುಂಬ ಇಷ್ಟವಾದವು. ಪರಸ್ಪರ ವಿರುದ್ಧ ದಿಕ್ಕಿನಲ್ಲಿರುವಂತೆ ತೋರುವ ಈ ಲೇಖನಗಳ ಆಶಯ ಮಾತ್ರ ಒಂದೇ, ಸುಸ್ಥಿರತೆ. ಕೈಗಾರಿಕೆಗಳ ಉದ್ದೇಶ ಎಲ್ಲರಿಗೂ ಉದ್ಯೋಗ ಮತ್ತು ಸ್ವಾವಲಂಬನೆ ಮಾತ್ರವೇ ಹೊರತು, ಶ್ರೀಮಂತಿಕೆಯಲ್ಲ. ಅತಿಯಾದ ಉತ್ಪಾದನೆ ಕೂಡ ಆರ್ಥಿಕ ಕುಸಿತಕ್ಕೆ ಕಾರಣವಾಗಬಲ್ಲುದೆಂದು ಆರ್‌ಬಿಐ ಗವರ್ನರ್('ಮೇಕ್ ಇನ್ ಇಂಡಿಯಾ'ಗೆ ಪ್ರತಿಕ್ರಿಯಿಸುತ್ತಾ) ಹೇಳಿರುವುದನ್ನು ನಾವು ಗಮನಿಸಬೇಕು.

-ಎನ್. ಎಂ. ಕುಲಕರ್ಣಿ, ಹೆಗ್ಗೋಡು

ಅಕ್ಟೋಬರ್ ಸಂಚಿಕೆ ಚೆನ್ನಾಗಿದೆ. ನಿಮ್ಮ ಸಂಪಾದಕೀಯ ಟಿಪ್ಪಣಿಗಳು ಇನ್ನಷ್ಟು ಆಳಕ್ಕಿಳಿಬೇಕಿತ್ತು ಎನಿಸಿತು. 'ಗಾಂಧಿ ಅಂದರೇನು?: ಕೆಲ ಬಿಡಿ ಚಿತ್ರಗಳು', ಲವಣಂ ಮತ್ತು ಶಂಕರನಾರಾಯಣ ಅವರ ಲೇಖನಗಳು ಈಗ ಮುಖ್ಯ ಅನಿಸಿದವು.

-ಎಚ್.ಎಸ್. ರಾಮನಗೌಡ, ಕೊಂಡಿಕೊಪ್ಪ(ನರಗುಂದ)

ರಾಜ್ಯದಲ್ಲಿ ಬಹುತೇಕ ಲೇಖಕ-ಬುದ್ಧಿಜೀವಿಗಳು ಸರ್ಕಾರ ಮತ್ತು ಅಧಿಕಾರಸ್ಥರನ್ನು ಓಲೈಸುತ್ತಿರುವಾಗ ನಿಷ್ಠುರ ವಿಮರ್ಶಾ ಪ್ರಜ್ಞೆ ಮತ್ತು ಸಾಮಾಜಿಕ ಎಚ್ಚರಗಳೊಂದಿಗೆ ಬರುತ್ತಿರುವ 'ಹೊಸ ಮನುಷ್ಯ'ಕ್ಕೆ ನನ್ನ ಶುಭಾಶಯಗಳು.

-ಪ್ರೊ. ಎಂ.ಜಿ. ಚಂದ್ರಶೇಖರಯ್ಯ, ದೊಡ್ಡಬಳ್ಳಾಪುರ

ಕುಪ್ಪಳ್ಳಿಯಲ್ಲಿ ಸಮಾಜವಾದಿ ಅಧ್ಯಯನ ಶಿಬಿರ: ಒಂದು ವರದಿ





ಸೃಷ್ಟಿಯಲ್ಲಿ ಎಲ್ಲವೂ ಎಲ್ಲದರೊಂದಿಗೆ ಒಟ್ಟಿಗೆ ಇರುವುದು ಎಂಬ ಅರಿವೇ ಸಮಾಜವಾದಿ ಅರಿವಾಗಿದ್ದು, ಆಧುನಿಕ ಕನ್ನಡ ಸಾಹಿತ್ಯದ ಮುಖ್ಯ ಕೃತಿಗಳಲ್ಲಿ ಈ ಅರಿವು ತಾನೇ ತಾನಾಗಿ ಅಂತಸ್ಥವಾಗಿದೆ ಎಂದು ಸಂಸ್ಕೃತಿ ಚಿಂತಕ ಲಕ್ಷ್ಮೀಶ ತೋಳ್ಪಾಡಿ ಹೇಳಿದರು. ಅವರು ಕಳೆದ ಅಕ್ಟೋಬರ್ ೧೭ರಂದು ಕುಪ್ಪಳ್ಳಿಯಲ್ಲಿ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನವು ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಸಹಯೋಗದಲ್ಲಿ 'ಆಧುನಿಕ ಕನ್ನಡ ಸಾಹಿತ್ಯ ಮತ್ತು ಸಮಾಜವಾದ' ಎಂಬ ವಿಷಯ ಕುರಿತು ಆಯೋಜಿಸಿದ್ದ ಎರಡು ದಿನಗಳ ಸಮಾಜವಾದಿ ಶಿಬಿರವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ತೋಳ್ಪಾಡಿಯವರು ಮುಖ್ಯವಾಗಿ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನು ಚರ್ಚಿಸುತ್ತಾ, ಅದು ಹೇಳುವ 'ಇಲ್ಲಿ ಯಾರೂ ಮುಖ್ಯರಲ್ಲ. ಯಾರೂ ಅಮುಖ್ಯರಲ್ಲ, ಇಲ್ಲಿ ಯಾವುದೂ ಯಃಕಶ್ಚಿತ್ ಅಲ್ಲ...' ಮುಂತಾದ ಮಾತುಗಳಿಗಿಂತ ಮೌಲಿಕವಾದ ಸಮಾಜವಾದಿ ಆಶಯದ ಹೊಳಹುಗಳು ಹೇಗಿರಲು ಸಾಧ್ಯ ಎಂದು ಪ್ರಶ್ನಿಸಿದರು. ಸಮಾಜವಾದದ ತಾತ್ವಿಕತೆ ಜ್ಞಾನದ ಶ್ರೇಣೀಕರಣವನ್ನು ಪ್ರಶ್ನಿಸಿತ್ತು. ಆಧುನಿಕ ಕನ್ನಡ ಸಾಹಿತ್ಯದ ಮುಖ್ಯ ಲೇಖಕರೆನಿಸಿಕೊಂಡವರೆಲ್ಲ ತಮ್ಮ ಕೃತಿಗಳಲ್ಲಿ ಇದೇ ಕೆಲಸವನ್ನು ಮಾಡಿದ್ದಾರೆ ಎಂದು ಅಭಿಪ್ರಾಯಪಟ್ಟ ಅವರು ಸಾಹಿತ್ಯದಲ್ಲಿ ನಿಜವಾಗಿ ತಲ್ಲಣಗೊಳ್ಳದೆ ಆಡುವ ಯಾವುದೇ ಮಾತನ್ನು ಇಂದು ನಂಬಲಾಗದು ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಕುವೆಂಪು ಪ್ರತಿಷ್ಠಾನದ ಟ್ರಸ್ಟಿ ಮನುದೇವ ಅವರು ತಾವು ಕಂಡ ಕುವೆಂಪು ವ್ಯಕ್ತಿತ್ವದ ಸಂಕ್ಷಿಪ್ತ ಚಿತ್ರ ನೀಡಿದರು. ಶಿಬಿರಕ್ಕೆ ಪೀಠಿಕೆಯಾಗಿ 'ಸಾಮಾಜವಾದವೆಂದರೇನು?' ವಿಷಯವಾಗಿ ಮಾತನಾಡಿದ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನದ ಅಧ್ಯಕ್ಷ ಮತ್ತು ಶಿಬಿರದ ನಿರ್ದೇಶಕ ಡಿ.ಎಸ್. ನಾಗಭೂಷಣ ಅವರು ಸ್ಪರ್ಧಾತ್ಮಕ ಸುಖದ ಹಪಾಹಪಿಯಲ್ಲಿ ತಾನು ನಿಂತಿರುವ ನೆಲವನ್ನೇ ಹಾಳು ಮಾಡಿಕೊಳ್ಳುತ್ತಿರುವ ಆಧುನಿಕ ಬದುಕಿನ ವಿಕಾರಗಳಿಗೆ ಚಿಕಿತ್ಸೆ ನೀಡುವುದೇ ಸಮಾಜವಾದದ ಉದ್ದೇಶವಾಗಿದೆ ಎಂದರು.

ಮೊದಲ ಗೋಷ್ಠಿಯಲ್ಲಿ 'ಕುವೆಂಪು ಸಾಹಿತ್ಯದಲ್ಲಿ ಸಮಾಜವಾದಿ ಆಶಯಗಳು' ಕುರಿತು ಲೇಖಕ ಡಾ. ಜೆ.ಕೆ. ರಮೇಶ್ ಮಾತನಾಡಿ ಕುವೆಂಪು ಅವರನ್ನು ನೇರವಾಗಿ ಸಮಾಜವಾದಿ ಎಂದು ಗುರುತಿಸಲಾಗದೇ ಇದ್ದರೂ ಅವರ ಬದುಕು ಮತ್ತು ಸಾಹಿತ್ಯ ಎರಡರಲ್ಲೂ ಅದರ ಆಶಯಗಳು ಅತ್ಯಂತ ಪ್ರಬಲವಾಗಿ ವ್ಯಕ್ತಗೊಂಡಿರುವುದನ್ನು ಸೋದಾಹರಣವಾಗಿ ವಿವರಿಸಿದರು. ನಂತರದ ಗೋಷ್ಠಿಯಲ್ಲಿ 'ಅನಂತಮೂರ್ತಿ ಸಾಹಿತ್ಯದಲ್ಲಿ ಸಮಾಜವಾದಿ ಆಶಯಗಳು' ಕುರಿತು ತುಮಕೂರು ವಿಶ್ವವಿದ್ಯಾಲಯದ ಡಾ.ಬಿ.ನಿತ್ಯಾನಂದ ಶೆಟ್ಟಿ ಮಾತನಾಡಿ ಆಧುನಿಕ ನಾಗರೀಕತೆಯು ಸಾಂಸ್ಕೃತಿಕ ಅಸ್ಮಿತೆ, ಅನನ್ಯತೆಯನ್ನು ನಾಶಗೊಳಿಸುತ್ತದೆ ಎಂಬ ಲೋಹಿಯಾರ ಚಿಂತನಾ ಪರಂಪರೆ ನಿರ್ವಹಿಸಿದ ಜಾತಿ, ಲಿಂಗ, ಭಾಷೆ, ಧರ್ಮ, ಪ್ರಗತಿ ಕುರಿತಾದ ಬಿಕ್ಕಟ್ಟುಗಳನ್ನೆ ಅನಂತಮೂರ್ತಿಯವರು ತಮ್ಮ ಕೃತಿಗಳಲ್ಲಿ ನಿರ್ವಹಿಸಿದ್ದಾರೆ ಎಂದು ಹೇಳಿದರು.

೧೭ರ ರಾತ್ರಿ ಶಿಬಿರಾರ್ಥಿಗಳಿಗೆ ಅಕಿರ ಕುರೋಸಾವಾನ 'ಡ್ರೀಮ್ಸ್' ಚಿತ್ರದ 'ವಾಟರ್ ಮಿಲ್ ವಿಲೇಜ್' ಭಾಗ ಮತ್ತು ಚಾರ್ಲಿ ಚಾಪ್ಲಿನ್‌ನ 'ದ ಗೋಲ್ಡ್ ರಷ್' ಚಲನಚಿತ್ರಗಳನ್ನು ತೋರಿಸಲಾಯಿತು. ಮಾರನೆಯ ಬೆಳಿಗ್ಗೆ ಶಿಬಿರಾರ್ಥಿಗಳು ಈ ಚಿತ್ರಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು

೧೮ರ ಬೆಳಿಗ್ಗೆ ಮೊದಲ ಗೋಷ್ಠಿಯಲ್ಲಿ 'ಲಂಕೇಶರ ಸಾಹಿತ್ಯದಲ್ಲಿ ಸಮಾಜವಾದಿ ಆಶಯಗಳು' ಕುರಿತು ವಿಮರ್ಶಕಿ ತಾರಿಣಿ ಶುಭದಾಯಿನಿಯವರು ಮಾತನಾಡಿ ಮೂಲತಃ ವ್ಯಕ್ತಿವಾದಿ ಲೇಖಕರಾದ ಲಂಕೇಶ್, ಸಮಾಜವಾದದ ಕುರಿತಂತೆ ಅವರೊಬ್ಬ 'ಒಳಗಿನ ವಿಮರ್ಶಕ' ಆಗಿದ್ದರು ಎಂದರು. ಅವರ ಸಾಹಿತ್ಯದಲ್ಲಿ ಸಮಾಜವಾದಿ ಆಶಯ ಅಂತಸ್ಥವಾಗಿದೆ ಎಂ ತಾರಿಣಿ, ಸಮಾಜವಾದಿ ಆಶಯಗಳು ಸಮಾಜದಲ್ಲಿ ಪ್ರಕಟಗೊಳ್ಳುವ ಹಾದಿಯಲ್ಲಿ ಎದುರಾಗುವ ಬಿಕ್ಕಟ್ಟುಗಳ ನಿಷ್ಠುರ ವಿಮರ್ಶೆ ಲಂಕೇಶರ ಸಾಹಿತ್ಯವನ್ನು ಗಮನಾರ್ಹವನ್ನಾಗಿಸಿದೆ ಎಂದರು.

ಅಂದಿನ ಎರಡನೇ ಗೋಷ್ಠಿಯಲ್ಲಿ 'ತೇಜಸ್ವಿ ಸಾಹಿತ್ಯದಲ್ಲಿ ಸಮಾಜವಾದಿ ಆಶಯಗಳು' ಕುರಿತು ಡಿ.ಎಸ್. ನಾಗಭೂಷಣ ಮಾತನಾಡಿ, ಲೋಹಿಯಾ ವಿಚಾರಗಳ ದಟ್ಟ ಪ್ರಭಾವದಲ್ಲಿ ಬರೆಯಲಾರಂಭಿಸಿದ ತೇಜಸ್ವಿ ತಾವು ಕಟ್ಟಿಕೊಟ್ಟ ವೈವಿಧ್ಯಮಯ ಮತ್ತು ಜೀವಂತ ಗ್ರಾಮೀಣ ಪಾತ್ರಗಳ ಮೂಲಕ ಜ್ಞಾನ ಮತ್ತು ಪ್ರತಿಭೆಗಳ ಪಾರಂಪರಿಕ ಶ್ರೇಣೀಕರಣದ ಹಿಂದಿನ ಹುಸಿತನವನ್ನು ಬಯಲು ಮಾಡಿದರು ಎಂದರು. ತಮ್ಮ ಕೃತಿಗಳಲ್ಲಿ ಮನುಷ್ಯರ ನಡುವಣ ಸಂಬಂಧವನ್ನು ಅನ್ವೇಷಿಸುತ್ತಾ, ಮುಂದೆ ಮನುಷ್ಯ ಮತ್ತು ಜೀವ ಜಗತ್ತಿನ ನಡುವಣ ಸಂಬಂಧಗಳ ಅನ್ವೇಷಣೆ ಕಡೆ ಹೊರಳಿದ ತೇಜಸ್ವಿ, ಕೊನೆಗೆ 'ಮಾಯಾಲೋಕ'ದಲ್ಲಿ ಈ ಜಗತ್ತಿನ ಧಾರಣಶಕ್ತಿಗಳ ಮೂಲಗಳ ಅನ್ವೇಷಣೆಗೆ ತೊಡಗುವ ಮೂಲಕ ಸಮಾಜವಾದದ ಅಧ್ಯಾತ್ಮಿಕ ಮುಖವನ್ನೂ ಕಟ್ಟಿಕೊಟ್ಟರು ಎಂದು ಅವರು ಹೇಳಿದರು.

ಕೊನೆಯ ಗೋಷ್ಠಿಯಲ್ಲಿ 'ದೇವನೂರು ಮಹಾದೇವ ಅವರ ಸಾಹಿತ್ಯದಲ್ಲಿ ಸಮಾಜವಾದಿ ಆಶಯಗಳು' ಕುರಿತು ವಿಮರ್ಶಕ ಡಾ.ರಾಜೇಂದ್ರ ಚೆನ್ನಿ ಮಾತನಾಡಿ ಅಸಮಾನತೆಯ ಬಗ್ಗೆ ತೀವ್ರವಾದ ಅಸಮಾಧಾನ, ಆಕ್ರೋಶ, ಸಮಾನತೆ ಕುರಿತು ಒಳಗಿನಿಂದ ಮೂಡುವ ತೀವ್ರ ತುಡಿತ ಮಾತ್ರ ಸಮಾಜವಾದಿ ಚಿಂತನೆಯನ್ನು ಸ್ಫೋಟಗೊಳಿಸಬಲ್ಲದು ಎಂಬ ನಿಲುವನ್ನು ಮಹಾದೇವರ ಸೃಜನಶೀಲ ಸಾಹಿತ್ಯದಲ್ಲಿ ಕಾಣಬಹುದು ಎಂದರು. ಅನ್ಯಾಯ ಮಾಡಿದವರಿಂದಲೇ ನ್ಯಾಯ ಕೇಳುವ ಗಾಂಧಿ ಮಾರ್ಗದ ವಿಶಿಷ್ಟತೆ ದೇವನೂರರ ಸಾಹಿತ್ಯದಲ್ಲಿ ಸಮಾಜವಾದಿ ಪ್ರೀತಿಯ ರೂಪದಲ್ಲಿ ವ್ಯಕ್ತವಾಗಿದೆ ಎಂದ ಅವರು ಬುದ್ಧನ 'ಕಾರುಣ್ಯ'ದ ಶಕ್ತಿ ಅವರ ಬಹುಪಲುಸಾಹಿತ್ಯವನ್ನು ಕಟ್ಟಿದೆ ಎಂದು ಅಭಿಪ್ರಾಯಪಟ್ಟರು.

ನಂತರ ಶಿಬಿರಾರ್ಥಿಗಳು ಶಿಬಿರ ಕುರಿತ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು. ತೀರ್ಥಹಳ್ಳಿಯ ರೈತರೂ ಸಮಾಜವಾದಿಯೂ ಆದ ಕಡಿದಾಳು ದಯಾನಂದ ಶಿಬಿರದ ಸಮಾರೋಪ ಭಾಷಣ ಮಾಡಿ, ಸಮಾಜವಾದಿ ಪಕ್ಷದಲ್ಲಿನ ತಮ್ಮ ಆತ್ಮೀಯ ನೆನಪುಗಳನ್ನು ಹಂಚಿಕೊಂಡರು. ರೈತ ಮುಖಂಡ ಹಾಗೂ ಹಿರಿಯ ಸಮಾಜವಾದಿ ಕಡಿದಾಳು ಶಾಮಣ್ಣ ಅಧ್ಯಕ್ಷತೆ ವಹಿಸಿದ್ದರು.

ಲೋಹಿಯಾ ಜನ್ಮ ಶತಾಬ್ದಿ ಪ್ರತಿಷ್ಠಾನದ ಟ್ರಸ್ಟಿಗಳಾದ ಸವಿತಾ ನಾಗಭೂಷಣ, ಎಂ. ರಾಘವೇಂದ್ರ, ಡಿ.ಜಿ. ಪುಟ್ಟರಾಜು ಮತ್ತು ಎಂ. ರಾಜು ಅವರು ಶಿಬಿರದ ಉಸ್ತುವಾರಿ ವಹಿಸಿದ್ದರು. ರಾಜ್ಯದ ವಿವಿಧ ಭಾಗಗಳಿಂದ ಬಂದ ೭೦ಕ್ಕೂ ಹೆಚ್ಚು ಶಿಬಿರಾರ್ಥಿಗಳು ಪ್ರತಿ ಗೋಷ್ಠಿಯ ನಂತರ ನಡೆದ ಚರ್ಚೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು.

(ಚಿತ್ರಗಳು ಮತ್ತು ವರದಿ: ಎಂ. ರಾಘವೇಂದ್ರ)

ನಮ್ಮ ಸಮಾಜವಾದಿಗಳು : ಸಮಾಜವಾದಿ ಸರ್ವೋದಯದ ವೀರಯೋಧ ಗರುಡ ಶರ್ಮ



ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಯುವಪೀಳಿಗೆ ನೆಹರೂ-ಜೆಪಿ ಅಭಿಮಾನಿ ಬಳಗಗಳಾಗಿ ದೇಶದೆಲ್ಲೆಡೆ ಹರಡಿ ಹಂಚಿ ಹೋಗಿತ್ತು. ಕರ್ನಾಟಕದ ಅನೇಕ ಯುವಕರು ಇದಕ್ಕೆ ಹೊರತಾಗಿರಲಿಲ್ಲ. ಗರುಡ ಶರ್ಮರು ಅಂತಹವರಲ್ಲಿ ಒಬ್ಬರು. ಶರ್ಮರು ಮೊದಲು ತಮ್ಮ ಸಮಾಜವಾದಿ ಕೆಲಸಗಳಿಗಾಗಿ ಆರಿಸಿಕೊಂಡ ಕ್ಷೇತ್ರ ಧಾರವಾಡದ ಬಳಿಯ ಗರಗ. ಈ ಗ್ರಾಮದಲ್ಲಿ ನಡೆಸಿದ ಸುಧಾರಣೆಯ ಕೆಲಸಗಳಿಂದ ಅವರು ಅಲ್ಲಿಯ ಎಲ್ಲರ ಆದರ-ಗೌರವಗಳಿಗೆ ಪಾತ್ರರಾದರು. ಅವರು ಅಲ್ಲಿ ಶೋಷಣೆಗೆ, ಅಜ್ಞಾನಕ್ಕೆ ತುತ್ತಾಗಿದ್ದವರಲ್ಲಿ ಜಾಗೃತಿ ಮೂಡಿಸಿ, ಗೇಣಿದಾರರನ್ನು ಸಂಘಟಿಸಿ, ಭೂಸುಧಾರಣೆಯ ಸಂಘರ್ಷಕ್ಕೆ ನಾಂದಿ ಹಾಡಿದರು. ಆದುದರಿಂದಲೇ ಗರುಡಶರ್ಮರಿಗೆ ಕರ್ನಾಟಕದಲ್ಲಿ ಗೇಣಿದಾರರ ಚಳವಳಿಯ ಜನಕನೆಂಬ ಹೆಸರು. ನಂತರ, ಶಿವಮೊಗ್ಗ ಜಿಲ್ಲೆಯಲ್ಲಿ ನಡೆದ ಕಾಗೋಡು ಸತ್ಯಾಗ್ರಹದಲ್ಲಿ ಕೂಡ ಅವರು ಪಾಲ್ಗೊಂಡರು. ಆ ಅವಧಿಯಲ್ಲಿ ಲೋಹಿಯಾ ಮತ್ತು ಗೋಪಾಲಗೌಡರ ಸಹವರ್ತಿಯಾಗಿದ್ದ ಶರ್ಮರು ಕಾಗೋಡಿನ ದೀವರ ಮಕ್ಕಳಿಗೆ ಶುಚಿಯ ಪಾಠ ಹೇಳಿದರು, ಅವರನ್ನು ಶಾಲೆಯ ಮೆಟ್ಟಿಲು ಹತ್ತಿಸಿದರು. ತಮ್ಮ ನಿಕಟ ಸಹವರ್ತಿಗಳಾಗಿದ್ದ ಖಾದ್ರಿ ಶಾಮಣ್ಣ ಮತ್ತು ಬಾಸು ಕೃಷ್ಣಮೂರ್ತಿಯವರಂತೆ ತಾತ್ವಿಕವಾಗಿ ಗರುಡಶರ್ಮ ಸಮಾಜವಾದಿಯೇ ಆಗಿದ್ದರೂ, ಜೆ.ಪಿ. ಸರ್ವೋದಯದ ಕಡೆ ಸರಿದಾಗ ಈ ತ್ರಿಮೂರ್ತಿಗಳೂ ಹಿಂಬಾಲಿಸಿದರು. ಆದರೆ, ಸಮಾಜವಾದಿಗಳ ಜತೆ ನಂಟು ಮುಂದುವರೆದೇ ಇತ್ತು.

ಗರಗ ಈಗ ನಮ್ಮ ಹೆಮ್ಮೆಯ ರಾಷ್ಟ್ರಧ್ವಜ ತಯಾರಿಸುವ ದೇಶದಲ್ಲೇ ಏಕೈಕ ಖಾದಿ ಕೇಂದ್ರ ಹೊಂದಿರುವ ಊರು ಎಂದು ಖ್ಯಾತಿವೆತ್ತಿದೆ. ಆ ಊರಿಗೆ ಗಾಂಧಿ ವಿಚಾರಧಾರೆ ಹರಿಯಿಸಿದವರು ಶರ್ಮರು. ಊರಿನಲ್ಲಿ ಅಮಾವಾಸ್ಯೆಯ ದಿನ ಸಾಮೂಹಿಕ ವಿವಾಹ ಏರ್ಪಡಿಸಿ, ಜಯಪ್ರಕಾಶ್ ದಂಪತಿಗಳನ್ನು ಕರೆಸಿಕೊಂಡು ಅವರು ವಧೂವರರನ್ನು ಹರಸುವಂತೆ ಮಾಡಿದವರು ಶರ್ಮರು. ಅಂದು ಗ್ರಾಮದ ಮನೆಯವರೆಲ್ಲರೂ ತಂತಮ್ಮ ರೊಟ್ಟಿ ಊಟ ತಂದು ಒಟ್ಟಾಗಿ ಉಂಡರು. ಅಷ್ಟೇ ಅಲ್ಲ, ಅವರು ಊರಿನ ಬಡ್ಡಿ ಸಾಹುಕಾರರ ವಿರುದ್ಧ ಜನರನ್ನು ಸಂಘಟಿಸಿದರು. ಹಾಗೇ ದೇವಸ್ಥಾನಗಳಲ್ಲಿ ನಡೆಯುತ್ತಿದ್ದ ಕೋಣನ ಬಲಿ ವಿರುದ್ಧ ಯುವಜನರಲ್ಲಿ ಜಾಗೃತಿ ಉಂಟು ಮಾಡಿ ಅದನ್ನು ತಪ್ಪಿಸಿದ ಸಾಹಸಕ್ಕೂ ಅವರು ಕೈಹಾಕಿದರು. ಸಾಮೂಹಿಕ ವಿವಾಹ, ಶಾಲೆಗಳ ಸ್ಥಾಪನೆ ಮತ್ತು ಭೂದಾನ ಅವರು ಅಲ್ಲಿ ಆರಂಭಿಸಿದ ಇತರ ವಿಧಾಯಕ ಕಾರ್ಯಕ್ರಮಗಳು

ಗರುಡಶರ್ಮರ ತಂದೆಯ ಹೆಸರು ಆಳಸಿಂಗಾಚಾರ್. ಹಾಸನದ ಪ್ರಮುಖ ವಕೀಲರು. ಹಾಸನದ ನಾರ್ತನ್ ಎಕ್ಸ್‌ಟೆನ್ಶನ್‌ನಲ್ಲಿ ತೆಂಗಿನಸಾಲು ಮರಗಳ ಮನೆಯವರು ಎಂದೇ ಪ್ರಸಿದ್ಧಿ. ಶರ್ಮರ ಸೋದರ ರಂಗಾ. ಅವರೂ ಲಾಯರ್. ಹಾಸನಕ್ಕೆ ಒಂದು ಮೈಲು ದೂರದಲ್ಲಿ ತೋಟ. ತಂದೆ ತೀರಿದಾಗ ಪಾಲಾಯಿತು. ಆದರೆ ಗರುಡರು ತಮ್ಮ ಪಾಲು ಬೇಡ ಎಂದರು.

೧೫ನೇ ವಯಸ್ಸಿಗೆ ಮನೆ ತೊರೆದು ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯರಾಗಿ. ಶಾಲೆಗೆ ಹೋಗಲಿಲ್ಲ. ಆದರೆ, ಕನ್ನಡವಲ್ಲದೆ, ಹಿಂದಿ ಭಾಷೆಯಲ್ಲಿ ನಿರರ್ಗಳ ಮಾತುಗಾರಿಕೆ. ಇಂಗ್ಲೀಷ್ ಜ್ಞಾನವೂ ಇತ್ತು. ಎತ್ತರದ ನಿಲುವು. ತಾವೇ ಹೊಲಿದು ಹಾಕಿಕೊಳ್ಳುತ್ತಿದ್ದ ಭಾರವಾದ ಚಪ್ಪಲಿಗಳು. ಒಂದು ಟವೆಲ್, ಎರಡು ಪಂಚೆ, ಎರಡು ನಿಕ್ಕರ್‌ಗಿಂತ ಹೆಚ್ಚಿನ ಬಟ್ಟೆ ಇಲ್ಲ. ಬೇಕೂ ಇಲ್ಲ. ಇತರೆ ಸ್ವಾತಂತ್ರ್ಯ ಹೋರಾಟಗಾರರಂತೆ ಇವರು ಯಾವ ಪಿಂಚಣಿಗೂ ಕೈ ಒಡ್ಡಲಿಲ್ಲ. ಯಾರಿಂದಲೂ ಒಂದು ಚಿಕ್ಕಾಸು ಅಪೇಕ್ಷಿಸಲಿಲ್ಲ. ಪ್ರೀತಿಯಿಂದ ಮಿತ್ರರ, ಅವರ ಮಕ್ಕಳ ಮನೆಗಳಲ್ಲಿ ಇದ್ದು ಹೋಗುತ್ತಿದ್ದರು. ಘಟಾನುಘಟಿ ಆಳು. ಧ್ವನಿಯೂ ಅಷ್ಟೇ, ದೊಡ್ಡ ಗಂಟಲಿನದು. ಕೊನೆಯ ದಿನಗಳನ್ನು ಗಾಂಧಿ ಭವನದ ವೃದ್ಧಾಶ್ರಮದಲ್ಲೇ ಕಳೆದರು. ಒಮ್ಮೆ ಅಲ್ಲಿ ಅವರನ್ನು ಕಂಡು ಏನು ಬೇಕು ಎಂದಾಗ 'ಒಂದೆರಡು ಪರಂಗಿ ಹಣ್ಣು ತಾರಯ್ಯ' ಎಂದರು.

ಹೈದರಾಬಾದ್ ವಿಮೋಚನೆಗಾಗಿ ನಡೆದ ರಜಾಕರ್ ಚಳವಳಿ ಸಂಬಂಧ ನಿಜಾಂ ಸರ್ಕಾರ ಕೂಡ ಗರುಡರನ್ನು ಗಡೀಪಾರು ಮಾಡಿತ್ತು. ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಮೈಸೂರು ಪ್ರಾಂತ್ಯಕ್ಕೆ ಜವಾಬುದಾರಿ ಸರ್ಕಾರಕ್ಕಾಗಿ ಹೋರಾಟ ನಡೆಯಿತು. ಅದರಲ್ಲಿ ಶರ್ಮರು ಧಾರವಾಡದಿಂದ ದೊಡ್ಡ ಸಂಖ್ಯೆಯಲ್ಲಿ ಯುವಕರನ್ನು ಸೇರಿಸಿ ಪ್ರಮುಖ ಪಾತ್ರ ವಹಿಸಿದರು. ಸ್ವಾತಂತ್ರ್ಯ ಬಂದ ಮೇಲೂ ಅನೇಕ ಸಲ ಜೈಲುವಾಸ ಅನುಭವಿಸಿದ ಅವರನ್ನು ಧಾರವಾಡ ಜಿಲ್ಲೆಯಲ್ಲಿ ರೈತ ಸಂಘಟನೆ ಮಾಡಿದ್ದಕ್ಕೆ ಮೊರಾರ್ಜಿ ದೇಸಾಯಿ ನೇತೃತ್ವದ ಅಂದಿನ ಮಹಾರಾಷ್ಟ್ರದ ಕಾಂಗ್ರೆಸ್ ಸರ್ಕಾರವೇ ಅವರನ್ನು ಗಡೀಪಾರು ಮಾಡಿತು.

ಇಂದಿರಾಗಾಂಧಿ ಅವರು ತಂದ ತುರ್ತುಪರಿಸ್ಥಿತಿಯಲ್ಲೂ ತುರಂಗವಾಸ ಅನುಭವಿಸಿದರು. ಅವರು ಮಾಡಿದ ಅಪರಾಧವೆಂದರೆ ಅವರೂ, ಇನ್ನೋರ್ವ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿಯವರೂ ಸೇರಿ ಇಂದಿರಾ ಗಾಂಧಿಯವರಿಗೆ 'ನೀವು ವಸಾಹತುಶಾಹಿ ಬ್ರಿಟಿಷ್ ಪ್ರಭುತ್ವವನ್ನು ಮೀರಿಸಿದ ಭಯೋತ್ಪಾದನೆ ಮಾಡಿ ಜನರನ್ನೂ, ಕೊನೆಗೆ ಪತ್ರಿಕೆಯವರನ್ನೂ ಅಡಗಿಸಿಡಲು ಹೊರಟಿದ್ದೀರಿ. ನೀವು ಈ ನಿಮ್ಮ ನೀತಿಯನ್ನು ಮುಂದುವರಿಸುವುದಾದರೆ ನಾನು ಹಳ್ಳಿಯಿಂದ ಹಳ್ಳಿಗೆ, ಮನೆಯಿಂದ ಮನೆಗೆ ಹೋಗಿ 'ಇಂದಿರಾಗಾಂಧಿಯವರು ತಪ್ಪು ಹೆಜ್ಜೆ ಇಟ್ಟಿದ್ದಾರೆ' ಎಂದು ಸಾರಿ ಹೇಳುತ್ತೇವೆ' ಎಂಬ ಪತ್ರ ಬರೆದದ್ದು.. ಈ ಪತ್ರ ಕಳುಹಿಸಿದ ನಂತರ ಒಂದು ಸಭೆಯನ್ನು ಬಸವನಗುಡಿ, ಟ್ಯಾಗೂರ್ ಪಾರ್ಕಿನಲ್ಲಿ ಇಬ್ಬರೂ ಸೇರಿ ನಡೆಸಿದರು. ಪೊಲೀಸರು ಇಬ್ಬರನ್ನೂ ಸೆರೆಹಿಡಿದು ಸೆಂಟ್ರಲ್ ಜೈಲ್‌ನಲ್ಲಿಟ್ಟರು. ಆದರೆ ಇವರ ಮೇಲೆ ಪೋಲೀಸರು ಹಾಕಿದ ಡಿಐಆರ್ ಖಟ್ಲೆ ನ್ಯಾಯಾಲಯದಲ್ಲಿ ಬಿದ್ದುಹೋಗಿ ನಾಲ್ಕು ತಿಂಗಳುಗಳ ನಂತರ ಇಬ್ಬರೂ ಬಿಡುಗಡೆಯಾದರು.

ಶರ್ಮರ ಹಿರಿಯ ಸಮಾಜವಾದಿ ಒಡನಾಡಿ ಸುಬ್ರಹ್ಮಣ್ಯಂ ತಮ್ಮ ಗೆಳೆಯನ ವ್ಯಕ್ತಿತ್ವ ಬಿಡಿಸಿಟ್ಟಿದ್ದು ಹೀಗೆ: "ಗರುಡರಿಗೆ ಎಲ್ಲವನ್ನೂ ತಿಳಿದುಕೊಳ್ಳುವ ಅಭಿಲಾಷೆ. ಚಿಕಿತ್ಸಕ ಮನಸ್ಸು. ಗಾಂಧಿ, ವಿನೋಬಾ ಪ್ರಭಾವದ ನಂತರ ಸ್ವಾತಂತ್ರ್ಯ ಬರುವ ವೇಳೆಗೆ ಸಮಾಜವಾದಿ ಚಿಂತನೆ ಮೈಗೂಡಿಸಿಕೊಂಡರು. ನಂತರ ಭೂದಾನ ಚಳುವಳಿಯಲ್ಲಿ ವಿನೋಬಾ, ಜೆ.ಪಿ. ಜತೆ, ಕಾಲ್ನಡಿಗೆ ಯಾತ್ರೆ, ಬಿಹಾರದ ಸಮನ್ವಯ ಆಶ್ರಮದಲ್ಲಿದ್ದಾಗ ಭೂ ಮಾಲೀಕರ ವಿರುದ್ಧ ಹೋರಾಡಿದ್ದರು. ಬಿಹಾರದ ಭೂಮಾಲೀಕರು ತಮ್ಮ ಜಮೀನುಗಳನ್ನು ಟ್ರಸ್ಟ್ ಮಾಡಿ ಬಿಹಾರ ಭೂ ಗೇಣಿ ಕಾಯಿದೆ ಅಡಿ ಜಮೀನು ಕೊಡದೇ ಹೋದಾಗ ಈ ಹೋರಾಟ ನಡೆಸಿದರು."

ಸ್ವಾತಂತ್ರ್ಯ ಬಂದ ತರುಣದಲ್ಲಿ ಬೆಂಗಳೂರಿನ ಬಳೆಪೇಟೆ ಸೋಷಲಿಸ್ಟ್ ಪಾರ್ಟಿ ಆಫೀಸಿನಲ್ಲೇ ವಾಸವಿರಲಿ, ಗೆಳೆಯನ ಮನೆಯಲ್ಲಿ ತಂಗಿರಲಿ, ಸರ್ವೋದಯಕ್ಕೆ ಬಂದ ಮೇಲೆ ಆಶ್ರಮಗಳಲ್ಲಿ ಅಥವಾ ಗಾಂಧಿ ಭವನಗಳಲ್ಲೇ ಇರಲಿ, ಸದಾ ದೇಶದ ಚಿಂತನೆ ಹಾಗೂ ಆ ಸಂಬಂಧದ ಎಲ್ಲ ಚಳವಳಿಗಳಲ್ಲಿ ಉತ್ಸಾಹದ ಪಾತ್ರ. ಜೆ.ಪಿ. ಬಿಹಾರದಲ್ಲಿ ಸಂಪೂರ್ಣ ಕ್ರಾಂತಿ ಸಂಘರ್ಷ ಆರಂಭಿಸಿದಾಗ ಅವರ ಜತೆಯೇ ಶರ್ಮರು.

ಅಕ್ಟೋಬರ್ ೧೧, ೧೯೯೮ರಂದು ಸಂಜೆ ಬೆಂಗಳೂರಿನ ಬಸವನಗುಡಿ ನ್ಯಾಷನಲ್ ಕಾಲೇಜಿನಲ್ಲಿ ಲೋಕನಾಯಕ ಜಯಪ್ರಕಾಶ್ ನಾರಾಯಣರ ಜನ್ಮದಿನಾಚರಣೆ ಸಮಾರಂಭ. 'ನಾವು ದಲ್ಲಾಳಿ ಸರ್ಕಾರಕ್ಕಾಗಿ ಹೋರಾಡಲಿಲ್ಲ. ಗಾಂಧೀನ ಮರೆತಿರುವ ಹೆಂಡದ ಸರ್ಕಾರ ನಮಗೆ ಬೇಡ.' ಎಂದು ಶರ್ಮರು ಗುಡುಗಿದಾಗ, ಎಲ್ಲರೂ ತಬ್ಬಿಬ್ಬು. ನಂತರ ಮಾತನಾಡಿದವರೆಲ್ಲರೂ ಅವರ ಮಾತಿನ ಸತ್ಯಾಸತ್ಯತೆ ಮಂಥನ ಮಾಡಬೇಕಾದ ಪ್ರಸಂಗ. ವ್ಯವಸ್ಥಾಪಕರು ಅವರನ್ನು ಸನ್ಮಾನಿಸಬೇಕೆಂದು ಅಪೇಕ್ಷಿಸಿದಾಗ ಅವರಿಂದ ಅದಕ್ಕೆ ತೀಕ್ಷ್ಣ ಪ್ರತಿರೋಧ.

ಇದಾದ ಒಂದು ತಿಂಗಳಲ್ಲೇ- ೧೯೯೮ರ ಡಿಸೆಂಬರ್ ೨೨ರಂದು ಸಮಾಜವಾದಿ ಸರ್ವೋದಯದ ಈ ವೀರ ಯೋಧ ಕೊನೆಯುಸಿರೆಳೆದರು.

-ಖಾದ್ರಿ ಎಸ್. ಅಚ್ಯುತನ್

ಪ್ರೊ. ಬಿ. ಕೃಷ್ಣಪ್ಪ ನೆನಪಿನ ಮಾಲೆ – ೩೭

– ಇಂದಿರಾ ಬಿ. ಕೃಷ್ಣಪ್ಪ

'ಸಮುದಾಯ'ದೊಡನೆ ವಿವಾದಾಸ್ಪದ ಒಡನಾಟ ಮತ್ತು ಚೆಲುವಯ್ಯ ತ್ಯಾಗಿಯಾದದ್ದು

'ಸಮುದಾಯ' – ರಂಗ ಚಳುವಳಿ ಕರ್ನಾಟಕದಲ್ಲಿ ದಸಂಸ–ರೈತ ಚಳುವಳಿ–ಬಂಡಾಯದ ಕಾಲಘಟ್ಟದಲ್ಲಿ ನೈಜತೆ, ಸಮಾನತೆ, ಶಿಕ್ಷಣದ ಆಶಯದೊಂದಿಗೆ ನಾಟಕ, ಬೀದಿ ನಾಟಕಗಳ ಮೂಲಕ ಹೊಸ ಸಾಂಸ್ಕೃತಿಕ ಭಾಷ್ಯವನ್ನು ಬರೆಯಿತು. ದಸಂಸದ ದಲಿತ ಕಲಾ ಮಂಡಳಿ ಮತ್ತು ಸಮುದಾಯದ ರಂಗತಂಡಗಳು ಒಟ್ಟಾಗಿ ಸಾಗಿದ್ದೂ ಉಂಟು ಮತ್ತು ಮುಖಾಮುಖಿಯಾಗಿದ್ದೂ ಉಂಟು. ಸಮುದಾಯದ 'ಭಾಸನಾಲ', 'ತುರ್ತುಪರಿಸ್ಥಿತಿ', 'ಪಂಚಮ' ನಾಟಕಗಳನ್ನು ೧೯೭೭–೭೮ರಲ್ಲಿ ನೋಡಿದ್ದೆ. ದಲೇಕ ಮತ್ತು ದಕಮಂ ಮೂಲಕ, ದಲಿತರ ಸಾಂಸ್ಕೃತಿಕ ಆಯಾಮವನ್ನು ಬೆಳೆಸುತ್ತಿದ್ದ ದಸಂಸದ ಮುಂದೆ ಸಮುದಾಯ ಹಲವಾರು ಪ್ರಶ್ನೆಗಳನ್ನು ಒಡ್ಡಿತ್ತು. 'ಸಮುದಾಯ'ದ ಆರಂಭದ ದಿನಗಳಲ್ಲಿ, ದಲಿತ ಕಲಾವಿದರು ಸಮುದಾಯದ ಕಾರ್ಯಕ್ರಮದಲ್ಲಿ ಸೇರಬೇಕೆ? ಬೇಡವೇ? ಎಂಬ ಜಿಜ್ಞಾಸೆ ನಡೆದಿತ್ತು. ಮೈಸೂರು, ಮಂಡ್ಯ, ಬೆಂಗಳೂರು ಇತರೆ ಜಿಲ್ಲೆಗಳಲ್ಲಿ ದಸಂಸದ ಕಲಾವಿದರು 'ಸಮುದಾಯ'ದ ನಾಟಕಗಳಲ್ಲಿ ಭಾಗಿಗಳಾಗಿದ್ದರು. ಉತ್ತರ ಕರ್ನಾಟಕದ ರಾಯಚೂರು, ಗುಲ್ಬರ್ಗಾ, ಬಿಜಾಪುರ ಇತ್ಯಾದಿ ಕಡೆಗಳಲ್ಲಿ 'ಸಮುದಾಯ'ದವರು ದಸಂಸದ ಬಗ್ಗೆ ಅಪಪ್ರಚಾರ ಮಾಡುತ್ತ ಒಡಕು ಮೂಡಿಸುತ್ತಿದ್ದಾರೆಂಬ ಸುದ್ದಿಗಳು ಕೃಷ್ಣಪ್ಪನವರಿಗೆ ಮುಟ್ಟಿತ್ತು. ಜಂಬಣ್ಣ ಅಮರಚಿಂತ, ಚೆನ್ನಣ್ಣವಾಲೀಕಾರ, ಮಂಗಳೂರು ವಿಜಯ ಮುಂತಾದವರು, ಸಮುದಾಯದವರು ದಲಿತ ಸಂಬಂಧಿತ ನಾಟಕಗಳನ್ನೇ ಪ್ರದರ್ಶನ ಮಾಡುತ್ತಿರುವುದರಿಂದ, ಸಂಘಟನೆಗೆ ಬಳಸಿಕೊಳ್ಳಬಹುದೇ ಮತ್ತು ಅದರಲ್ಲಿ ಪಾಲ್ಗೊಳ್ಳಬಹುದೇ ಎಂದು ಕೃಷ್ಣಪ್ಪನವರಲ್ಲಿ ಸ್ಪಷ್ಟೀಕರಣ ಕೋರಿದ್ದರು. ಆಗ 'ಸಮುದಾಯ'ದ ಕಾರ್ಯದರ್ಶಿಗಳಾಗಿದ್ದ, ಸಿ.ಜಿ. ಕೃಷ್ಣಸ್ವಾಮಿಯವರು "ಸಮುದಾಯದ ಜಾಥಾ ಕರ್ನಾಟಕದ ೧೦ ಜಿಲ್ಲೆಗಳಲ್ಲಿ ಸಂಚರಿಸುವುದು, ಆ ಜಾಥಕ್ಕೆ ದಸಂಸ ಬೆಂಬಲಿಸಬೇಕೆಂದು" ಪತ್ರ ಬರೆದಿದ್ದರು. ದಕಮಂಯ ಹೆಚ್ ಜನಾರ್ಧನ್ (ಮೈಸೂರು ರಂಗಾಯಣದ ಈಗಿನ ನಿರ್ದೇಶಕರು) ಇವರು ಕೃಷ್ಣಪ್ಪನವರಿಗೆ ಪತ್ರ ಬರೆದು "ಸಮುದಾಯದವರು, ದಲಿತರ ಸಮಸ್ಯೆಗಳನ್ನೇ ಹಳ್ಳಿಹಳ್ಳಿಗಳಲ್ಲಿ, ನಾಟಕ ಮುಖಾಂತರ ಹೇಳುತ್ತಿದ್ದಾರೆ. ಅವರೊಂದಿಗೆ ದಸಂಸ ಸೇರಬೇಕೆಂದು" ಕೋರಿದ್ದರು. ಶಿವಾಜಿ ಗಣೇಶನ್‌ರವರು, "ದಸಂಸದ ನಿಲುವು ಹೇಗೇ ಇದ್ದರೂ, ತಾನು ದಸಂಸದ ಪದಾಧಿಕಾರಿಯಾಗಿ ಜಾಥಕ್ಕೆ ಹೋಗುವುದಿಲ್ಲವೆಂದೂ, ವೈಯುಕ್ತಿಕ ಅನುಭವಕ್ಕಾಗಿ ಜಾಥದಲ್ಲಿ ಭಾಗವಹಿಸುವುದಾಗಿ" ಕೃಷ್ಣಪ್ಪನವರಿಗೆ ತಿಳಿಸಿದರು.

ದಸಂಸದ ಸುಳ್ಯದ ಸಂಚಾಲಕಿಯಾದ ಸರಸ್ವತಿ ಬಿ. ಯವರು, ಸಮುದಾಯದ ನಾಟಕದಲ್ಲಿ ಪಾಲ್ಗೊಂಡಿದ್ದು ಊಟದ ವೇಳೆಯಲ್ಲಿ ಅವಳನ್ನು ಹೊರಗಡೆ ಊಟಕ್ಕೆ ಕುಳ್ಳಿರಿಸಿ, ಮತ್ತೆಲ್ಲರೂ ಒಳಗಡೆ ಊಟ ಮಾಡಿದರೆಂಬ ಅಸ್ಪೃಶ್ಯತೆ ಆಚರಣೆಯ ದುರ್ವಾಸನೆ ಕೃಷ್ಣಪ್ಪನವರ ಮೂಗಿಗೆ ಅಡರಿತ್ತು. ಈ ಎಲ್ಲಾ ವಿಷಯಗಳಲ್ಲಿ, ರಾಜ್ಯ ಸಮಿತಿಯಲ್ಲಿ ಬಹು ಚರ್ಚೆ ನಡೆದಿತ್ತು. ಅಂತಿಮವಾಗಿ 'ಸಮುದಾಯ'ದ ಜಾಥದಲ್ಲಿ ಆ ವರ್ಷ ಭಾಗವಹಿಸಬಾರದೆಂದು ತೀರ್ಮಾನ ತೆಗೆದುಕೊಳ್ಳಲಾಯಿತು ಮತ್ತು ಎಲ್ಲಾ ಜಿಲ್ಲೆಗಳಿಗೂ ಈ ಬಗ್ಗೆ ಪತ್ರ ತಲುಪಿತು. ಆ ಪತ್ರದಲ್ಲಿ ಪ್ರಮುಖವಾಗಿ "ಸಮುದಾಯದವರು ದಲಿತ ಚಳುವಳಿಯಲ್ಲಿ ಒಡಕು – ಅಪಪ್ರಚಾರ ಮಾಡುತ್ತಿರುವುದು, ಚಳುವಳಿಯ ಕಾರ್ಯಕರ್ತರಿಗಾದ ಕಹಿ ಅನುಭವಗಳು, ಸುಳ್ಯ ಪ್ರಕರಣ, ಸಮುದಾಯದ ತಾತ್ವಿಕತೆ, ಇತ್ಯಾದಿ ವಿಷಯಗಳಲ್ಲಿ ಸ್ಪಷ್ಟೀಕರಣ ದೊರೆತ ನಂತರ ಜಾಥದಲ್ಲಿ ದಸಂಸ ಭಾಗವಹಿಸಬೇಕೇ? ಬೇಡವೆ? ಎಂಬುದನ್ನು ಮುಂದೆ ನಿರ್ಧರಿಸಲಾಗುವುದೆಂದೂ, ಆ ತಹಲ್‌ವರೆಗೆ ದಸಂಸದ ಜಿಲ್ಲಾ ಶಾಖೆಗಳು ಜಾಥದಲ್ಲಿ ಭಾಗವಹಿಸಬಾರದೆಂದು" ತಿಳಿಸಲಾಗಿತ್ತು. ಈ ಸುತ್ತೋಲೆ ಸಂಘಟನೆಯೊಳಗೆ ಸಮ್ಮಿಶ್ರ ಸಂಚಲನವನ್ನುಂಟು ಮಾಡಿತ್ತು. ಸುಳ್ಯದ ಸಂಚಾಲಕಿ ಬಿ. ಸರಸ್ವತಿ, ಪತ್ರ ಬರೆದು, "ಸಮುದಾಯದವರು ತನ್ನನ್ನು ಹೊರಗಡೆ ಕೂರಿಸಿಲ್ಲವೆಂದೂ, ಆ ಮನೆಯ ಮುದುಕಿಯೊಬ್ಬರು ಅಪಾರ್ಥ



ವಿವಾಹಕ್ಕೆ ಮುನ್ನ ಪ್ರವಾಸವೊಂದರ ಸಂದರ್ಭದಲ್ಲಿ ಗೆಳೆಯರೊಂದಿಗೆ ಬಿ.ಕೆ.

ಮಾತನಾಡಿದ್ದಾಳೆಂದೂ, ಜಾಥಕ್ಕೆ ಬೆಂಬಲಕೊಡಬೇಕೆಂದು"– ಕೋರಿದ್ದಳು. ಈ ಮಧ್ಯೆ ಸಮುದಾಯದಿಂದ, ಕೃಷ್ಣಪ್ಪನವರಿಗೆ ಸುಮಾರು ೬ ಪುಟಗಳ ಸುಧೀರ್ಘವಾದ ಪತ್ರ ಬಂದಿತ್ತು. ಅದರಲ್ಲಿ ಕೃಷ್ಣಪ್ಪನವರಲ್ಲಿದ್ದ ಹಲವಾರು ಅನುಮಾನಗಳು, ಸೈದ್ಧಾಂತಿಕತೆ, ಸುಳ್ಯ ಪ್ರಕರಣ, ಇತ್ಯಾದಿ ಕುರಿತಾಗಿ ಸ್ಪಷ್ಟೀಕರಣ ಬರೆಯಲಾಗಿತ್ತು. ಈ ಎಲ್ಲಾ ಒಳಸುಳಿಗಳ ಕಗ್ಗಂಟುಗಳ ನಡುವೆ ದಸಂಸ, ನಂತರದ ದಿನಗಳಲ್ಲಿ ಒಗ್ಗಟ್ಟಾಗಿ ನಿಂತಿತ್ತು. ಇದರಿಂದಾಗಿ, ದಲಿತ ಕಲಾ ಮಂಡಳಿಯ ಹಾಡುಗಾರರು, ವಾದ್ಯಗಾರರು, ನಾಟಕಕಾರರು, ವೈಯಕ್ತಿಕ ಹಿತಾಸಕ್ತಿಯಿಂದ ಸಂಘಟನೆಯಿಂದ ದೂರ ಚಲಿಸಿದ್ದನ್ನೂ ನಾವು ಕಾಣಬಹುದು.

*****

ಭದ್ರಾವತಿಯಲ್ಲಿ ಕರ್ನಾಟಕ ದಸಂಸ ೧೯೭೩ರಲ್ಲಿ ಪ್ರಾರಂಭವಾದಾಗಿನಿಂದಲೂ, ಪ್ರೊ. ಬಿ.ಕೆ.ಯವರೊಂದಿಗೆ ಹೆಜ್ಜೆಹಾಕುತ್ತಾ ಸಾಗಿ ಬಂದವರು ಚಂದ್ರಪ್ರಸಾದ್ ತ್ಯಾಗಿಯವರು. ಭದ್ರಾವತಿಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯ ಕಾರ್ಮಿಕರಾದ ಚೆಲುವಯ್ಯನವರು ತಮ್ಮ ಸಹೋದ್ಯೋಗಿಗಳಾದ ಎನ್. ಗಿರಿಯಪ್ಪ, ಬಿ. ರಾಜಣ್ಣ, ಟಿ. ರಾಜಣ್ಣ, ಈರಯ್ಯ, ಚಂದ್ರನ್, ನರಸಿಂಹಯ್ಯ, ಚೆನ್ನಕೇಶವ ಇವರೊಂದಿಗೆ ಭದ್ರಾವತಿಯ ಎರಡು ಪ್ರಸಿದ್ಧ ಕಾರ್ಖಾನೆಗಳಲ್ಲಿ– ಇನ್ನೊಂದು ಮೈಸೂರ್ ಕಾಗದ ಕಾರ್ಖಾನೆ–ದಲಿತರ ವಿರುದ್ಧ ನಡೆಯುತ್ತಿದ್ದ, ಅನ್ಯಾಯ – ಶೋಷಣೆ – ವಂಚನೆಗಳ ವಿರುದ್ಧ ಕಾರ್ಮಿಕರನ್ನು ಸಂಘಟಿಸಿದವರು. ಕಾರ್ಮಿಕ ಸಂಘಟನೆಗಳು ಎತ್ತಿಕೊಳ್ಳದ ಹಲವಾರು ಸಮಸ್ಯೆಗಳನ್ನು ಮ್ಯಾನೇಜ್‌ಮೆಂಟ್ ಮುಂದೆ ತಂದವರು ಮತ್ತು ಅವನ್ನು ಸಾರ್ವಜನಿಕಗೊಳಿಸಿದವರು.

ಇವುಗಳಲ್ಲಿ ಪ್ರಮುಖವಾದುದು ಕಬ್ಬಿಣದ ಕಾರ್ಖಾನೆಯ ಕ್ಯಾಂಟೀನ್‌ನಲ್ಲಿ ದಲಿತರಿಗೆ ಪ್ರತ್ಯೇಕ ಕಾಫಿ ಲೋಟದ ಪ್ರಶ್ನೆ – ಅಸ್ಪೃಶ್ಯತೆ ಆಚರಣೆಯ ಗಂಭೀರ ಅಪರಾಧದ ವಿಷಯ. ಎಪ್ಪತ್ತರ ದಶಕದಲ್ಲೂ ಯಾರೂ ಗಮನಿಸದೆ ಹಾಗೇ ಆಚರಣೆಯಲ್ಲಿದ್ದ ಈ ಹೀನ ಕೃತ್ಯದ ವಿರುದ್ಧ ಹೋರಾಟದ ನಾಯಕತ್ವ ವಹಿಸಿ ಗೆದ್ದವರು ಚಲುವಯ್ಯ. ಹೀಗೆ ಸಂಘಟನಾ ಚಾತುರ್ಯದ, ಜಾಣ ಮಾತುಗಾರಿಕೆಯ ಧೈರ್ಯವಂತ, ಗುಂಗುರು ಕೂದಲಿನ, ನಗುಮೊಗದ ಸುಂದರ ಯುವಕ ಚೆಲುವಯ್ಯ, ಕೃಷ್ಣಪ್ಪನವರ ಮಾರ್ಗದರ್ಶನದಲ್ಲಿ ಮತ್ತಷ್ಟು ಹದಗೊಂಡರು, ಕಟಿಬದ್ಧರಾದರು. ಸಂಘಟನೆ ವಿಸ್ತಾರಗೊಳ್ಳುತ್ತಾ ಹೋದಂತೆ, ಪೂರ್ಣಾವಧಿ ಕಾರ್ಯಕರ್ತನಾಗಿ ಶ್ರಮಿಸಲು ಸಿದ್ಧರಾದರು. ಹೀಗೆ ಚೆಲುವಯ್ಯ ಹಾಸನ ಜಿಲ್ಲೆಯ ಪೂರ್ಣಾವಧಿ ಕಾರ್ಯಕರ್ತರಾಗಿ ಹೋಗಿ – ಚಂದ್ರಪ್ರಸಾದ್ ತ್ಯಾಗಿ ಆದರು.

(ಮುಂದುವರೆಯುವುದು)

ಗಾಂಧೀಜಿಯವರ ನಾಸ್ತಿಕ ಒಡನಾಡಿಯಾಗಿದ್ದ ಗೋರಾ ಅವರ ಮಗ ಖ್ಯಾತ ವಿಚಾರವಾದಿ ಲವಣಂ ಇತ್ತೀಚೆಗೆ ನಿಧನರಾದರೆಂದು ತಿಳಿದು ಬಂದಿದ್ದು, ಅವರ ಸಾವಿಗೆ 'ಹೊಸ ಮನುಷ್ಯ' ತನ್ನ ಸಂತಾಪವನ್ನು ಸೂಚಿಸುತ್ತದೆ–ಸಂ

ನೇತಾಜಿಯವರ ಮರುಸೃಷ್ಟಿಯ ಹಾದಿಯಲ್ಲಿ...

–ವಿ. ಸುದರ್ಶನ್



ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸದೆ, ಒಂದು ರಾಷ್ಟ್ರೀಯ ಚರಿತ್ರೆಯನ್ನೇ ಹೊಂದಿರದ ಸಂಘ ಪರಿವಾರದ ಶಕ್ತಿಗಳು ಈಗ ಅಧಿಕಾರಕ್ಕೆ ಬಂದಾಗಿನಿಂದ ತನ್ನವೇ ಎನ್ನಬಹುದಾದ ರಾಷ್ಟ್ರೀಯ ಪ್ರತಿಮೆಗಳ ಹುಡುಕಾಟದಲ್ಲಿದೆ. ಅವರ ಹೆಡ್ಗೆವಾರ್, ಗುರೂಜಿ, ಸಾವರ್ಕರ್, ಶ್ಯಾಮಾಪ್ರಸಾದ್ ಮುಖರ್ಜಿ, ದೀನದಯಾಳು ಉಪಾಧ್ಯಾಯ ಇವರ್‍ಯಾರೂ ಜನತೆಯ ಕಲ್ಪನೆಯಲ್ಲಿ ಸಾಕಾರಗೊಳ್ಳದ ಪ್ರತಿಮೆಗಳೇ ಆಗಿ ಉಳಿದು, ಬಿಜೆಪಿ ಸರ್ಕಾರಕ್ಕೆ ಜನ ನಂಬಬಹುದಾದ ತನ್ನ ಚರಿತ್ರೆಯನ್ನು ಪ್ರಸ್ತುತಪಡಿಸಲು ಆಗದೆ ಅದೀಗ ತಾನು ತನ್ನ ವಿರೋಧಿಸುತ್ತಾ, ಹೀಗಳೆಯುತ್ತಾ ಬಂದ ಕಾಂಗ್ರೆಸ್ ವಾರಸುದಾರಿಕೆಯ ಪ್ರತಿಮೆಗಳನ್ನು ತನ್ನದಾಗಿಸಿಕೊಳ್ಳುವ ಪ್ರಯತ್ನದಲ್ಲಿದೆ. ಕಾಂಗ್ರೆಸ್‌ನಲ್ಲೇ ಅಂತರ್ಗಾಮಿಯಾಗಿ ಹರಿದಿದ್ದ ಮೃದು ಹಿಂದೂವಾದಿ ಪರಂಪರೆಗೆ ಸೇರಿದವರೆಂದು ಗುರುತಿಸಲಾಗುವ ಬಾಲಗಂಗಾಧರ ತಿಲಕ್, ಲಾಲಾ ಲಜಪತ್ ರಾಯ್, ಗೋವಿಂದ ವಲ್ಲಭ ಪಂತ್, ಮದನಮೋಹನ ಮಾಳವೀಯ, ಮತ್ತು ಸರ್ದಾರ್ ವಲ್ಲಭಾಯಿ ಪಟೇಲ್‌ರನ್ನು ಹಲವು ಹೊಸ ಮಾನ್ಯತೆಗಳ ಮೂಲಕ ತನ್ನ ಪ್ರತಿಮೆಗಳನ್ನಾಗಿ ಮಾಡಿಕೊಳ್ಳುವ ಎಲ್ಲ ಪ್ರಯತ್ನಗಳಲ್ಲಿ ತೊಡಗಿದೆ.

ಇಂತಹ ಇತ್ತೀಚಿನ ಒಂದು ಪ್ರಯತ್ನ ಗಾಂಧಿಯವರ ಸತ್ಯಾಗ್ರಹದ ಹಾದಿ ಒಪ್ಪದೆ ತನ್ನದೇ ಬಲಪ್ರಯೋಗದ ದಾರಿ ಹಿಡಿದ ನೇತಾಜಿ ಸುಭಾಷ್ ಚಂದ್ರ ಬೋಸ್‌ರ ಸಾವನ್ನು ಕುರಿತ ವಿವಾದದ ಲಾಭ ಪಡೆದು, ಅವರನ್ನು ತನ್ನ ಪ್ರತಿಮೆಯನ್ನಾಗಿ ಮಾಡಿಕೊಳ್ಳುವ ಪ್ರಯತ್ನ ನಡೆಸಿದೆ. ಅವರನ್ನು ಕುರಿತು ಪ್ರಧಾನಮಂತ್ರಿಗಳ ಕಾರ್ಯಾಲಯದಲ್ಲಿರುವ ಗುಪ್ತ ಕಡತಗಳನ್ನು ನೇತಾಜಿಯವರ ಮುಂದಿನ ಹುಟ್ಟಿದ ಹಬ್ಬದ ದಿನ –ಬರುವ ಜನವರಿಯಲ್ಲಿ–ಬಹಿರಂಗಪಡಿಸುವುದಾಗಿ ಪ್ರಧಾನಿ ನರೇಂದ್ರ ಮೋದಿ ಈಗಾಗಲೇ ಘೋಷಿಸಿದ್ದಾರೆ. ಆದರೆ ನೇತಾಜಿ–ಅವರು ೧೯೪೫ ಆಗಸ್ಟ್ ೧೮ರ ವಿಮಾನ ಅಪಘಾತದಲ್ಲಿ ಅಸು ನೀಗಿರಲಿ, ನೀಗದಿರಲಿ–ಜರ್ಮನಿಯ ಹಿಟ್ಲರ್ ಮತ್ತು ಜಪಾನ್‌ನ ಟೋಜೋಗಳೆಂಬ ಕ್ರೂರ ಸರ್ವಾಧಿಕಾರಿಗಳ ಸಹವಾಸಕ್ಕೆ ಸಿಕ್ಕಿ ಎಷ್ಟು ಅಸಹಾಯಕರಾಗಿದ್ದರು ಎಂಬುದರ ಚಿತ್ರ ನಮಗೆ ದೊರೆತಾಗ, ಬೋಸರು ಬದುಕಿದ್ದರೆ ಭಾರತಕ್ಕೆ ಅವರಿಂದ ಎಂತಹ ನಾಯಕತ್ವ ದೊರಕುತ್ತಿತ್ತೆಂಬ ಒಂದು ಸೂಚನೆ ಸಿಗುತ್ತದೆ. ಬೋಸ್ ಅವರ ಆಜಾದ್ ಹಿಂದ್ ಫೌಜ್‌ನ ದಾಳಿಗಳಿಗೆ ಹೆದರಿ ಬ್ರಿಟಿಷರು ಭಾರತ ಬಿಟ್ಟು ಹೋದರು ಎಂಬ ವಾದ ಎಷ್ಟು ಉದ್ದೇಶಪೂರ್ವಕ ಸುಳ್ಳು ಎಂಬುದು ಗೊತ್ತಾಗುತ್ತದೆ. ಈ ಬಗ್ಗೆ ಬೆಳಕು ಚೆಲ್ಲುವ ಒಂದು ಪುಟ್ಟ ಲೇಖನ ಇಲ್ಲಿದೆ. –ಸಂ.

ನೇತಾಜಿಯವರ ಪುನರ್ ಸೃಷ್ಟಿ ಅಟಲ್ ಬಿಹಾರಿ ವಾಜಪೇಯಿಯವರ ಕಾಲದಲ್ಲಿ ಸ್ಥಾಪನೆಯಾದ ನ್ಯಾ. ಮುಖರ್ಜಿ ಆಯೋಗದಿಂದ ಶುರುವಾಯಿತು. ನ್ಯಾ. ಮುಖರ್ಜಿಯವರು, ರೆಂಕೋಜಿ ದೇವಸ್ಥಾನದಲ್ಲಿರುವ ಚಿತಾಭಸ್ಮವು ಬೋಸ್‌ರದಲ್ಲ, ಬದಲಾಗಿ ಅದು ತೈವಾನ್ ಸೇನೆಯಲ್ಲಿದ್ದು ತೀರಿಹೋದ ಇಚಿರೋ ಒಕುರಾ ಅವರದ್ದು ಎಂಬ ವಾದವನ್ನು ಮಂಡಿಸಿದರು. ಅಲ್ಲದೇ ಮುಖರ್ಜಿಯವರ ಪ್ರಕಾರ ಬೋಸ್ ಅವರು ತೀರಿಹೋಗಿದ್ದು ವಿಮಾನ ಅಪಘಾತದಲ್ಲಿ ಅಲ್ಲ. ಯಾಕೆಂದರೆ ಅಂಥ ಅಪಘಾತದದ ಯಾವ ಸಾಕ್ಷ್ಯಗಳೂ ತೈವಾನ್‌ನಲ್ಲಿ ದೊರಕಲಿಲ್ಲ. ಅದಿರಲಿ, ಆ ದುರ್ಘಟನೆಯಲ್ಲಿ ಸಾವಿಗೀಡಾದ ಇತರರ ಬಗ್ಗೆ, ಪೈಲಟ್, ಸಹ ಪೈಲಟ್ ಅಥವಾ ಜಪಾನ್‌ನ ಜನರಲ್‌ರ ಅಂತ್ಯಕ್ರಿಯೆಯ ಬಗ್ಗೆ ಯಾವ ವಿವರಗಳೂ ಇದುವರೆಗೆ ದೊರಕಿಲ್ಲ. ಬೋಸ್‌ರ ಸಹಪ್ರಯಾಣಿಕರಾಗಿದ್ದ ಕರ್ನಲ್ ಹಬೀಬುರ್ ರಹಮಾನ್‌ರವರು ತಾವು ಹೇಗೆ ಬದುಕುಳಿದು ಬಂದರು ಎಂಬ ಬಗ್ಗೆ ನೀಡಿದ ವಿವರಗಳು ನಂಬಲರ್ಹವಾಗಿಲ್ಲ. ಆದ್ದರಿಂದ ಅವರು ಬೋಸ್‌ರು 'ಮಿತ್ರ ರಾಷ್ಟ್ರ'ಗಳ(ಅಮೆರಿಕಾ–ಬ್ರಿಟಿಷ್) ಸೇನೆಗಳಿಗೆ ಶರಣಾದ ವಿಷಯವನ್ನು ಮರೆಮಾಚಲು ಅವರ ದುರ್ಮರಣದ ಸುದ್ದಿಯನ್ನು ಸೃಷ್ಟಿಸಲಾಯಿತು ಎಂಬ ಅಭಿಪ್ರಾಯಕ್ಕೆ ಬಂದರು.

ಬೋಸ್ ಅವರು ಐತಿಹಾಸಿಕ ವ್ಯಕ್ತಿಗಳಾದ ಮುಸೋಲಿನಿ, ಹಿಟ್ಲರ್ ಮತ್ತು ಜನರಲ್ ಹಿಡೆಕಿ ಟೋಜೋ ಮೊದಲಾದವರೊಂದಿಗೆ ಇಟ್ಟುಕೊಂಡಿದ್ದ ಒಡನಾಟವನ್ನು ಬಹಳ ರಮ್ಯವಾಗಿ, ಅಪರಿಮಿತ ಧೈರ್ಯ–ಸಾಹಸಗಳ ರೋಮಾಂಚಕ ಕಥೆಯಾಗಿ ನೋಡಲಾಗಿದೆ. ಬಹಳ ಜನರಿಗೆ ಗೊತ್ತಿಲ್ಲದ ಸಂಗತಿಯೇನೆಂದರೆ, ಏಪ್ರಿಲ್ ೧೪, ೧೯೪೪ರಂದು ಕೊಹಿಮಾದ ಬೆಟ್ಟಗಳಲ್ಲಿ ಐಎನ್‌ಎ ತ್ರಿವರ್ಣಧ್ವಜವನ್ನು ಹಾರಿಸುವ ಮೊದಲೇ, ಐಎನ್‌ಎದ ಕರ್ನಲ್ ಲೋಗನಾಥನ್ ಅವರು ಅಂಡಮಾನ್ ನಿಕೋಬಾರ್ ದ್ವೀಪಗಳ ಚೀಫ್ ಕಮಾಂಡರ್ ಆಗಿದ್ದರು. ಮತ್ತು ಅವರು ಪ್ರತಿ ತಿಂಗಳೂ ಸಿಂಗಪೂರ್‌ನಲ್ಲಿದ್ದ ಸ್ವತಂತ್ರ ಭಾರತ ಸರ್ಕಾರದ ಸೇನೆಯ ಸರ್ವೋಚ್ಚ ದಂಡನಾಯಕರಿಗೆ ವರದಿ ಸಲ್ಲಿಸುತ್ತಿದ್ದರು. ಬೋಸ್‌ರಿಗೆ ಈ ಹುದ್ದೆಗಳನ್ನು ನಿರ್ವಹಿಸುವುದು ಸುಲಭವಾದ ಮಾತಾಗಿರಲಿಲ್ಲ. ಲಭ್ಯ ಮಾಹಿತಿಗಳ ಪ್ರಕಾರ ಅವರು ಜನರಲ್ ಟೋಜೋ ಅವರ ಮೇಲೆ, ಮಾರ್ಚ್ ೨೩,೧೯೪೨ರಂದು ಜಪಾನೀಯರ ವಶವಾಗಿದ್ದ ಅಂಡಮಾನ್ ನಿಕೋಬಾರ್ ದ್ವೀಪಗಳನ್ನು ತಮ್ಮ ಸುಪರ್ದಿಗೆ ನೀಡುವಂತೆ ಒತ್ತಡ ಹೇರುತ್ತಿದ್ದರು. ತನ್ಮೂಲಕ ಕೆಲವು ಭಾಗಗಳನ್ನಾದರೂ ಭಾರತದ ಆಡಳಿತಕ್ಕೆ ಒಳಪಡಿಸುವುದು ಅವರ ಉದ್ದೇಶವಾಗಿತ್ತು. ಕೊನೆಗೆ ಇದು ಸಾಧ್ಯವಾದರೂ ಅದಕ್ಕೆ ಹಲವಾರು ನಿರ್ಬಂಧಗಳಿದ್ದವು. ಈ ಸಂದರ್ಭದಲ್ಲಿ ಬೋಸ್‌ರು ಖುದ್ದಾಗಿ ಜಪಾನ್ ಸರ್ಕಾರದ ಮುಖ್ಯಸ್ಥನಾಗಿದ್ದ ಅಡ್ಮಿರಲ್ ಇಶಿಕಾವ ಅವರೊಂದಿಗೆ ಕುಳಿತು, ಜಪಾನಿನ ಎಲ್ಲ ಉದ್ದೇಶಗಳನ್ನು ಅರಿತುಕೊಂಡು, ಮಾತುಕತೆ ನಡೆಸಿದರು. ಜಪಾನೀಯರು ಕರ್ನಲ್ ಲೋಗನಾಥನ್ ಅವರ ಎಲ್ಲ ನಡೆಗಳಿಗೆ ಎಷ್ಟೊಂದು ಅಡೆತಡೆಗಳನ್ನು ಸೃಷ್ಟಿಸಿದರೆಂದರೆ, ಇದರಿಂದ ರೋಸಿ ಹೋದ ಅವರು ಅನಾರೋಗ್ಯದ ನೆಪ ಹೂಡಿ, ಐಎನ್‌ಎನ ಇನ್ನೊಬ್ಬ ಸಹೋದ್ಯೋಗಿಯಾದ ಮೇಜರ್ ಅಲ್ವಿಯವರಿಗೆ ಜವಾಬ್ದಾರಿ ವಹಿಸಿ ಸಿಂಗಪೂರ್‌ಗೆ ತೆರಳಿದರು.

ಇತಿಹಾಸದ ವ್ಯಂಗ್ಯವೇನೆಂದರೆ, ೧೯೪೩ರಲ್ಲಿ ಪೋರ್ಟ್‌ಬ್ಲೇರ್‌ಗೆ ಭೇಟಿ ನೀಡಿದ ಬೋಸ್‌ರು ಜಪಾನಿಯರು ಈ ದ್ವೀಪಗಳ ಮೇಲೆ ನಡೆಸಿದ ಕ್ರೂರ ಹಾಗೂ ಬರ್ಬರ ಕೃತ್ಯಗಳನ್ನು ಮರೆತು 'ಸ್ವಾತಂತ್ರ ಹೋರಾಟಗಾರರನ್ನು ಮೃಗಗಳಿಗಿಂತ ಕಡೆಯಾಗಿ ನಡೆಸಿಕೊಳ್ಳಲಾದ ಈ ದ್ವೀಪಗಳು ಇಂದು ಬ್ರಿಟಿಷರು ನಡೆಸಿದ ಕ್ರೌರ್ಯದ ಇತಿಹಾಸಕ್ಕೆ ಸಾಕ್ಷಿಯಾಗಿವೆ' ಎಂದು ಘೋಷಿಸಿದರು. ನೇತಾಜಿಯವರಿಗೆ ಜಪಾನೀಯರು ತಮ್ಮ ಬಂದೂಕುಗಳ ನೆರಳಿನಲ್ಲಿ ನಡೆಸಿದ ಭೀಕರ ಕೃತ್ಯಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಬ್ರಿಟಿಷರಿಗೆ ಹೋಲಿಸಿದರೆ ಅವರಿಗೆ ಜಪಾನೀಯರೇ ಅತ್ಯಂತ ಸಭ್ಯರಾಗಿ ಕಾಣುತ್ತಿದ್ದರು.

'ನನಗೆ ನಿಮ್ಮ ರಕ್ತ ನೀಡಿ, ನಾನು ಪ್ರತಿಯಾಗಿ ಸ್ವಾತಂತ್ರ್ಯವನ್ನು ನೀಡುತ್ತೇನೆ' ಎಂದು ನೇತಾಜಿಯವರು ಘೋಷಿಸಿದ್ದು ಪೋರ್ಟ್‌ಬ್ಲೇರ್‌ನ ಜಿಮ್ಖಾನಾ ಗ್ರೌಂಡ್‌ನಿಂದಲೇ. ನಂತರ ೧೯೪೫ರ ಆಗಸ್ಟ್ ೪ರಂದು ಹಿಟ್ಲರನ 'ಫೈನಲ್ ಸಲ್ಯೂಶನ್' ಮಾದರಿಯಲ್ಲೇ ಜಪಾನಿ ಆಡಳಿತವು ದ್ವೀಪವಾಸಿಗಳ ಮೇಲೆ ಅಮಾನುಷ ದೌರ್ಜನ್ಯ ನಡೆಸಿತು. ನೂರಾರು ಜನರನ್ನು ಮಂದೆಗಳಂತೆ ಹಡಗುಗಳಲ್ಲಿ ತುಂಬಿ ಹ್ಯಾವ್‌ಲಾಕ್ ದ್ವೀಪಕ್ಕೆ ಕಳುಹಿಸಿ ಸಮುದ್ರಕ್ಕೆ ಎಸೆಯಲಾಯಿತು. ಉಳಿದವರನ್ನು ಬೆಂಕಿ ಹಾಕಿ ಸುಡಲಾಯಿತು, ಹಡಗುಗಳ ಪ್ರೊಪೆಲ್ಲರುಗಳ ಬ್ಲೇಡುಗಳಿಗೆ ತಳ್ಳಿ ತುಂಡರಿಸಲಾಯಿತು. ಜಪಾನೀಯರ ಶರಣಾಗತಿಯ ಕೆಲವು ದಿನಗಳ ಮೊದಲು ೩೦೦ಕ್ಕೂ ಹೆಚ್ಚು ದ್ವೀಪವಾಸಿಗಳನ್ನು ತಾರ್‌ಮುಗ್ಲಿ ದ್ವೀಪಕ್ಕೆ ಎಳೆದೊಯ್ದು ಸಾಲಾಗಿ ನಿಲ್ಲಿಸಿ ಗುಂಡುಹೊಡೆದು ಕೊಲ್ಲಲಾಯಿತು. ಕರ್ನಲ್ ಲೋಗನಾಥನ್ ಅವರು 'ಸ್ವತಂತ್ರ ಭಾರತ'ವೆಂದು ಕರೆಯಲಾಗುವ ಪ್ರದೇಶದ ನಿಜ ಸ್ಥಿತಿಯನ್ನು ಕುರಿತು ನೇತಾಜಿಯವರಿಗೆ ಕಳಿಸಿದ ರಹಸ್ಯ ಸಂದೇಶದ ತಥ್ಯವನ್ನು ಅರ್ಥಮಾಡಿಕೊಳ್ಳಲು ಅವರಿಗೆ ಸಾಧ್ಯವಾಯಿತೋ ಇಲ್ಲವೋ ಇದುವರೆಗೂ ತಿಳಿದಿಲ್ಲ. ನೇತಾಜಿಯವರು ಪರಿಸ್ಥಿತಿಯನ್ನ ತಹಬಂದಿಗೆ ತರಲು ಪ್ರಯತ್ನ ನಡೆಸಿದ್ದರ ಬಗ್ಗೆ ಕೆಲವು ಆಧಾರಗಳು ದೊರಕುತ್ತವೆಯಾದರೂ, ಅದರಿಂದ ಹೆಚ್ಚು ಲಾಭ ಉಂಟಾಗಲಿಲ್ಲ.

ನೇತಾಜಿ ಸುಭಾಷ್ ಚಂದ್ರಬೋಸ್‌ರ ಪ್ರತಿಮೆಯನ್ನು ಪುನರ್‌ನಿರ್ಮಾಣ ಮಾಡುವ ಯಾರಾದರೂ ಅವರ ಜೀವನದ ಘಟನೆಗಳನ್ನು ತೆರೆದ ಕಣ್ಣಿನಿಂದ ನೋಡುವ ಅಗತ್ಯವಿದೆ. ಸದ್ಯ ಅಧಿಕಾರದಲ್ಲಿರುವ ಈ ಸರ್ಕಾರದಿಂದ ಅದು ಸಾಧ್ಯವೆ?


(ಕನ್ನಡಕ್ಕೆ: **ಡಾ. ಎಸ್. ಸಿರಾಜ್ ಅಹಮದ್**

ಕೃಪೆ: *ದ ಹಿಂದೂ*, ಸೆಪ್ಟಂಬರ್, ೨೧೦೧೫)

ಯುವ ಸಮಾಜವಾದಿ ಚಿಂತನ

ಗಾಳಿ, ನೀರು ಮಲಿನವಾದರೆ, ಹೃದಯವೂ ಮಲಿನವಾಗುತ್ತಾ?

–ಕೆ.ಜೆ. ಪ್ರವೀಣ್ ಕುಮಾರ್



ಲಕ್ಷ್ಮೀಶ ತೋಳ್ಪಾಡಿ

'ಇಲ್ಲಿ ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ, ಯಾವುದೂ ಯಕಶ್ಚಿತವಲ್ಲ...' ಪುಟ್ಟಪ್ಪನವರು ತಮ್ಮ "ಮಲೆಗಳಲ್ಲಿ ಮದುಮಗಳು" ಕಾದಂಬರಿಯ ಮುನ್ನುಡಿಯನ್ನು ಹೀಗೆ ಪ್ರಾರಂಭಿಸುತ್ತಾರೆ. ಇದಕ್ಕಿಂತ ಮಾರ್ಮಿಕವಾಗಿ ಸಮಾಜವಾದದ ಆಶಯ ಹೇಳಲು ಯಾರಿಗೂ ಸಾಧ್ಯವಿಲ್ಲವೇನೋ!

ಇತ್ತೀಚೆಗೆ ಉಗ್ರರ ಉಪಟಳ ತಡೆಯಲಾರದೆ ದೋಣಿಯಲ್ಲಿ ತೆರಳಿ ಸಮುದ್ರ ಪಾಲಾದ ಕುಟುಂಬದ ನಿರ್ಜೀವ ಪುಟ್ಟ ಮಗುವಿನ ಚಿತ್ರ ಪತ್ರಿಕೆಯಲ್ಲಿ ಬಂದಿತ್ತು. ಆ ಚಿತ್ರದ ಕೆಳಗೆ ಹೀಗೆ ಟಿಪ್ಪಣಿ ಬರೆದೆ: 'ಸಮುದ್ರದ ತೆರೆಗಳಿಗೆ ಕರುಣೆಯಿದೆ ನೋಡಿ! ನೀವು ಮಾಡಿದ್ದು ಏನನ್ನು? ಎಂದು ತೋರಿಸುವುದಕ್ಕೋಸ್ಕರ ಆ ಕಡಲಿನ ಅಲೆಗಳು ಮಗುವಿನ ಶವವನ್ನು ನಮ್ಮ ಕಣ್ಮುಂದೆ ತಂದು ಹಾಕಿದೆ.'


ಹೀಗೆ ಕಣ್ಣಿಗೆ ಕಂಡದ್ದರ ಬಗ್ಗೆ ಸ್ಪಂದಿಸಲು ಸಾಧ್ಯವಾಗದೆ ವಾದ ಮಾಡುವ ಜನರ ನಡುವೆ ನಾವಿದ್ದೇವೆ. ಸಾಮಾನ್ಯವಾಗಿ ತಲ್ಲಣಗೊಳ್ಳದೇ ಮಾತನಾಡುವ ಜನ ಬಹಳ ಚೆನ್ನಾಗೇ ಮಾತನಾಡುತ್ತಾರೆ. ಆದರೆ ತಲ್ಲಣಗೊಳ್ಳದೇ ಆಡುವ ಯಾವ ಮಾತನ್ನು ನಾನು ನಂಬುವುದಿಲ್ಲ. ಪ್ರಸ್ತುತ ಪರಿಸ್ಥಿತಿಯಲ್ಲಿ ತಲ್ಲಣದ ಮಾತುಗಳನ್ನು ಆಡುವುದಿರಲಿ, ಕೇಳುವುದು ಯಾರಿಗೂ ಬೇಕಾಗಿಲ್ಲ.

ಕುಪ್ಪಳ್ಳಿಯಲ್ಲಿ ಮೊನ್ನೆ ಸಮಾಜವಾದಿ ಅಧ್ಯಯನ ಶಿಬಿರವನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಲಕ್ಷ್ಮೀಶ ತೋಳ್ಪಾಡಿಯವರ ಈ ಮಾತುಗಳನ್ನು ಕೇಳಿ ಹಾಗೆ ಅರೆಘಳಿಗೆ ಮೈ ಜುಮ್ಮೆಂದಿತು. ಸಮಾಜವಾದಿ ನೆಲೆಗಟ್ಟಿನಲ್ಲಿ, ಅದರ ಪರಿಕಲ್ಪನೆ ಮತ್ತು ಆಶಯಗಳನ್ನಿಟ್ಟುಕೊಂಡು ಕನ್ನಡದ ಕೆಲವು ಮುಖ್ಯ ಸಾಹಿತ್ಯ ಕೃತಿಗಳನ್ನು ಚರ್ಚಿಸುವ ಸಲುವಾಗಿ ಸೇರಿದ್ದ ನನ್ನಂಥ ಯುವಜನರಲ್ಲಿ ಹೃದಯಸ್ಪರ್ಶಿ ಮಾತುಗಳಿಂದ ಪ್ರಾರಂಭದಲ್ಲೇ ಸಾರ್ಥಕ ಭಾವ ಮೂಡಿಸಿದರು. ನಾಡಿನ ಖ್ಯಾತ ಸಂಸ್ಕೃತಿ ಚಿಂತಕರಿಂದ ಕುವೆಂಪು, ಅನಂತಮೂರ್ತಿ, ಲಂಕೇಶ್, ತೇಜಸ್ವಿ ಹಾಗೂ ದೇವನೂರರ ಸಾಹಿತ್ಯದಲ್ಲಿನ ಸಮಾಜವಾದಿ ಆಶಯಗಳ ಸೂಕ್ಷ್ಮ ಒಳನೋಟಗಳನ್ನೊಳಗೊಂಡ ವಿಶ್ಲೇಷಣೆ ಎರಡು ದಿನಗಳುದ್ದಕ್ಕೂ ಕುತೂಹಲಕಾರಿಯಾಗಿಯೂ, ಚೇತೋಹಾರಿಯಾಗಿ ಜರುಗಿದವು. ಇವುಗಳ ನಡುವೆ ಚರ್ಚೆಗೆ ಮೀಸಲಿರಿಸಿದ್ದ ಸಮಯ, ಅದರಲ್ಲೂ ಮೊದಲ ದಿನದ ರಾತ್ರಿ ಊಟವಾದ ನಂತರ ಹೊರಗಿನ ಗಾಳಿಗೆ ಮೈಯೊಡ್ಡಿ ಎಲ್ಲರೂ ಬಂಧುಗಳೆಂಬ ಭಾವದೊಂದಿಗೆ ಸೇರಿ ಮುಕ್ತವಾಗಿ ಚರ್ಚಿಸಿದ್ದು ನಿಜವಾದ ಸಮಾಜವಾದಿ ಅನುಭವವೇನೋ!.

ಅಬ್ಬಾ! ಶಿಬಿರದ ಮೊದಲ ದಿನ ಸಂಜೆ ೭ರಿಂದ ತೋರಿಸಿದ ಆ ಎರಡು ಚಿತ್ರಗಳು! ಕೇವಲ ೨೦ ನಿಮಿಷಕ್ಕೆ ಮುಗಿಯುವ ಅಕಿರ ಕುರೋಸಾವರ ಜಪಾನಿ ಚಿತ್ರ. 'ವಾಟರ್ ಮಿಲ್ ವಿಲೇಜ್' ಆಧುನಿಕ ನಗರ ಜೀವನದ ಆತುರ, ಧಾವಂತ,



ನಾವು ನೋಡಿದ 'ವಾಟರ್ ಮಿಲ್ ವಿಲೇಜ್' ಚಿತ್ರದ ಒಂದು ದೃಶ್ಯ



ಶಿಬಿರ ನಡೆದ ಕುವೆಂಪು ಶತಮಾನೋತ್ಸವ ಭವನ


ದುರಾಸೆಗಳಿಗೆ, ಹೊರತಾದ ಹಳ್ಳಿಯ ಜನರ ಜೀವನ ಚಿತ್ರಣ ನೀಡುತ್ತದೆ. ನಗರದಿಂದ ಬರುವ ಒಬ್ಬ ತರುಣನ ಪ್ರಶ್ನೆಗಳಿಗೆ ಉತ್ತರಿಸುತ್ತ ಹೋಗುವ ೧೦೩ ವರ್ಷ ವಯಸ್ಸಿನ ಮುದುಕ ಆಧುನೀಕರಣದ ಸೋಂಕಿಲ್ಲದೆ, ವಿದ್ಯುತ್ ಸಂಪರ್ಕವಿಲ್ಲದೆ, ದೇವಾಲಯಗಳಿಲ್ಲದೆಯೂ ಸುಂದರ ಬದುಕನ್ನು ಕಟ್ಟಿಕೊಂಡ ತುಂಬು ತೃಪ್ತಿಯ ಜೀವನೋತ್ಸಾಹಿಯಂತೆ ಕಾಣುತ್ತಾನೆ. ಹಾಗೂ ಇಂತಹ ಗ್ರಾಮದಲ್ಲಿ ಸಹಜವಾಗಿಯೇ ಎಲ್ಲರೂ ತುಂಬುಜೀವನ ನಡೆಸಿಯೇ ಸಾಯುವವರಾದ್ದರಿಂದ ಅವರ ಶವಯಾತ್ರೆಯನ್ನು ಸತ್ತವರ ಜಾತ್ರೆಯಂತೆ ಆಚರಿಸುವ ಹಳ್ಳಿಗರ ತಿಳುವಳಿಕೆಯನ್ನು ಚಿತ್ರ ಮನಮುಟ್ಟಿಸುತ್ತದೆ. ಈ ಪರಿಸರಕ್ಕೆ ತಕ್ಕಮಟ್ಟಿಗೆ ಸಾಮ್ಯತೆ ಇರುವ ಮಡಿಕೇರಿ ತಾಲೂಕಿನ ಕರಿಕೆ ಗ್ರಾಮ ಮತ್ತು ಆ ಗ್ರಾಮದ ಶಾಲೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ನನಗೆ ಈ ಚಿತ್ರ ಮತ್ತೂ ಆಪ್ತವಾಯಿತು.

ಕಳೆದ ಶತಮಾನದ ದೊಡ್ಡ ಸಮಾಜವಾದಿ ಚಿಂತಕ, ಜಗತ್ತು ಕಂಡ ಅದ್ಭುತ ನಟ, ನಿರ್ಮಾಪಕ, ನಿರ್ದೇಶಕ, ಚಾರ್ಲಿ ಚಾಪ್ಲಿನ್‌ರ 'ದ ಗೋಲ್ಡ್ ರಷ್' ಎಂಬ ಚಿತ್ರ ಹಾಸ್ಯ ಧಾಟಿಯಲ್ಲಿಯೇ ಪ್ರಸ್ತುತ ಆಧುನಿಕ ಬದುಕಿನ ವಿಮರ್ಶೆ ನಡೆಸುತ್ತದೆ. ಈಗ ಚಾರ್ಲಿಯ ಎಲ್ಲಾ ಚಿತ್ರಗಳನ್ನು ನೋಡುವ ಹಂಬಲ ನನ್ನದು.

ಕವಿ ಹೃದಯದ ಅಕ್ಕಪಕ್ಕದ ಶ್ವಾಸಕೋಶಗಳೇನೋ ಎಂಬಂತೆ ಇರುವ ಈ ಕವಿಮನೆ ಮತ್ತು ಕವಿಶೈಲ ಇವುಗಳನ್ನು ವೀಕ್ಷಿಸುವುದನ್ನು ಶಿಬಿರದ ಅವಿಭಾಜ್ಯ ಬಾಗವನ್ನಾಗಿ ಮಾಡಿ, ವೀಕ್ಷಣೆಗೆ ಸಮಯ ನಿಗದಿ ಮಾಡಿ ಮಾರ್ಗದರ್ಶಿಸಿದರು ಶಿಬಿರದ ನಿರ್ದೇಶಕರು ಮತ್ತು ಸಂಚಾಲಕರು. ಕವಿಮನೆಯ ಒಳಹೊಕ್ಕಂತೆ ಆ ಕಾಲದ ಜೀವನ ಪದ್ಧತಿಯನ್ನು ಪ್ರತಿನಿಧಿಸುವ ಬಾಣಂತಿಮನೆ, ವಿಶಾಲ ಅಡುಗೆಮನೆ, ಸ್ನಾನದ ಮನೆ, ಉಪ್ಪರಿಗೆ, ಜತನವಾಗಿಟ್ಟಿರುವ ಅಂದಿನ ಗೃಹೋಪಯೋಗಿ ವಸ್ತುಗಳು ಕವಿಗೆ ಸಂದಿರುವ ಪ್ರಶಸ್ತಿಗಳನ್ನು ನೋಡಿ ಕಣ್ಣು ಧನ್ಯವಾಯಿತು.

ಕವಿಮನೆಯಂತೆಯೇ ಕವಿಶೈಲವೂ ಅದ್ಭುತ ಸ್ಮಾರಕವಾಗಿದೆ. ಕಲೆಯ ಕಣ್ಣಿಲ್ಲದವರಿಗೆ ಇದೊಂದು ಕಲ್ಲುಕಾಡು, ಕಲಾವಂತನಿಗೆ ಸ್ವರ್ಗ, ಎರಡನೇ ದಿನ ಅರುಣೋದಯಕ್ಕೆ ಮುಂಚೆಯೇ ಅಲ್ಲಿಗೆ ಹೋದ ನನಗೆ ಮಂಜಿನ ಕಡಲನ್ನು ನೋಡಿದಂತಾಯ್ತು. ಕವಿಯ ಸ್ಫೂರ್ತಿಯ ತಾಣವಾದ ಕವಿಶೈಲ ಮತ್ತು ಸುತ್ತಲಿನ ೩೬೦೦ ಎಕರೆ ಅರಣ್ಯವನ್ನು 'ಕುವೆಂಪು ಜೈವಿಕ ಅರಣ್ಯ' ಎಂದು ಘೋಷಿಸಿ ಕಾಡನ್ನು ರಕ್ಷಿಸಲು ಮುಂದಾದ ಸರ್ಕಾರದ ಕ್ರಮ ಅಭಿನಂದನಾರ್ಹ.


ಅಷ್ಟೂ ಕನ್ನಡಿಗರ ಪುಣ್ಯ ಮಡುಗಟ್ಟಿ ಮೂರ್ತರೂಪ ತಳೆದ ಕವಿಯ ಸಾನ್ನಿಧ್ಯದಲ್ಲಿ ನಡೆದ ಈ ಶಿಬಿರ ನನಗೆ ಸಮಾಜವಾದದ ಬಗ್ಗೆ ಇದ್ದ ಒಂದು ಸರಳೀಕೃತ ಕಲ್ಪನೆಯನ್ನು ಬುಡಮೇಲುಗೊಳಿಸಿತು. ಕನ್ನಡದ ಮೌಲಿಕ ಕೃತಿಗಳ ಜೀವಂತ ಮರು ಓದಿಗೆ ನನ್ನನ್ನು ಪ್ರೇರೇಪಿಸಿತು ಹಾಗೂ ಈ ಶಿಬಿರದ ಚರ್ಚೆ, ಚಲಚಿತ್ರಗಳು ಮತ್ತು ಪರಿಸರ ವೀಕ್ಷಣೆ ಎಲ್ಲ ಸೇರಿ ನನ್ನಲ್ಲಿ ಈ ಪ್ರಶ್ನೆಯನ್ನು ಮುಂದಿಟ್ಟಿತು: *'ಗಾಳಿ ಮಲಿನವಾದರೆ, ನೀರು ಮಲಿನವಾದರೆ, ಹೃದಯವೂ ಮಲಿನವಾಗುತ್ತಾ?'* ನನಗೆ ಇದೊಂದು ಆಳದ ಸಮಾಜವಾದಿ ಪ್ರಶ್ನೆಯೇ ಆಗಿದೆ...



(ಮೂಲತಃ ಪಿರಿಯಾಪಟ್ಟಣದವರಾದ ಲೇಖಕ ಪ್ರವೀಣ್‌ಕುಮಾರ್ ಬಿಎಸ್‌ಸಿ ಮತ್ತು ಬಿಎಡ್ ಪದವೀಧರರಾಗಿದ್ದು, ಈಗ ಕೊಡಗಿನ ಕರಿಕೆ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ)

ಸಮಕಾಲೀನ

ಕನ್ನಡ ಭಾಷೆ-ಸಾಹಿತ್ಯ-ಸಮಾಜ: ಒಂದು ಹಿನ್ನೋಟ



ಒಂದು ಭಾಷೆಯ ಶಕ್ತಿ-ಅದರ ಉಳಿದು ಬೆಳೆಯುವ ಶಕ್ತಿ-ಅದು ಸೃಷ್ಟಿಸಬಲ್ಲ ಸಾಹಿತ್ಯ ಸಮೃದ್ಧಿಯನ್ನು ಅವಲಂಬಿಸಿರುತ್ತದೆ ಎಂಬೊಂದು ಮಾತಿದೆ. ಜಗತ್ತಿನಲ್ಲಿ ಕೆಲವೇ ಕೆಲವು ಜನರು ಆಡುವ ಭಾಷೆಗಳು ಈಗಲೂ ಉಳಿದುಕೊಂಡಿರಲು(ಉದಾ: ಇದ್ದಿಶ್) ಅವುಗಳ ಸಾಹಿತ್ಯ ಶಕ್ತಿಯೇ ಕಾರಣವೆಂದು ಹೇಳಲಾಗುತ್ತದೆ. ಏಕೆಂದರೆ ಒಂದು ಭಾಷೆಯಲ್ಲಿನ ಸಾಹಿತ್ಯ ಆ ಭಾಷೆಯನ್ನಾಡುವ ಸಮುದಾಯದ-ಸಮಾಜದ-ಸೃಷ್ಟಿಶಕ್ತಿಯ-ಪ್ರತೀಕವೇ ಆಗಿರುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಕನ್ನಡ ಭಾಷೆ ಜಗತ್ತಿನ ಅತ್ಯಂತ ಹಿರಿಯ ಭಾಷೆಗಳಲ್ಲೊಂದಾಗಿದ್ದು, ಜಗತ್ತಿನ ಯಾವುದೇ ಭಾಷಾ ಸಾಹಿತ್ಯದೊಂದಿಗೆ ಹೆಗಲೆಣೆಯಾಗಿ ನಿಲ್ಲುವ ಸಾಹಿತ್ಯ ಚರಿತ್ರೆಯನ್ನು ಹೊಂದಿದೆ. ಆದರೂ ಇತ್ತೀಚಿನ ದಿನಗಳಲ್ಲಿ ಕನ್ನಡಕ್ಕೆ ಕುತ್ತು ಬಂದಿದೆ ಎಂಬ ಆತಂಕ ಎಲ್ಲೆಡೆಯಿಂದ ಕೇಳಿಬರುತ್ತಿದೆ. ಇದಕ್ಕೆ ಕಣ್ಣಿಗೆ ಕಾಣುವ ಆಧಾರಗಳೂ ಉಂಟು. ಕನ್ನಡದ ಜನಕ್ಕೆ ಕನ್ನಡ ಭಾಷೆ ಹೊಸ ಬದುಕಿನ ಪ್ರೇರಕವಾಗಲೀ ಅಥವಾ ವಾಹಕವಾಗಲೀ ಆಗಿರುವ ಶಕ್ತಿಯ ಬಗ್ಗೆ ನಂಬಿಕೆ ಕಡಿಮೆಯಾಗುತ್ತಿರುವಂತಿದೆ. ಹೊಸ ಬದುಕಿನ ಆಧಾರವಾಗಿರುವ ಹೊಸ ಶಿಕ್ಷಣಕ್ಕೆ ಕನ್ನಡ ಮಾಧ್ಯಮವಾಗಲಾರದೆಂಬ ಈ ಅಪನಂಬಿಕೆಯ ಪ್ರತೀಕವೇ ಕನ್ನಡ ಶಾಲೆಗಳು ಇಂದು ಸಾಮೂಹಿಕವಾಗಿ ಮುಚ್ಚುತ್ತಿರುವ ಪರಿಸ್ಥಿತಿಗೆ ಕಾರಣವಾಗಿದೆ. ಅಂದರೆ ಕನ್ನಡ ಭಾಷೆಯ ನಿಯೋಗ ಶಕ್ತಿ(ಅಂದರೆ ಬಳಕೆಯ ಸಾಧ್ಯತೆಗಳು) ಕಡಿಮೆಯಾಗುತ್ತಿದೆ ಎಂದೇ ಅರ್ಥ.

ಆದರೆ ಇದು ನಿಜವೇ? ಇದು ಕನ್ನಡದ ದೌರ್ಬಲ್ಯವೋ ಅಥವಾ ಕನ್ನಡ ಜನರ ದೌರ್ಬಲ್ಯವೋ? ಈ ಪ್ರಶ್ನೆ ಉದ್ಭವವಾಗಿರುವುದು ಈ ಆಧುನಿಕ ದಿನಮಾನಗಳಲ್ಲಿ. ಅದು ತನ್ನ ನಿರ್ಣಾಯಕ ಘಟ್ಟವನ್ನು ಮುಟ್ಟಿರುವುದು ಇಂದಿನ ಜಾಗತೀಕರಣದ ದಿನಗಳಲ್ಲಿ. ಹಾಗಾಗಿ ಆಧುನಿಕ ಕಾಲದ ಕನ್ನಡ ಸಾಹಿತ್ಯ ಕಟ್ಟಿಕೊಟ್ಟ ಅನುಭವಲೋಕದ ಸ್ವರೂಪ ಮತ್ತು ಅದರ ಅಭಿವ್ಯಕ್ತಿ ಮೀಮಾಂಸೆ ಕುರಿತ ಚರ್ಚೆಗಳು ಈ ಮೇಲಿನ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಕೆಲವು ಹೊಳಹುಗಳನ್ನಾದರೂ ನೀಡಬಲ್ಲವು. ಭಾಷೆಗೂ-ಸಾಹಿತ್ಯಕ್ಕೂ-ಜನರಿಗೂ ಇರುವ ಪರಸ್ಪರ ಸಂಬಂಧಗಳ ವಿನ್ಯಾಸಗಳು ಆ ಭಾಷಾ ಸಮಾಜ ಕಂಡುಕೊಳ್ಳಲೆಣಿಸುವ ಹೊಸ ಬದುಕಿನ ಸುಳಿವುಗಳನ್ನೂ, ಇಂತಹ ಹೊಸ ಹೊರಳಿನ ಸಂಕ್ರಮಣದ ಕಾಲದಲ್ಲಿ ಭಾಷೆಗೊದಗಬಹುದಾದ ಬಿಕ್ಕಟ್ಟಿನ ಮೂಲಗಳನ್ನೂ ಇಂತಹ ಚರ್ಚೆಗಳ ಸಾಲುಗಳ ಮಧ್ಯೆ ಗುರುತಿಸಬಹುದೇನೋ.

ಕನ್ನಡ ಭಾಷೆಯನ್ನಾಡುವ ಜನರ ಭಾವನಾತ್ಮಕ ಐಕ್ಯತೆಯ ಪ್ರತೀಕದ ಆಚರಣೆಯಾಗಿರುವ ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ ಪತ್ರಿಕೆ, ಕನ್ನಡ ಸಾಹಿತ್ಯ ಚರ್ಚೆಯ ಮೂರು ಮುಖ್ಯ ಮಜಲುಗಳನ್ನು ಇಲ್ಲಿ ಮಂಡಿಸುತ್ತಿದೆ. ಜೊತೆಗೆ ಇಂದಿನ ಸಾಹಿತ್ಯ ಕುರಿತ ಎರಡು-ಮೂರು ಟಿಪ್ಪಣಿಗಳನ್ನೂ. ಇವುಗಳ ಓದಿನ ಸಂದರ್ಭದಲ್ಲಿ ಓದುಗರಿಗೇನಾದರೂ ಕನ್ನಡದ ಆತಂಕಕಾರಿಯೆನಿಸುವ ಭವಿಷ್ಯದ ಸುಳಿವುಗಳು ಅಲ್ಲಿ ದೊರೆತವಾದರೆ, ಅದು ಈ ಲೇಖನ ಗುಚ್ಛದ ಪರೋಕ್ಷ ಫಲಗಳಷ್ಟೆ. ನಮ್ಮ ಉದ್ದೇಶ ಇಲ್ಲಿ ಮೂಲತಃ ಸಾಹಿತ್ಯಿಕವಲ್ಲವಾದ್ದರಿಂದ ಇದು ಕನ್ನಡ ಸಾಹಿತ್ಯ ವಿಮರ್ಶೆಯ ಶಿಸ್ತುಬದ್ಧ ಪ್ರಯತ್ನವಲ್ಲ. ಬದಲಿಗೆ, ನಮ್ಮ ವಿಮರ್ಶೆ ನಮ್ಮ ಸಾಹಿತ್ಯವನ್ನು ಅಂದಂದಿಗೆ ಗ್ರಹಿಸಿ ಮಂಡಿಸಿದ ನೋಟಗಳನ್ನು ಇಂದು ಹಿನ್ನೋಡಿ ಪಡೆಯಬಹುದಾದ ಹೊಸ ಸಾಮಾಜಿಕ ಒಳನೋಟಗಳ ಒಂದು ಪ್ರಯತ್ನ. ಕನ್ನಡ ನವೋದಯವು ತನ್ನ ಸಾಹಿತ್ಯದ ಅವಿಭಾಜ್ಯ ಭಾಗವಾಗಿ ಕನ್ನಡ ಜನರ ಬದುಕಿನಲ್ಲಿ ಕನ್ನಡ ಭಾಷೆಯ ಪ್ರಾಥಮಿಕತೆಯನ್ನು ಹಲವು ನೆಲೆಗಳಲ್ಲಿ ಎತ್ತಿಹಿಡಿದುದರಿಂದ ಇಲ್ಲಿ ನವೋದಯ ಸಾಹಿತ್ಯದ ಚರ್ಚೆಯಿಲ್ಲ. ಮುಖ್ಯವಾಗಿ ಕುವೆಂಪು, ಬೇಂದ್ರೆ, ಮಾಸ್ತಿ, ಕಾರಂತ, ಪುತಿನರನ್ನೊಳಗೊಂಡ ಕನ್ನಡ ನವೋದಯ ಆಧುನಿಕ ಕಾಲದ ಕನ್ನಡ ಭಾಷೆಯ, ಜನರ, ಬದುಕಿನ ದೇಸಿ ಆಳಗಳಿಂದ ಸೃಷ್ಟಿಯಾದ ಸಾಹಿತ್ಯವೆಂಬುದು ಸರ್ವಸಾಮಾನ್ಯ ಅಭಿಪ್ರಾಯವಾಗಿರುವುದೇ ಇದಕ್ಕೆ ಕಾರಣ. ಈ ಪರಂಪರೆಗೆ ವಂದಿಸಿಯೇ ಈ ಲೇಖನ ಗುಚ್ಛದ ಲೇಖಕರು ತಮ್ಮ ಈ ಬರಹಗಳನ್ನು ಬರೆದಿದ್ದಾರೆಂದು ನಾವು ಭಾವಿಸುತ್ತೇವೆ -ಸಂ

ಕನ್ನಡಕ್ಕೆ ಸಮೂಹ ಓದುಗ ವರ್ಗವನ್ನು ಕಟ್ಟಿಕೊಟ್ಟ 'ಜನಪ್ರಿಯ' ಸಾಹಿತ್ಯ

-ಕೆ. ಸತ್ಯನಾರಾಯಣ

ಕನ್ನಡ ಸಾಹಿತ್ಯವು ನವೋದಯದಿಂದ ನವ್ಯಕ್ಕೆ ಹೊರಳುತ್ತಿದ್ದ ಕಾಲಾವಧಿಯಲ್ಲಿ ನವೋದಯ ಸಾಹಿತ್ಯವು ಮಾತ್ರವಲ್ಲದೆ ಪ್ರಗತಿಶೀಲ ಸಾಹಿತ್ಯ, ಮಹಿಳಾ ಸಾಹಿತ್ಯ ಮತ್ತು ಪತ್ತೇದಾರಿ ಸಾಹಿತ್ಯವು ಸೇರಿದಂತೆ ಜನಪ್ರಿಯ ಸಾಹಿತ್ಯದ ಹಲವು ಸ್ತರಗಳಿದ್ದವು. ನವ್ಯ ಚಳುವಳಿಯ ಒಂದು ವೈಶಿಷ್ಟ್ಯವೆಂದರೆ ಅದು ತನ್ನ ಮನೋಧರ್ಮದ ಕೃತಿಗಳನ್ನು ಹೇಗೆ ಓದಬೇಕೆಂದು ಮಾತ್ರ ಸೂತ್ರ-ದೃಷ್ಟಿಕೋನಗಳನ್ನು ರೂಪಿಸುತ್ತಿರಲಿಲ್ಲ, ಉಳಿದೆಲ್ಲ ಸಾಹಿತ್ಯವನ್ನು ಕೂಡ ತನ್ನ ದೃಷ್ಟಿಕೋನದಿಂದಲೇ ನೋಡಬೇಕು, ಪುನರ್‌ಮೌಲ್ಯಮಾಪನ ಮಾಡಬೇಕು ಎಂಬ ಒತ್ತಾಯವನ್ನು ಕೂಡ ಹಾಕುತ್ತಿತ್ತು. ನವೋದಯದವರ ಆಕೃತಿ-ಆಶಯ, ಮನೋಧರ್ಮ, ತಾತ್ವಿಕತೆ ಕುರಿತಂತೆ ನಿಖರ ವಾಗ್ವಾದಗಳಿದ್ದರೆ ಉಳಿದ ಸಾಹಿತ್ಯವನ್ನು ಗಂಭೀರವಾಗಿ ಪರಿಗಣಿಸುವ ಅಗತ್ಯವಿಲ್ಲ ಎಂಬ ನಿಲುವನ್ನು ರೂಪಿಸಲಾಯಿತು. ಇದು ನವೋದಯದ ಮುಖ್ಯ ಧ್ವನಿಗಳ ಮೇಲೆ ಮೂಡಿಸಿದ ಮಂಕು ಪ್ರಖರವಾದರೂ ತಾತ್ಕಾಲಿಕವಾಗಿತ್ತು. ನಂತರದ ಎರಡು-ಮೂರು ದಶಕಗಳ ಕಾಲಾವಧಿಯಲ್ಲಿ ಈ ಧ್ವನಿಗಳು ಮುನ್ನೆಲೆಗೆ ಬಂದವು. ಉಳಿದ ಸಾಹಿತ್ಯ ಮಾರ್ಗಗಳ ಕೃತಿಗಳ ವಿಷಯದಲ್ಲಿ ಹಾಗಾಗಲಿಲ್ಲ. ಆದರೆ ಈವತ್ತು ಕೂಡ ಅನಕೃ ತರಾಸು, ಚದುರಂಗ, ಬಸವರಾಜ ಕಟ್ಟೀಮನಿ, ನಿರಂಜನ, ತ್ರಿವೇಣಿ, ಎಂ.ಕೆ, ಇಂದಿರಾ, ಎನ್. ನರಸಿಂಹಯ್ಯ, ಮುಂತಾದ ಲೇಖಕರಿಗೆ ಬೇರೆ ಬೇರೆ ತಲೆಮಾರುಗಳಿಗೆ, ಸಾಮಾಜಿಕ ಹಿನ್ನೆಲೆಗಳಿಗೆ ಸೇರಿದ ವಿಶಾಲವಾದ ಓದುಗ ವರ್ಗವಿದೆ. ಮತ್ತು ಈ ವರ್ಗಕ್ಕೆ ಹೊಸ ಹೊಸ ಓದುಗರು ನಮ್ಮ ಕಾಲದಲ್ಲೂ ಸೇರುತ್ತಲೇ ಇದ್ದಾರೆ.

ಒಂದು ಕಾಲಮಾನದ ಭಾವ ವಿನ್ಯಾಸ (Structure of feeling)ವನ್ನು ಅರ್ಥಮಾಡಿಕೊಳ್ಳಲು ಗಂಭೀರ ಸಾಹಿತ್ಯ ಕೃತಿಗಳನ್ನು ಮಾತ್ರವಲ್ಲದೆ ಜನಪ್ರಿಯ ಸಂಸ್ಕೃತಿ-ಕೃತಿಗಳನ್ನು ಕೂಡ ಪರಿಗಣಿಸಲೇಬೇಕಾಗುತ್ತದೆ. ಕ್ರೀಡೆ, ವಾಸ್ತು-ವಸ್ತ್ರ ವಿನ್ಯಾಸ, ಅಡುಗೆ-ಪ್ರೀತಿ ಮಾಡುವ ರೀತಿ, ಕುಶಲ ವಸ್ತುಗಳ ನಿರ್ಮಾಣ ರೀತಿ ಹೀಗೆ ಹತ್ತು ಹಲವು ಸಂಗತಿಗಳು ಭಾವ ವಿನ್ಯಾಸದೊಳಗೆ ಸೇರಿಕೊಳ್ಳುವುದಾದರೂ ಈ ಬರಹದ ಸೀಮಿತ ವ್ಯಾಪ್ತಿಯಲ್ಲಿ ವಿವಿಧ ಸ್ತರದ ಜನಪ್ರಿಯ ಕೃತಿಗಳನ್ನು ಮತ್ತು ಆ ಕೃತಿಗಳಿಗೆ ಒಟ್ಟು ಸಾಹಿತ್ಯ ಓದುಗ ಸಂಸ್ಕೃತಿಯೊಡನೆ ಇರುವಂತಹ ಸಂಬಂಧದ ಸ್ವರೂಪವನ್ನು ಮಾತ್ರ ಪರಿಶೀಲಿಸಲಾಗಿದೆ.

ಪ್ರಗತಿಶೀಲ ಸಾಹಿತ್ಯವೂ ಸೇರಿದಂತೆ ಎಲ್ಲ ಸ್ತರದ ಜನಪ್ರಿಯ ಸಾಹಿತ್ಯವೂ ಓದುಗವರ್ಗವನ್ನು ವಿಶಾಲವಾಗಿ ಕ್ಷಿಪ್ರವಾಗಿ ಬೆಳೆಸಿತು, ಬೇರೇನೇ ನಕಾರಾತ್ಮಕ ಅಂಶಗಳಿದ್ದರೂ ಇದೇ ಒಂದು ದೊಡ್ಡ ಸಾಧನೆ ಎಂಬುದನ್ನು ಗಂಭೀರ ವಿಮರ್ಶೆಯ ಮಾತುಗಳಾಗಿ ಒಂದು ರೀತಿಯ left hand compliments ಕೊಡುತ್ತಾ ಬಂದಿರುವುದು ವಿಮರ್ಶಾ ವಲಯದಲ್ಲಿ ಈಗಾಗಲೇ ಕ್ಲೀಷೆಯು ಮಾತಾಗಿದೆ. ಈ ಮಾತನ್ನು ಬದಿಗಿಟ್ಟು ಮುಂದಿನ ಮಾತುಗಳನ್ನು ಬರೆಯಲಾಗಿದೆ.

ಈ ರೀತಿಯ ವಿದ್ಯಮಾನ ನಮ್ಮ ಸಂಸ್ಕೃತಿಗೆ ಮಾತ್ರವೇ ವಿಶಿಷ್ಟವಾದುದಲ್ಲ. The American dream and popular Novel ಕೃತಿಯ ಲೇಖಕ ಎಲಿಜಬೆತ್ ಲಾಂಗ್ ಆಧುನಿಕ ಸಮಾಜದಲ್ಲಿ ಜನಪ್ರಿಯ ಸಾಹಿತ್ಯ ಹೇಗೆ ಅಪೇಕ್ಷಣೀಯ ಅಂಶಗಳನ್ನು ಒಳಗೊಂಡಿರುತ್ತದೆ ಎಂಬುದನ್ನು



ನರಸಿಂಹಯ್ಯ ಅನಕೃ ತರಾಸು ಕಟ್ಟಿಮನಿ ನಿರಂಜನ ಚದುರಂಗ ತ್ರಿವೇಣಿ, ಎಂ.ಕೆ. ಇಂದಿರಾ ಅನುಪಮಾ

ಉದಾಹರಣೆಗಳೊಂದಿಗೆ ಚರ್ಚಿಸುತ್ತಾನೆ. ಹೊಸ ಕಾಲದ ಬದುಕಿನ ವಿನ್ಯಾಸಗಳ ಬಗ್ಗೆ ಈ ವರ್ಗದ ಕೃತಿಗಳಿಗಿರುವ ತಳಮಳ ಆತಂಕವನ್ನು ನಾವು ಕಡೆಗಣಿಸುವುದು ಹೇಗೆ ಎಂಬುದು ಆತನ ಪ್ರಶ್ನೆ. ಜನಪ್ರಿಯ ಕಥನ ಮತ್ತು ನಿರೂಪಣೆಗಳ ಮೂಲಕವೂ ಶಿಷ್ಟ – ಅಕೆಡೆಮಿಕ್ ಸಾಹಿತ್ಯ ಲೋಕ ಗಮನಿಸದ ನಾನಾ ರೀತಿಯ ನಾನಾ ಸ್ತರಗಳ ಅನುಭವಗಳು ಪ್ರಕಟವಾಗುತ್ತವೆ ಮತ್ತು ಜನಪ್ರಿಯ ಸಾಹಿತ್ಯ ಕೃತಿಗಳನ್ನು ಓದುವುದೆಂದರೆ ಸಮಕಾಲೀನ ಜೀವನದಲ್ಲಿ ಭಾಗಿಯಾಗುವ ರೀತಿಯೂ ಹೌದೆಂದು ಈ ಲೇಖಕ ಹೇಳುತ್ತಾನೆ.

ಬೆಂಗಳೂರು ಒಂದು ನಗರವಾಗಿ ಹೇಗೆ ವಿಕಾಸಗೊಂಡಿತು ಎಂಬುದನ್ನು ತಿಳಿಯಲು ಅನಕೃ ಕಾದಂಬರಿಗಳು ಉತ್ತಮ ಆಕರವಲ್ಲವೇ? ತರಾಸು ಕಾದಂಬರಿಗಳ ವಸ್ತು–ಅನುಭವ ವೈವಿಧ್ಯವನ್ನು ಓದುವಾಗ ನಮಗೂ ಸಮಕಾಲೀನತೆಗೆ ಸ್ಪಂದಿಸಿದ ಅನುಭವವಾಗುವುದಿಲ್ಲವೇ? ಬಸವರಾಜ ಕಟ್ಟೀಮನಿ–ಕೃಷ್ಣಮೂರ್ತಿ ಪುರಾಣಿಕರ ಕಾದಂಬರಿಗಳು ಸ್ವಾತಂತ್ರ್ಯ ಚಳುವಳಿಯ ಒಳಸುಳಿಗಳು, ಆದರ್ಶ ಪ್ರಿಯತೆಯನ್ನು ಓದುಗರಿಗೆ ಮನದಟ್ಟು ಮಾಡಿಕೊಡಲಿಲ್ಲವೇ? ಕಾರ್ಮಿಕ ಚಳುವಳಿಯನ್ನು ಕುರಿತು ನಮ್ಮಲ್ಲಿ ಬರೆದವರು ಕಟ್ಟೀಮನಿ, ಬಲ್ಲಾಳರಂತಹ ಜನಪ್ರಿಯ ಲೇಖಕರೇ ಅಲ್ಲವೇ? 'ಈ ಭುವಿ ಈ ಬಾನು' ಎಂಬ ಜನಪ್ರಿಯ ಶೈಲಿಯ ಕಾದಂಬರಿಯೊಂದನ್ನು ನಾನು ಕಾಲೇಜು ದಿನಗಳಲ್ಲಿ ಓದಿದ್ದೆ, ಲೇಖಕರ ಹೆಸರು ಮರೆತಿದೆ. ಕಾರ್ಮಿಕ ಸಂಘಗಳ ಚಳುವಳಿಗಳ ಒಳಸುಳಿಗಳನ್ನು ಆ ಕಾದಂಬರಿ ಮನಮುಟ್ಟುವಂತೆ ಚಿತ್ರಿಸಿತ್ತು. ಓದುಗರಾಗಿ ನಾವು ನಮ್ಮ ಕಣ್ಣೆದುರಿಗಿನ ಪ್ರಪಂಚದ ಸಕಲ ಬೆಳವಣಿಗೆಗಳು ಸಾಹಿತ್ಯದಲ್ಲಿ ಫಲಿತವಾಗಿ ಕೃತಿಗಳಾಗಿ ಮೂಡಬೇಕೆಂದು ಬಯಸುತ್ತೇವೆ. ಒಂದೇ ಒಂದು ಸಾಹಿತ್ಯ ಚಳುವಳಿಯ ಕೃತಿಗಳು ಎಷ್ಟೇ ಸೂಕ್ಷ್ಮ ಸ್ತರದ್ದಾದರೂ ಓದುಗನಿಗೆ ಬೇಕಾದ ವೈವಿಧ್ಯವನ್ನು ಕೊಡುವುದಿಲ್ಲ. ಇದೇನು ಕುವೆಂಪು, ಇದೇನು ಕಾರಂತ ಯಾವಾಗಲೂ ಮಲೆನಾಡು ಕರಾವಳಿಯ ಬಗ್ಗೆಯೇ ಬರೆಯುತ್ತಾರೆ? ನಮ್ಮ ಬಯಲು ಸೀಮೆ– ಹಳೆ ಮೈಸೂರಿನ ಬಗ್ಗೆ ಏನೂ ಬರೆಯುವುದಿಲ್ಲ ಎಂದು ನನಗೆ ಯಾವಾಗಲೂ ಬೇಸರವಾಗುತ್ತಿತ್ತು. ಇಂತಹ ಬೇಸರವನ್ನು ನೀಗಿಸಿಕೊಳ್ಳಲು ಅನಕೃ ತರಾಸುರವರಂತಹ ಕಾದಂಬರಿಗಳು ಮಾತ್ರವಲ್ಲದೆ ಸಾಹಿತ್ಯ ಚರಿತ್ರೆಯಲ್ಲಿ ಹೇಳ ಹೆಸರಿಲ್ಲದೆ ಹೋಗಿರುವವರ ಎಷ್ಟೋ ಕತೆ–ಕಾದಂಬರಿಗಳು ನನ್ನ ನೆರವಿಗೆ ಬರುತ್ತಿದ್ದುವು.

ಪೋಲೀಸ್ ಕಾಲೋನಿಯ ಬಗ್ಗೆ ಕಟ್ಟೀಮನಿಯವರ ಕಾದಂಬರಿ, ಪತ್ರಕರ್ತರ ಬಗ್ಗೆ ತರಾಸು ಕಾದಂಬರಿ ಕುರಿತು ಎಲ್ಲರಿಗೂ ಗೊತ್ತಿದೆ. ಕಾಮರಾಜ್ ಎಂಬ ಲೇಖಕರೊಬ್ಬರು ಆ ಕಾಲಕ್ಕೇ ಒಬ್ಬ ಮಹಿಳಾ ಬಸ್ ಕಂಡಕ್ಟರ್ ಜೀವನ ಕುರಿತು ಕಾದಂಬರಿ ಬರೆದಿದ್ದರು. ಇದು ನಾನು ಮತ್ತೆ ಮತ್ತೆ ಓದಿದ ಕಾದಂಬರಿಯಾಗಿದ್ದು ಈಗ ಹೊಳೆಯುತ್ತಿರುವ ಹಾಗೆ ಭೈರಪ್ಪನವರ 'ಕವಲು'ವಿಗಿಂತಲೂ ಹೆಚ್ಚು ಆಧುನಿಕವಾಗಿತ್ತು. ಮತ್ತು ನನ್ನ 'ನಿಜ ಕವಲು' ಕಥೆ ಕೂಡ ಕಾಮರಾಜರ ಕಾದಂಬರಿಯಿಂದಲೇ ಪ್ರೇರಣೆ ಪಡೆದಿರಬೇಕು.

ಎನ್. ನರಸಿಂಹಯ್ಯನವರ ಪತ್ತೇದಾರಿ ಮತ್ತು ತಂತ್ರ ಮಂತ್ರದ ಕಾದಂಬರಿಗಳನ್ನೇ ನೋಡಿ. ಅಪರಾಧ, ಅದರ ಶೋಧನೆ, ಹಿಂಸೆ– ಇವುಗಳನ್ನೆಲ್ಲಾ ಕುರಿತು ಆ ಕಾಲದಲ್ಲಿದ್ದ ಒಂದು ಸರಳ ವಿನ್ಯಾಸವನ್ನು ಕೂಡ ಈ ಕೃತಿಗಳು ಮಂಡಿಸುತ್ತವೆ. ಅಪರಾಧ ಮತ್ತು ಹಿಂಸೆ ಇಷ್ಟು ಸಂಕೀರ್ಣವಾಗಿರಲಿಲ್ಲ, ಇಡೀ ಸಮಾಜವು, ಜನಸಂಖ್ಯೆಯ ಬಹುಭಾಗವು ನೀತಿಪರವಾಗಿರುತ್ತದೆ, ಮುಗ್ಧವಾಗಿರುತ್ತದೆ, ಅಪರಾಧ ಹಿಂಸೆಗಳಲ್ಲಿ ತೊಡಗುವವರು ಕೆಲವೇ ಕೆಲವರು ತಪ್ಪು ಮಾಡಿದವರು, ಪಾಪ ಮಾಡಿದವರು ಸಿಕ್ಕಿಹಾಕಿಕೊಳ್ಳುವುದು ಖಂಡಿತ. – ಇಂತಹ ಒಂದು ತಿಳುವಳಿಕೆಯ ವಿನ್ಯಾಸವನ್ನು ಮೂಡಿಸಿದ್ದರಿಂದಲೇ ನರಸಿಂಹಯ್ಯನವರ ಕಾದಂಬರಿಗಳು ಓದುಗರಿಗೆ ಆಪ್ತವಾದದ್ದು. ಈಗಿನ ಓದುಗರಿಗೆ ಆ ಕಾಲದ ಅಪರಾಧ ಹಿಂಸೆ – ಕ್ರೌರ್ಯಗಳ ಪ್ರಪಂಚವು ಅಷ್ಟು ಸರಳವಾಗಿತ್ತು ಎನ್ನುವುದೇ ಒಂದು ರೀತಿಯ ನಾಸ್ಟಾಲ್ಜಿಯಾಕ್ಕೆ ಕಾರಣವಾಗಬಹುದು. ಲೇಖಕಿಯರ ಕಾದಂಬರಿಗಳಂತೂ ಇನ್ನೂ ಸಂಕೀರ್ಣವಾದ, ಇನ್ನೂ ಸಮಕಾಲೀನವಾದ ವಿನ್ಯಾಸವನ್ನು ಮಂಡಿಸುತ್ತವೆ. ಹೆಂಗಸರು ಓದುಗರಾಗಿ, ಒಂದು ವರ್ಗವಾಗಿ ರೂಪುಗೊಳ್ಳುತ್ತಿದ್ದ, ವಿಸ್ತಾರವಾಗುತ್ತಿದ್ದ ರೀತಿಗಳಲ್ಲೇ ಲೇಖಕಿಯರ ಕೃತಿಗಳ ಸಂಖ್ಯೆಯೂ ಹೆಚ್ಚಿತು. ಮಲತಾಯಂದಿರಿಂದ ಹಿಂಸೆಗೊಳಗಾಗುವುದು, ವಯಸ್ಸಾದ ಗಂಡಸರಿಗೆ ಎರಡನೇ ಮೂರನೇ ಹೆಂಡತಿಯಾಗುವುದು, ಸತತ ಹೆರಿಗೆಗಳಿಂದ ನರಗಳು ದುರ್ಬಲಗೊಂಡು ಹಿಸ್ಟೀರಿಯಾ, ಮತಿಭ್ರಮಣೆಗೆ ಒಳಗಾಗುವುದು, ಇವೆಲ್ಲವನ್ನೂ ತೀವ್ರವಾಗಿ ಅನುಭವಿಸುತ್ತಿದ್ದ ಮಹಿಳಾ ಓದುಗರು ತಮ್ಮ ಮಾನಸಿಕ ಬಿಡುಗಡೆ – ಲಂಘನವನ್ನು ಯಾರ ಕೃತಿಗಳಲ್ಲಿ ಕಂಡುಕೊಳ್ಳಬೇಕು? ಸಾಹಿತ್ಯ ಲೋಕದ ವಿಮರ್ಶಾತ್ಮಕ ಓದು ಬೇರೆ, ನಮ್ಮ ನಮ್ಮ ಕಷ್ಟ ಸುಖಕ್ಕೆ ಹತ್ತಿರವಾಗುವ ಕೃತಿಗಳ ಓದು ಬೇರೆ. ಇದು ನಮ್ಮ ಸಾಹಿತ್ಯ ವಿಶ್ಲೇಷಕರಿಗೆ ಅರ್ಥವಾಗಲಿಲ್ಲ.

ನಮ್ಮೆಲ್ಲರ ಬದುಕಿನ ಮುಖ್ಯ ಮತ್ತು ದೊಡ್ಡ ಭಾಗ ಕೌಟುಂಬಿಕ ವಲಯದೊಳಗೆ, ನೆಂಟರಿಷ್ಟರ ಚೌಕಟ್ಟಿನೊಳಗಡೆಯೇ ಮುಗಿದುಹೋಗುತ್ತದೆ. ಹೆಂಗಸರ ವಿಷಯದಲ್ಲಿ ಈ ಮಾತು ಇನ್ನೂ ನಿಜ. ಇಂತಹ ಕೌಟುಂಬಿಕ ವಿನ್ಯಾಸವನ್ನು ಲೇಖಕಿಯರ ಕೃತಿಗಳು ಸೂಕ್ಷ್ಮವಾಗಿಯೂ, ಆಪ್ತವಾಗಿಯೂ ಹಿಡಿದಿಟ್ಟುಕೊಟ್ಟವು. ಯಾವ ದೃಷ್ಟಿಯಿಂದಲೂ ಇದು ಕಡಿಮೆ ಸಾಧನೆಯಲ್ಲ.

ಸಂವೇದನೆ ಮತ್ತು ವಿಶಿಷ್ಟತೆಯ ನೆಲೆಗಳಲ್ಲೂ ಈ ವರ್ಗದ ಕೃತಿಗಳ ಸಾಧನೆ ಮೌಲಿಕವೇ. ನಿರಂಜನರು ಪ್ರಗತಿಶೀಲರು ಮತ್ತು ಕಮ್ಯುನಿಸ್ಟರು ಎಂಬ ಕಾರಣಕ್ಕೇ ನವ್ಯರು ಮತ್ತು ಇನ್ನೊಂದು ವರ್ಗದ ಪ್ರಗತಿಶೀಲರು ಅವರ ಮೌಲಿಕ ಕೃತಿಗಳನ್ನು ಪರಿಗಣಿಸಲಿಲ್ಲ. ತ್ರಿವೇಣಿಯವರಂತೂ ಜನಪ್ರಿಯ ನಿರೂಪಣೆಯ ಸ್ತರದಲ್ಲೇ ಬದುಕನ್ನು ಎರಡೂ ಕೈಗಳಿಂದ ಮುಟ್ಟಿ ನೋಡಿದ ಹಾಗೆ ಬರೆಯುತ್ತಿದ್ದರು. ಹೊಸ ಕಾಲದ ಹೆಂಗಸಿನ ಎಲ್ಲ ಆಕಾಂಕ್ಷೆಗಳು, ಸಮಸ್ಯೆಗಳು ಬೀಜ ರೂಪದಲ್ಲಿಯೂ, ಹೊಳಹಿನ ರೂಪದಲ್ಲಿಯೂ ಪ್ರಕಟವಾದದ್ದು ಅವರ ಕಾದಂಬರಿಗಳಲ್ಲೇ, ತ್ರಿವೇಣಿ, ಇಂದಿರಾರಂತಹವರ ಸಮಸ್ಯೆ ಏನೆಂದರೆ, ಸಾಹಿತ್ಯ ವಲಯದ ಶಿಷ್ಟವರ್ಗದ ಓದುಗರು ಮತ್ತು ವಿಮರ್ಶಕರಿಗೆ ಪ್ರಿಯವಾಗುವಂತೆ, ಅನುಕೂಲವಾಗುವಂತೆ ಬರೆಯದೆ ಹೋದದ್ದು, ಆದರೆ ಸಂಸ್ಕೃತಿ ಚಿಂತನೆಯೆಂಬ ಈಚಿನ ಬೆಳವಣಿಗೆಯು ತ್ರಿವೇಣಿ–ಇಂದಿರಾ ಮಾತ್ರವಲ್ಲ, ಒಟ್ಟು ಜನಪ್ರಿಯ ಸಾಹಿತ್ಯವನ್ನು ಇನ್ನೂ ಗಂಭೀರವಾಗಿ ಇನ್ನೂ ವಿವರವಾಗಿ ಪರಿಶೀಲಿಸಬೇಕಿತ್ತು. ಸಂಸ್ಕೃತಿ ಚಿಂತನೆಯ ಮುಖ್ಯ ದೋಷವೆಂದರೆ ಅದಕ್ಕೆ ಆಶಯಗಳು ಮತ್ತು ಸ್ಥೂಲ ಗ್ರಹಿಕೆಯ ಬಗ್ಗೆ ಇರುವ ವಿಪರೀತ ಗೀಳು. ಕೃತಿಗಳ ಬಗ್ಗೆ ಇರುವ ಗೌರವ ಕಡಿಮೆ. ನಾವು ಜನಪ್ರಿಯ ಲೇಖಕರೆಂದು ಗುರುತಿಸುವವರೆಲ್ಲ ಕೇವಲ ಜನಪ್ರಿಯ ಕೃತಿಗಳನ್ನು ರಚಿಸಿಲ್ಲ. ಚದುರಂಗರಂತವರು ಎಲ್ಲ ಸಾಹಿತ್ಯ ಚಳುವಳಿಗಳು–ಬೆಳವಣಿಗೆಗಳಿಗೂ ಸ್ಪಂದಿಸುತ್ತಾ ಪ್ರಯೋಗಶೀಲರಾದವರು. ತರಾಸು ಕಾದಂಬರಿಕಾರರಾಗಿ ಪ್ರಸಿದ್ಧರಾಗಿದ್ದರೂ ಒಂದು ಹಂತದಲ್ಲಿ ಸಣ್ಣ ಕಥೆಗಳನ್ನು ಪ್ರಯೋಗಶೀಲವಾಗಿ ಬರೆಯಬಹುದೇ ಎಂದು ಯೋಚಿಸಿದವರು. ಎಂ.ಕೆ ಇಂದಿರಾರ ವಿಪುಲ ಬರವಣಿಗೆಯಿಂದಾಗಿ ಅವರ ಕೆಲವೇ ಮೌಲಿಕ ಕೃತಿಗಳು ಹಿನ್ನೆಲೆಗೆ ಸರಿದವು, ಕಾದಂಬರಿಕಾರರಾಗಿ ಅನಕೃ ಸಾಧನೆ ಏನೇ ಇರಲಿ, ಕನ್ನಡದ ಅಸ್ಮಿತೆಯನ್ನು ಸಂಗೀತ, ಚಲನಚಿತ್ರ, ಚಿತ್ರಕಲೆ, ಮುಂತಾದ ಕ್ಷೇತ್ರಗಳಲ್ಲಿ ಗಟ್ಟಿಯಾಗಿ ಸ್ಥಾಪಿಸಲು ಸಾಕಷ್ಟು ಕಾಣಿಕೆ ನೀಡಿದವರು.

ವಿಚಿತ್ರವೆಂದರೆ ನಮ್ಮ ಜನಪ್ರಿಯ ಸಾಹಿತ್ಯವನ್ನು ಸರಿಯಾಗಿ ಗುರುತಿಸಿರುವುದು ಜನಪ್ರಿಯ ಸಂಸ್ಕೃತಿಯ ಇನ್ನೊಂದು ಭಾಗವಾದ ಚಲನಚಿತ್ರ ಮಾಧ್ಯಮವೇ. ಜನಪ್ರಿಯ ಕಥೆ ಕಾದಂಬರಿಗಳು ಗ್ರಹಿಸಿರುವ ಬದುಕಿನ ವೈವಿಧ್ಯವನ್ನು ಚಲನಚಿತ್ರ ವಲಯದವರು ಸಾಹಿತ್ಯ ವಿಮರ್ಶಕರಿಗಿಂತಲೂ ಮುಂಚೆ ಮತ್ತು ಹೆಚ್ಚು ಸೂಕ್ಷ್ಮವಾಗಿ ಗ್ರಹಿಸಿದ್ದರಿಂದಲೇ ಪ್ರಗತಿಶೀಲರ ಮತ್ತು ಲೇಖಕಿಯರ ಎಷ್ಟೋ ಕೃತಿಗಳು ಇನ್ನೊಂದು ಮಾಧ್ಯಮದಲ್ಲೂ ಬೆಳಕು ಕಂಡವು. ಒಂದು ಕಾಲದಲ್ಲಿ



ಕಾದಂಬರಿ ಆಧಾರಿತ ಮೊದಲ ಕನ್ನಡ ಚಿತ್ರ 'ಕರುಣೆಯೇ ಕುಟುಂಬದ ಕಣ್ಣು' ಚಲಚಿತ್ರದ (ಕೃಷ್ಣಮೂರ್ತಿ ಪುರಾಣಿಕರ ಕೃತಿ 'ಧರ್ಮದೇವತೆ' ಆಧರಿಸಿದ್ದು) ಭಿತ್ತಿಚಿತ್ರ


ಒಂದು ಸಂಸ್ಕೃತಿಯಲ್ಲಿ ಜನರು ಹೇಗೆ ಹೇಗೆ ಬದುಕಿದರು/ಬದುಕುತ್ತಾರೆ ಎಂಬುದನ್ನು ತಿಳಿಯಲು ಸಾಹಿತ್ಯ ಕೃತಿಗಳನ್ನಾಧರಿಸಿದ ನಮ್ಮ ಜನಪ್ರಿಯ ಚಲನಚಿತ್ರಗಳು ಮೌಲಿಕ ಆಕರಗಳಾಗಿವೆ.

ಜನಪ್ರಿಯ ಸಾಹಿತ್ಯ ಸಂಸ್ಕೃತಿಯನ್ನು ವಿರೋಧಿಸಿದವರೆಲ್ಲ ಜನಪ್ರಿಯತೆಯ ಅಂಶ ಮತ್ತು ಅದರ ಬಯಕೆಯನ್ನು ತಮ್ಮ ತಮ್ಮ ಬರವಣಿಗೆ ಮತ್ತು ಸಾಂಸ್ಕೃತಿಕ ವ್ಯಕ್ತಿತ್ವದಿಂದ ದೂರವಿಟ್ಟರು ಎಂದೇನಲ್ಲ. ಲಂಕೇಶರ ಪತ್ರಿಕೋದ್ಯಮ ಜನಪ್ರಿಯ ಸಂಸ್ಕೃತಿಯ ಹಲವು ಸ್ತರಗಳನ್ನು ಬಳಸಿಕೊಂಡಿತು. ಯಾವಾಗಲೂ ಓದುಗ ಸ್ನೇಹಿಯಾಗಿರಬೇಕು ಎಂಬ ಆಶಯದ ತೇಜಸ್ವಿ ಗಂಭೀರವಾದ ಸಂಗತಿಗಳ ನಿರೂಪಣೆಗೆ ಬಳಸಿದ್ದು ಜನಪ್ರಿಯ ಸಾಹಿತ್ಯದ ನಿರೂಪಣಾ ಶೈಲಿಯನ್ನೇ, ಕಥನವನ್ನೇ. ಜನಪ್ರಿಯ ಸಂಸ್ಕೃತಿ –ಗಂಭೀರ ಸಂಸ್ಕೃತಿಗಳ ನಡುವಿನ ಗೆರೆ ತುಂಬಾ ತೆಳುವಾದದ್ದು ಎಂಬುದನ್ನು ಸೂಚಿಸಲು ಈ ಮಾತು. ನಮ್ಮ ನಮ್ಮ ವೈಯಕ್ತಿಕ ಕೌಟುಂಬಿಕ ಜೀವನದಲ್ಲೂ ಸಂತೋಷದ ಜೀವಂತಿಕೆಯ ಕ್ಷಣಗಳು ನಮಗೆ ಸಿಗುವುದು ಜನಪ್ರಿಯ ಸಾಹಿತ್ಯ ಸಂಸ್ಕೃತಿಯ ಸ್ತರಗಳಲ್ಲೇ ಎಂಬುದನ್ನು ಒಪ್ಪಿಕೊಳ್ಳುವ ಪ್ರಾಮಾಣಿಕತೆ ನಮಗಿರಬೇಕು.

ತತ್ವಜ್ಞಾನಿ ಬರ್ಟ್ರೆಂಡ್ ರಸಲ್ ಹೇಳುವ ಹಾಗೆ ಯಾವ ಮನುಷ್ಯನೂ ನೂರಕ್ಕೆ ನೂರರಷ್ಟು ಗಂಭೀರವಾಗಿರುವುದಿಲ್ಲ. ಜನಪ್ರಿಯ ಸಂಸ್ಕೃತಿಗೆ ಸ್ಪಂದಿಸುವ, ಅದರಿಂದ ಆನಂದ ಪಡುವ ಸ್ತರಗಳು ಎಲ್ಲಾ ಮನುಷ್ಯರಲ್ಲೂ ಇದ್ದೇ ಇರುತ್ತವೆ ಎಂಬುದು ಆತನ ಮತ.

ಜನಪ್ರಿಯ ಸಾಹಿತ್ಯದ ಒಂದು ವೈಶಿಷ್ಟ್ಯವೆಂದರೆ ಅದು ತನ್ನ ಪಾಡಿಗೆ ತಾನಿರುತ್ತದೆ. ಅದರಲ್ಲಿ ಮೌಲಿಕವಾದದ್ದು ಉಳಿಯುತ್ತದೆ ಇಲ್ಲದಿದ್ದರೆ ಕಾಲಪ್ರವಾಹದಲ್ಲಿ ನಾಶವಾಗುತ್ತದೆ. ಯಾರ ಗಮನ ಮನ್ನಣೆಯನ್ನು ಅದು ಬೇಡುವುದಿಲ್ಲ.

ನಮ್ಮ ಕಾಲದಲ್ಲಿ ಸಮಸ್ಯೆಯಿರುವುದು ಜನಪ್ರಿಯ ಸಾಹಿತ್ಯ ಕೃತಿಗಳ ನೆಲೆಗಳಿಂದಲ್ಲ. ತೋರುಗಂಭೀರ ಕೃತಿಗಳಿಂದ. ತೋರುಗಂಭೀರ ಕೃತಿಗಳು ವೈಚಾರಿಕವಾಗಿ, ಭಾವನಾತ್ಮಕವಾಗಿ ಸ್ವಂತಿಕೆಯುಳ್ಳವಲ್ಲ, ಸಾಮಾನ್ಯವಾಗಿ ಎರಡೂವರೆ ಇಲ್ಲ ಮೂರನೇ ದರ್ಜೆಯ ಕೃತಿಗಳು. ಹಾಗಾಗಿ ಯಾವಾಗಲೂ ಮನ್ನಣೆಗೆ ಮತ್ತು ಗಮನಕ್ಕೆ ಸದಾ ಹಾತೊರೆಯುತ್ತಿರುತ್ತವೆ. ಹಾಗೂ ಪಿತೂರಿ ಮಾಡುತ್ತಿರುತ್ತವೆ. ತೋರುಗಂಭೀರ ಸಾಹಿತ್ಯದಿಂದ ಗಂಭೀರ ಸಾಹಿತ್ಯ ಕೃತಿಗಳಿಗೆ ಮಾತ್ರವಲ್ಲ, ಜನಪ್ರಿಯ ಸಾಹಿತ್ಯ ಕೃತಿಗಳಿಗೂ ಕೂಡ ತೊಂದರೆಯಾಗುತ್ತದೆ.




(ವೃತ್ತಿಯಿಂದ ಆದಾಯ ತೆರಿಗೆ ಆಯುಕ್ತರಾಗಿ ನಿವೃತ್ತರಾಗಿರುವ ಲೇಖಕ ಕೆ.ಸತ್ಯನಾರಾಯಣ ಕನ್ನಡದ ಮುಖ್ಯ ಕಥನಕಾರ, ಪ್ರಬಂಧಕಾರ ಹಾಗೂ ಸಾಹಿತ್ಯ ಚಿಂತಕರಲ್ಲೊಬ್ಬರಾಗಿದ್ದು ಸದ್ಯಕ್ಕೆ ಬೆಂಗಳೂರಿನಲ್ಲಿ ನೆಲೆಸಿದ್ದಾರೆ)

ನವ ಶಿಕ್ಷಿತ ವರ್ಗದ ನಿರಾಸೆ, ತಬ್ಬಿಬ್ಬುಗಳ ಅಭಿವ್ಯಕ್ತಿಯಾದ 'ನವ್ಯ'

–ಡಾ. ರಾಜೇಂದ್ರ ಚೆನ್ನಿ


ನವ್ಯದ ಜೊತೆಗಿನ ನಮ್ಮ ಬಹುಪಾಲು ತಕರಾರುಗಳು ನವ್ಯ ವಿಮರ್ಶೆಯ ಕೆಲವು ಅತಿರೇಕಗಳ ಬಗ್ಗೆ ಹಾಗೂ ಅದರ ಸಾಂಸ್ಕೃತಿಕ ರಾಜಕೀಯದ ಬಗ್ಗೆ ಇದ್ದಂತೆ ತೋರುತ್ತವೆಯೇ ಹೊರತು ನವ್ಯದ ಪ್ರಭಾವದಲ್ಲಿ ಹೊರಬಂದ ಸೃಜನಶೀಲ ಸಾಹಿತ್ಯದ ಬಗ್ಗೆ ಅಷ್ಟಾಗಿ ಇಲ್ಲ. ಅಡಿಗರ ಕಾವ್ಯ, ಚಿತ್ತಾಲ, ಅನಂತಮೂರ್ತಿಯವರ ಸಣ್ಣಕತೆಗಳು ಹಾಗೂ ಕಾದಂಬರಿಗಳು, ಶಾಂತಿನಾಥ ದೇಸಾಯರ ಕಾದಂಬರಿಗಳು, ಲಂಕೇಶರ ವೈವಿಧ್ಯಪೂರ್ಣ ಬರವಣಿಗೆ ತೇಜಸ್ವಿಯವರ ಮೊದಲ ಘಟ್ಟದ ಬರಹ ಇವೆಲ್ಲವು ನವ್ಯ ಸಂದರ್ಭದಲ್ಲಿ ಬಂದವು ಮತ್ತು ನವ್ಯವನ್ನು ಒಪ್ಪಿಕೊಂಡು ಬಂದವು ಎನ್ನುವುದಾದರೆ ಮತ್ತು ಈ ಬರಹಗಳು ಅಂದಿನ ಅತ್ಯುತ್ತಮ ಬರಹಗಳು ಎನ್ನುವುದಾದರೆ (ನಾನು ಹಾಗೆಂದುಕೊಂಡಿದ್ದೇನೆ) ಈ ಮಾತು ನಿಜವೆನ್ನಿಸುತ್ತದೆ.

ಇನ್ನೊಂದು ಮಾತನ್ನೂ ಇಲ್ಲಿ ಹೇಳಬೇಕಿದೆ. ನವ್ಯವನ್ನು ಕೇವಲ ಅಡಿಗ–ಅನಂತಮೂರ್ತಿಯವರ 'ಬ್ರಾಹ್ಮಣ' ಸಂವೇದನೆಯ ಅಭಿವ್ಯಕ್ತಿ ಎನ್ನಲಾಗದು. ಏಕೆಂದರೆ ನವ್ಯವು ಕನ್ನಡದಲ್ಲಿ ಮಾತ್ರವಲ್ಲ ೧೯೬೦ ಹಾಗೂ ೭೦ರ ದಶಕದಲ್ಲಿ ಭಾರತದ ಎಲ್ಲಾ ಪ್ರಮುಖ ಭಾಷೆಗಳಲ್ಲಿ ಬಹುಮುಖ್ಯ ಪ್ರಭಾವವಾಗಿ ಕೆಲಸ ಮಾಡಿತು. ಅಂದರೆ ಸ್ವಾತಂತ್ರ್ಯಕ್ಕೂ ಬಂದ ನಂತರದ ದಶಕಗಳಲ್ಲಿ ರೂಪುಗೊಂಡ ಸಾಮಾಜಿಕ–ರಾಜಕೀಯ ಸ್ಥಿತಿಗತಿಗಳಿಗೂ ನವ್ಯಕ್ಕೆ ನೇರವಾದ ಸಂಬಂಧಗಳಿವೆ. ಅದನ್ನು ಕೇವಲ ಸಾಹಿತ್ಯಿಕ ಸಂಪ್ರದಾಯದೊಳಗೆ ನಡೆದ ಪರಿವರ್ತನೆಯೆಂದು ವಿವರಿಸುವುದು ಸಮರ್ಪಕವಲ್ಲ. ನವೋದಯವು ಭಾರತೀಯ ಪುನರುಜ್ಜೀವನವೆಂದು ಕರೆಯಲಾಗುವ ಚಾರಿತ್ರಿಕ ಮಹಾಮಂಥನದ ಅಭಿವ್ಯಕ್ತಿಯಾಗಿತ್ತು. ಅದು ಕೂಡ ಎಲ್ಲಾ ಭಾರತೀಯ ಭಾಷೆಗಳಲ್ಲಿ ಸಮಾನವಾದ ಅನುಭವ ಹಾಗೂ ಸಾಂಸ್ಕೃತಿಕ ಅಪೇಕ್ಷೆಗಳನ್ನು ಅಭಿವ್ಯಕ್ತಿಸಿತು. ಅದು ಇಪ್ಪತ್ತನೇ ಶತಮಾನದ ಅಪಾರ ಸಂಖ್ಯೆಯ ಅದ್ಭುತವಾದ ಕೃತಿಗಳನ್ನು ಈ ಭಾಷೆಗಳಲ್ಲಿ ಸೃಷ್ಟಿಸಿತು.




ಕೀರ್ತಿನಾಥ ಕುರ್ತುಕೋಟಿ

ಇಷ್ಟಾದ ಮೇಲೆ ೧೯೬೦ ಹಾಗೂ ೭೦ರ ದಶಕಗಳಲ್ಲಿ ಈ ಸಂಪ್ರದಾಯದ ಬಗ್ಗೆ ತೀವ್ರವಾದ ಅತೃಪ್ತಿ ಹುಟ್ಟಿಕೊಂಡು ಹೊಸದಾದ ಅಭಿವ್ಯಕ್ತಿ ಕ್ರಮಗಳು ಹಾಗೂ ಅನುಭವದ ವಿಭಿನ್ನವಾದ ಆಯಾಮಗಳನ್ನು ಅನ್ವೇಷಿಸುವ ಅವಶ್ಯಕತೆಯು ಏಕೆ ಹುಟ್ಟಿಕೊಂಡಿತು? ಇದು ಕೇವಲ ಪಾಶ್ಚಿಮಾತ್ಯ ನವ್ಯಸಾಹಿತ್ಯ–ವಿಮರ್ಶೆಯ ಅನುಕರಣೆಯಿಂದಾಯಿತು ಎಂದು ವ್ಯಾಖ್ಯಾನಿಸಬಹುದೆ? ಭಾರತೀಯ ಸಮಾಜದಲ್ಲಿ ಪಶ್ಚಿಮದಲ್ಲಿ ನವ್ಯದ ಹುಟ್ಟಿಗೆ ಕಾರಣವಾದಂಥ ಸಾಮಾಜಿಕ ಬದಲಾವಣೆಗಳು ಆಗಿಯೇ ಇರಲಿಲ್ಲ; ಹೀಗಾಗಿ ಕನ್ನಡದ ನವ್ಯವು ಅಡಿಗ ಮುಂತಾದವರ ವ್ಯವಸ್ಥಿತವಾದ ಅಪೇಕ್ಷೆಗಳ ಫಲವೆಂದು ಬರೆದು ಕೀರ್ತಿನಾಥ ಕುರ್ತುಕೋಟಿಯವರ ವ್ಯಾಖ್ಯಾನವು ಯಾರಿಗೂ ಒಪ್ಪಿಗೆಯಾಗಲಿಲ್ಲ. ಒಟ್ಟು ಭಾರತೀಯ ಸಂದರ್ಭವನ್ನು ಗಮನದಲ್ಲಿಟ್ಟು ನೋಡಿದರೆ ನವ್ಯವು ಸ್ವಾತಂತ್ರ್ಯಾನಂತರದ ತಲೆಮಾರಿನ ನೈಜ ಅನುಭವದ ಅಭಿವ್ಯಕ್ತಿಯಾಗಿತ್ತು ಎಂದೇ ಹೇಳಬೇಕಾಗುತ್ತದೆ. ನವೋದಯದ ಹುಟ್ಟಿಗೆ ಕಾರಣವಾದದ್ದು ಚರಿತ್ರೆಯ ಬಹುದೊಡ್ಡ ಅನುಭವಗಳು ಹಾಗೂ ಸಂಕಥನಗಳು. ವಸಾಹತುಶಾಹಿ ಆಧುನಿಕತೆ, ಸಾಮಾಜಿಕ ಧಾರ್ಮಿಕ ಸುಧಾರಣಾ ಚಳುವಳಿಗಳು, ರಾಷ್ಟ್ರೀಯತೆ, ಸಂಪ್ರದಾಯ ಹಾಗೂ ಆಧುನಿಕತೆಯ ಸಂಘರ್ಷ, ಸಾಮ್ರಾಜ್ಯಶಾಹಿ ವಿರೋಧ ಹಾಗೂ ಸ್ವಾತಂತ್ರ್ಯ ಚಳುವಳಿ ಇವು ಮುಖ್ಯವಾದಂತೆಯೆ ಜಾತಿ ಹಾಗೂ ವರ್ಗಗಳ ಬಗ್ಗೆ ಹೊಸ ತಿಳುವಳಿಕೆಯನ್ನು ತಂದುಕೊಟ್ಟ ಗಾಂಧಿವಾದ, ಅಂಬೇಡ್ಕರ್‌ವಾದ, ಸಮಾಜವಾದ ಹಾಗೂ ಮಾರ್ಕ್ಸ್‌ವಾದದ ಸಿದ್ಧಾಂತಗಳು ಮತ್ತು ಸಂಕಥನಗಳು ಇದ್ದವು. ಹೀಗಾಗಿ ನವೋದಯ ಭಾರತೀಯ ಸಾಹಿತ್ಯದ ಹರಹು, ಬೀಸು, ಸಮಗ್ರತೆ ಇವು ಸಹಜವಾಗಿಯೇ ಅಚ್ಚರಿ ಹುಟ್ಟಿಸುವಷ್ಟು ಅಗಾಧವಾಗಿದ್ದವು.




ಗೋಪಾಲಕೃಷ್ಣ ಅಡಿಗ ಯು.ಆರ್. ಅನಂತಮೂರ್ತಿ ಯಶವಂತ ಚಿತ್ತಾಲ

ಆದರೆ ೧೯೬೦ರ ದಶಕದ ಹೊತ್ತಿಗೆ ಇದು ತನ್ನ ಶಕ್ತಿಯನ್ನು


ಶಾಂತಿನಾಥ ದೇಸಾಯಿ


ಪಿ. ಲಂಕೇಶ್


ಗಿರೀಶ್ ಕಾರ್ನಾಡ್

ಕಳೆದುಕೊಂಡಿತ್ತು. ಕಾರಣವೆಂದರೆ ಸಾಮುದಾಯಿಕವಾದ, ರಾಷ್ಟ್ರೀಯಮಟ್ಟದ ಹೋರಾಟ ಹಾಗೂ ಬದಲಾವಣೆಗಳಲ್ಲಿ ಭಾಗವಹಿಸಿದ್ದ ಮಧ್ಯಮವರ್ಗವು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಸಂಕುಚಿತವಾದ ನೆಲೆಗಳಲ್ಲಿ ಬದುಕತೊಡಗಿತ್ತು. ನೆಹರು ಕಾಲದಲ್ಲಿ ಅಧಿಕಾರ ಕೇಂದ್ರಕ್ಕೆ ಹತ್ತಿರವಾದ ಇನ್ನೊಂದು elite ವರ್ಗವು ಹುಟ್ಟಿಕೊಂಡಿತ್ತು. ಸ್ವಾತಂತ್ರ್ಯಪೂರ್ವ ಯುಗದಲ್ಲಿ ಚಳುವಳಿಗಳ ಚೈತನ್ಯಶೀಲತೆಯಿಂದಾಗಿ ಅಷ್ಟಾಗಿ ಗೋಚರವಾಗದಿದ್ದ ಬಿರುಕುಗಳು, ಬಿಕ್ಕಟ್ಟುಗಳು ಈ ದಶಕದ ಹೊತ್ತಿಗೆ ದೊಡ್ಡ ಕಂದಕಗಳಾಗಿ ಕಾಣತೊಡಗಿದ್ದವು. ನವ್ಯಸಾಹಿತ್ಯದ ಮುಖ್ಯ ಲಕ್ಷಣವೆಂದು ವಿವರಿಸಲಾಗುವ 'ನೆಹರು ಯುಗದ ಭ್ರಮನಿರಸನ'ವು ಈ ಚಾರಿತ್ರಿಕ ಬದಲಾವಣೆಯಿಂದಾಗಿ ನಮ್ಮ ಶಿಕ್ಷಿತ ವರ್ಗವು ಅನುಭವಿಸಿದ ನಿರಾಸೆ ಹಾಗೂ ತಬ್ಬಿಬ್ಬುಗಳ ಅಭಿವ್ಯಕ್ತಿಯಾಗಿತ್ತು. ಇದರ ಸಾಹಿತ್ಯದ ಅಭಿವ್ಯಕ್ತಿಯಾಗಿ ನವೋದಯದ ವಿರುದ್ಧ ಪ್ರತಿಭಟನೆಯು ನವ್ಯದ ಕಾರ್ಯಸೂಚಿಯಾಗಿ ರೂಪುಗೊಂಡಿತು.

ಇಂಗ್ಲಿಷ್ ಸಾಹಿತ್ಯದ ಸಂದರ್ಭದಲ್ಲಿ ಆದಂತೆಯೇ ಕನ್ನಡದಲ್ಲಿ ಕೂಡ ನವ್ಯದ ಪ್ರತಿಭಟನೆಯು ಶಕ್ತಿಗುಂದಿದ, ಅಪ್ರಾಮಾಣಿಕವಾದ-ನವೋದಯದ ಅಂದಿನ ಅಪರಾವತಾರದ ಕಾವ್ಯದ ಬಗ್ಗೆ ಇತ್ತೇ ಹೊರತು ನವೋದಯದ ಮುಖ್ಯ ಕೃತಿಗಳ ಬಗ್ಗೆ ಅಲ್ಲ. ಕುವೆಂಪು, ಕಾರಂತ ಹಾಗೂ ಬೇಂದ್ರೆಯವರ ಗಟ್ಟಿಯಾದ ಬರಹಗಳ ಬಗ್ಗೆ ನವ್ಯದ ತಕರಾರುಗಳಿರಲಿಲ್ಲ. ಅಷ್ಟು ಮಾತ್ರವಲ್ಲ, ಬೇಂದ್ರೆ ಪ್ರಭಾವದಿಂದಾಗಿ ತಮಗೆ ಕಾವ್ಯ ಬರೆಯುವುದು ಅಸಾಧ್ಯವೆನಿಸಿತ್ತು ಎಂದು ಅಡಿಗರು ಹೇಳಿಕೊಂಡರು. ಕಾರಂತರ ಪ್ರಭಾವದ ಬಗ್ಗೆ ಅನಂತಮೂರ್ತಿ ದಟ್ಟವಾಗಿ ಬರೆದರು. ಕುವೆಂಪು ಕಾದಂಬರಿಗಳ ಬಂಧದ ಬಗ್ಗೆ ತಕರಾರು ಎತ್ತಿದ ನವ್ಯ ವಿಮರ್ಶಕರಿಗೆ ಅವುಗಳ ಪ್ರಾಮುಖ್ಯತೆಯ ಬಗ್ಗೆ ಯಾವ ಭಿನ್ನಾಭಿಪ್ರಾಯವೂ ಇರಲಿಲ್ಲ. ಹಾಗಿದ್ದರೆ ನವ್ಯ ವಿಮರ್ಶೆಯು ನವೋದಯದ ಬಗ್ಗೆ ಕಟ್ಟಿಕೊಟ್ಟ *ಕ್ರಿಟೀಕ್*‌ನ ಆಧಾರಗಳೇನು?

ಈ *ಕ್ರಿಟೀಕ್*‌ನ ಎರಡು ಮುಖ್ಯ ಅಂಶಗಳನ್ನು ಗಮನಿಸಬಹುದಾಗಿದೆ. ಒಂದು ಭಾಷೆ ಹಾಗೂ ಬಂಧದ ನೆಲೆಗೆ ಸಂಬಂಧಿಸಿದ್ದು. ಅಡಿಗರಿಂದ ಆರಂಭಿಸಿ ಎಲ್ಲಾ ನವ್ಯ ವಿಮರ್ಶಕರ ಕಾಳಜಿಯೆಂದರೆ ಸಾಹಿತ್ಯ ಕೃತಿಯು ಭಾಷೆಯಲ್ಲಿ ಸಡಿಲವಾಗಿರಬಾರದು, ಭಾಷಾಡಂಬರ ಹಾಗೂ ಭಾವಾಡಂಬರಗಳಿರಬಾರದು. ಭಾಷೆಯೇ ಕ್ರಿಯೆಯಾಗುವಂತೆ ಸೂಕ್ಷ್ಮವಾಗಿರಬೇಕು. ಅಲ್ಲದೇ ಬರಹವು ಕೃತಿಯಾಗಬೇಕಾದರೆ ಅದಕ್ಕೆ ಒಟ್ಟಂದ ಕೊಡುವ ಬಂಧವು ಇರಲೇಬೇಕು. ಈ ಕಾಳಜಿಗಳ ಬಗ್ಗೆ ನನ್ನದಂತೂ ಯಾವುದೇ ತಕರಾರಿಲ್ಲ. ಈ ಕಾರಣಕ್ಕಾಗಿಯೇ ಪುತಿನ ಅವರ ಹಾಗೂ ಕೆ.ಎಸ್.ನ ಅವರ ಬಹುಪಾಲು ಕಾವ್ಯ ಕಾವ್ಯವೇ ಅಲ್ಲ. ತೆಳುವಾದ ಅನುಭವಕ್ಕೆ ನಾಜೂಕಿನ ಕೃತ್ರಿಮ "ಕಾವ್ಯ" ಭಾಷೆಯ ಹೊದಿಕೆಯನ್ನು ಹಾಕುವ ಕಾವ್ಯವನ್ನು ನವ್ಯ ವಿಮರ್ಶೆಯು ವಿರೋಧಿಸಿದ್ದು ಸರಿಯಾಗಿ ಇದೆ.


ನವ್ಯ ವಿಮರ್ಶೆಯ ಸಾಂಸ್ಕೃತಿಕ ರಾಜಕೀಯವನ್ನು ವಿರೋಧಿಸಿದ ತೇಜಸ್ವಿ ಸಾಹಿತ್ಯ ರಚನೆಯೆಂದರೆ ಕಲಾಕೃತಿಯ ರಚನೆಯೆಂದು ಕೊನೆಯವರೆಗೂ ಪ್ರಬಲವಾಗಿ ವಾದಿಸಿದರು. ಕನ್ನಡ ವಿಮರ್ಶೆಯ ಸೋಗಲಾಡಿತನ, ಅಪ್ರಾಮಾಣಿಕತೆ ಹಾಗೂ ಪ್ರತಿಷ್ಠಿತ ಬರಹಗಾರರ ಬಗೆಗಿನ ಭಯದಿಂದಾಗಿ ನವ್ಯ ವಿಮರ್ಶೆಯ ಭಾಷೆ ಹಾಗೂ ಬಂಧದ ಬಗೆಗಿನ ಸರಿಯಾದ ಗ್ರಹಿಕೆಗಳನ್ನು ಅನ್ವಯಿಸಲಾಗಲಿಲ್ಲ. ಆ ನಂತರ ಬಂದ ಬಂಡಾಯ ಸಾಹಿತ್ಯ ವಿಮರ್ಶೆಯು ಭಾಷೆ-ಬಂಧಗಳ ಚರ್ಚೆಯನ್ನು ನವ್ಯ ವಿಮರ್ಶೆಯ ಹುನ್ನಾರು ಎಂದು ತೀರ್ಮಾನಿಸಿಬಿಟ್ಟು ಅತ್ಯಂತ ಕಳಪೆ ಬರಹವನ್ನು ಸಮರ್ಥಿಸುವ ಅಪ್ರಾಮಾಣಿಕತೆಯಿಂದ ಇಂದಿಗೂ ಹೊರಗೆ ಬಂದಿಲ್ಲ.

ನವ್ಯ ವಿಮರ್ಶೆಯ *ಕ್ರಿಟೀಕ್*‌ನ ದೌರ್ಬಲ್ಯವೆಂದರೆ ಅದು ಅನೇಕ ಕೃತಿಗಳ ವಿಭಿನ್ನವಾದ ಬಂಧದ ಸ್ವರೂಪವನ್ನು ಗ್ರಹಿಸಲು ಅಸಮರ್ಥವಾಯಿತು. ಇದಕ್ಕೆ ಬಂಧದ ಬಗೆಗಿನ ಏಕಾಕೃತಿಯ ಪರಿಕಲ್ಪನೆಯೇ ಕಾರಣವಾಗಿತ್ತು. ಎಂ.ಜಿ.ಕೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಸ್ವರೂಪವನ್ನು ತಿಳಿಯಲಾಗದ್ದು, ಜಿ.ಎಚ್. ನಾಯಕರು 'ಕುಸುಮಬಾಲೆ'ಯ ಬಂಧವನ್ನು ಅರಿಯಲಾಗದ್ದು, ತಮ್ಮ ಸಾಹಿತ್ಯಿಕ ಬ್ರಾಹ್ಮಣ-ಶೂದ್ರ ಪರಿಕಲ್ಪನೆಗಳ ಭಾರದಿಂದಾಗಿ ಅನಂತಮೂರ್ತಿ ಕುವೆಂಪು ಕಾದಂಬರಿಗಳ ಸ್ವರೂಪವನ್ನು ಗ್ರಹಿಸಲಾಗದ್ದು ಈ ವಿದ್ಯಮಾನದ ಪ್ರಸಿದ್ಧ ಉದಾಹರಣೆಗಳಾಗಿವೆ.

ನವ್ಯದ *ಕ್ರಿಟೀಕ್*‌ನ ಎರಡನೇಯ ಅಂಶವೆಂದರೆ ನವೋದಯದ ಹಿಂದಿದ್ದ ಲೋಕಗ್ರಹಿಕೆಗಳ ಬಗೆಗಿನ ತಾತ್ವಿಕವಾದ ಅತೃಪ್ತಿ, ಅಡಿಗರ "ಮಣ್ಣಿನ ವಾಸನೆ" ಮುಂತಾದ ಲೇಖನಗಳಲ್ಲಿ ನವೋದಯದ ಬಗೆಗಿನ ಅವರ ತಕರಾರು ತಾತ್ವಿಕ ಸ್ವರೂಪದ್ದು. ಕ್ರಿಯೆಯಲ್ಲಿ ಮೂರ್ತಗೊಳ್ಳದ ಆದರ್ಶಪ್ರಾಯತೆ, ಈ ಮಣ್ಣಿನಲ್ಲಿ ಮೂರ್ತವಾಗಿ, ಸಂಕೀರ್ಣವಾಗಿ ಸಶರೀರವಾಗಿ ನಮಗೆ ದೊರಕುವ ಅನುಭವ ಲೋಕದಿಂದ ವಿಮುಖವಾಗುವ ಪ್ರವೃತ್ತಿಯ ಬಗ್ಗೆ ಹಾಗೂ ಸಾಮುದಾಯಿಕ ಅನುಭವದ ನೆಪದಲ್ಲಿ ವೈಯಕ್ತಿಕ ಅನುಭವದ ಸಾಚಾತನದಿಂದ ತಪ್ಪಿಸಿಕೊಳ್ಳುವ ಧೋರಣೆಯ ಬಗ್ಗೆ ಅವರು ತೀವ್ರವಾಗಿ ಪ್ರತಿಭಟಿಸುತ್ತಾರೆ. ಇದರ ಜೊತೆಗೆ ನವೋದಯದ ದುರ್ಬಲ ಹಿಂಬಾಲಕರಲ್ಲಿ ಕಂಡುಬರುವ ಹುಸಿ ನೈತಿಕತೆ ಹಾಗೂ ಲೈಂಗಿಕತೆಯನ್ನು ಮರೆಮಾಚುವ ಗೋಸುಂಬೆತನದ ಬಗ್ಗೆಯೂ ಪ್ರತಿಭಟಿಸುತ್ತಾರೆ. (ಅವರ "ಪ್ರಾರ್ಥನೆ" ಪದ್ಯದಲ್ಲಿ ಇದು ವ್ಯಕ್ತವಾಗಿದೆ). ಅನಂತಮೂರ್ತಿಯವರ "ಸಂಸ್ಕಾರ"ವು ಅಡಿಗರ ಈ *ಕ್ರಿಟೀಕ್*‌ನ ಸೃಜನಶೀಲ ಅಭಿವ್ಯಕ್ತಿಯಾಗಿದೆ. ಈ ಕೃತಿಯಲ್ಲಿ ಮಣ್ಣಿನ ವಾಸನೆಯಿಂದ ದೂರವಾದ ಧರ್ಮ ಹಾಗೂ ಸಂಸ್ಕೃತಿಗಳ ತೀವ್ರವಾದ ವಿಮರ್ಶೆಯಿದೆ. ಶಾಂತಿನಾಥ ದೇಸಾಯಿ, ಪಿ.ಲಂಕೇಶ್‌ರ ಸಣ್ಣಕತೆಗಳಲ್ಲಿ ಹಾಗೂ ಕರ್ನಾಡರ ನಾಟಕಗಳಲ್ಲಿ ದಟ್ಟವಾಗಿರುವ ಅಸ್ತಿತ್ವವಾದದ ಮೂಲವೂ ಇಂಥದೇ ಅತೃಪ್ತಿಯಲ್ಲಿದೆ. ಈ ತಾತ್ವಿಕತೆಯಿಂದಾಗಿ ಸಂಪ್ರದಾಯದ ಮೂರ್ತಗಳ ಪ್ರಾಮಾಣಿಕವಾದ ವಿವೇಚನೆಯು ಸಾಧ್ಯವಾಯಿತು. ಅಲ್ಲದೇ ಆಧುನಿಕತೆಯ ಪ್ರಧಾನ ಲಕ್ಷಣವಾದ ವ್ಯಕ್ತಿವಾದದ ಕಡೆಗೆ ಕನ್ನಡ ಬರಹವು ಹೊರಳಿಕೊಂಡಿತು.

ಆದರೆ ಇದರ ವ್ಯತಿರಿಕ್ತ ಪರಿಣಾಮವೆಂದರೆ ನವೋದಯ ಬರಹದಲ್ಲಿದ್ದ ಸಾಮುದಾಯಿಕ ಅನುಭವದ ವಿಸ್ತಾರವನ್ನು ಕಳೆದುಕೊಂಡದ್ದಾಯಿತು. ಉದಾಹರಣೆಗೆ 'ಗ್ರಾಮಾಯಣ' ದಂಥ ಕೃತಿಯು ನವ್ಯ ಸಂಪ್ರದಾಯದಲ್ಲಿ ಬರುವುದು ಸಾಧ್ಯವಿರಲಿಲ್ಲ. ನವ್ಯ ವಿಮರ್ಶೆಯು ಅನುಭವದ ವಿಸ್ತಾರವು ಕುಗ್ಗಿಬಿಡುವ ಅಪಾಯದ ಬಗ್ಗೆ ಎಚ್ಚರವಾಗಿರಲಿಲ್ಲವೆಂದಲ್ಲ. ಇತ್ತೀಚೆಗೆ ಸಂಗ್ರಹವಾಗಿ ಸಿಕ್ಕಿರುವ 'ಸಂಕ್ರಮಣ', 'ಸಾಕ್ಷಿ' ಪತ್ರಿಕೆಗಳನ್ನು ಓದಿದರೆ ನವ್ಯ ವಿಮರ್ಶೆಯು ನವ್ಯ ಕೃತಿಗಳ ದೌರ್ಬಲ್ಯಗಳ ಬಗ್ಗೆ ವಸ್ತುನಿಷ್ಠವಾಗಿತ್ತೆಂದು ಅನ್ನಿಸುತ್ತದೆ. ಉದಾಹರಣೆಗೆ ಅನಂತಮೂರ್ತಿಯವರ 'ಸಂಸ್ಕಾರ' ಹಾಗೂ 'ಭಾರತೀಪುರ' ಕಾದಂಬರಿಗಳ ಬಗ್ಗೆ ತೀಕ್ಷ್ಣವಾದ ವಿಮರ್ಶೆಗಳು ನವ್ಯದಿಂದಲೇ ಬಂದವು.

ನವ್ಯದ ಬಗ್ಗೆ ದಲಿತ-ಬಂಡಾಯ ನೆಲೆಗಳಿಂದ ಉಗ್ರವಾದ ಟೀಕೆಗಳು ಬಂದವು. ಒಂದು ಮುಖ್ಯ ಕಾರಣವೆಂದರೆ ನವೋದಯ, ನವ್ಯಗಳು ಸೇರಿದಂತೆ ಕನ್ನಡ ಪರಂಪರೆಯು *ಸಬ್‌ಅಲ್ಟರ್ನ್*(ತಳ) ಸಮುದಾಯಗಳ ಅನುಭವದ ಅಭಿವ್ಯಕ್ತಿಯಾಗಿರಲಿಲ್ಲವೆಂಬ (ಸರಿಯಾದ) ಭಾವನೆ. ಅಲ್ಲದೇ ನವ್ಯಪರಂಪರೆಯು ಚಿಕ್ಕ ಪತ್ರಿಕೆಗಳು, ವೈಯಕ್ತಿಕ ಸಂಬಂಧಗಳು, ಸಾಂಸ್ಕೃತಿಕ ಯಾಜಮಾನ್ಯ ಇವುಗಳ ಮೂಲಕ ಒಂದು elite ಗುಂಪಿನ ಮಾಧ್ಯಮವಾಗಿ ಬಿಟ್ಟಿತ್ತು. ಇದನ್ನು ಬ್ರಾಹ್ಮಣ ಅಗ್ರಹಾರವೆಂದು ಕರೆದದ್ದು ತಪ್ಪೇನೂ ಆಗಿರಲಿಲ್ಲ. ಹೀಗಾಗಿ ಬರಹಗಾರರ ಒಕ್ಕೂಟದಿಂದ ಆರಂಭವಾಗಿ ಬಂಡಾಯದವರೆಗೂ ಈ ಗುಂಪಿನ ಸಾಂಸ್ಕೃತಿಕ ಯಾಜಮಾನ್ಯದ ಬಗ್ಗೆ ಉಗ್ರವಾದ ಪ್ರತಿಭಟನೆ ನಡೆಯಿತು. ಈ ಪ್ರತಿಭಟನೆಯಿಂದಾಗಿ ಅನೇಕ ಸಮುದಾಯಗಳ ಅನುಭವವು ಸಾಹಿತ್ಯ ಪ್ರಪಂಚವನ್ನು ಪ್ರವೇಶಿಸಿದ್ದು ಒಳ್ಳೆಯ ಬೆಳವಣಿಗೆಯಾಗಿತ್ತು. ಆದರೆ ಈ ಹೊಸ ನೆಲೆಗಳಲ್ಲಿ ಒಂದು ಹೊಸ aestheticಅನ್ನು ಕಟ್ಟಿಕೊಳ್ಳಲಾಗಲಿಲ್ಲ. Aesthetic ಅನ್ನುವುದು ಅಂತಿಮವಾಗಿ ರಾಜಕೀಯದ ಇನ್ನೊಂದು ರೂಪವೆನ್ನುವ ಎಚ್ಚರದಿಂದ ಪರ್ಯಾಯವಾದ aesthetic ಅನ್ನು ನವ್ಯೇತರ ಪ್ರಸ್ಥಾನಗಳು ಕಟ್ಟಿಕೊಳ್ಳಲಿಲ್ಲ. ಹೀಗಾಗಿ ಈ ಪ್ರಸ್ಥಾನಗಳು ನವೋದಯ ಮತ್ತು ಪ್ರಗತಿಶೀಲಗಳ aesthetics ಗೆ ಮರಳಿದಂತೆ ಕಾಣುತ್ತದೆ.



(ವೃತ್ತಿಯಿಂದ ಕುವೆಂಪು ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾದ ಲೇಖಕ. ರಾಜೇಂದ್ರ ಚೆನ್ನಿಯವರು ಕನ್ನಡದ ಖ್ಯಾತ ಸಾಹಿತ್ಯ ವಿಮರ್ಶಕರೂ, ಸಂಸ್ಕೃತಿ ಚಿಂತಕರೂ ಆಗಿದ್ದು, ಸದ್ಯಕ್ಕೆ ಶಿವಮೊಗ್ಗದಲ್ಲಿ ನೆಲೆಸಿದ್ದಾರೆ)

ಕನ್ನಡ ಸಾಹಿತ್ಯ ಮತ್ತು ಸಿದ್ಧಾಂತಗಳ ಆಟ-ಪಾಠಗಳು

-ಡಾ. ನಿತ್ಯಾನಂದ ಬಿ.ಶೆಟ್ಟಿ

ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಕನ್ನಡದ ಬಂಡಾಯ ಸಾಹಿತಿ ಪ್ರೊ. ಬರಗೂರು ರಾಮಚಂದ್ರಪ್ಪರ ಎರಡು ಪುಸ್ತಕಗಳ (ಭೋಗ ಭಾರತ ವರ್ಸಸ್ ಸುಖೀ ಭಾರತ ಮತ್ತು ಗಾಂಧಿ: ನಾಲಿಗೆಯನ್ನು ನಂಬಿದ ನಾಯಕ) ಬಿಡುಗಡೆ ಸಮಾರಂಭದಲ್ಲಿ ಭಾಗವಹಿಸಿದ್ದ ಭಾರತೀಯ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದೀ)ದ ನೇತಾರ ಸೀತಾರಾಮ ಯೆಚೂರಿಯವರು 'ಕನ್ನಡದಲ್ಲಿ ಮತ್ತೆ ಬಂಡಾಯ ಸಾಹಿತ್ಯ ಆರಂಭಗೊಳಿಸಿ' ಎಂದು ಸಾಹಿತಿಗಳಿಗೆ ಕರೆ ಕೊಟ್ಟರು ಎಂಬುದನ್ನು ಮಾಧ್ಯಮಗಳಲ್ಲಿ ಗಮನಿಸಿದೆ.

ನಮ್ಮ ಕಮ್ಯುನಿಸ್ಟ್ ಗೆಳೆಯರ ಸಾಮಾಜಿಕ ಬದ್ಧತೆ ಮತ್ತು ಹೋರಾಟಗಳ ಬಗೆಗೆ ವೈಯಕ್ತಿಕವಾಗಿ ನನಗೆ ಗೌರವ ಇರುವುದು ದಿಟವಾದರೂ ಯೆಚೂರಿಯವರ ಈ ಹೇಳಿಕೆ ನನ್ನಲ್ಲಿ ಹಲವು ಪ್ರಶ್ನೆಗಳನ್ನು ಹುಟ್ಟಿಸಿತು.

ಆ ಪ್ರಶ್ನೆಗಳು ಹೀಗಿವೆ:

೧. ಒಂದು ಬಗೆಯ (ಬ್ರಾಂಡ್) ಸಾಹಿತ್ಯವನ್ನು ಬೇಕು ಬೇಕೆಂದಾಗಲೆಲ್ಲ ಆರಂಭಿಸಲು ಅದನ್ನೇನು ಬರ್ತ್‌ಡೇ ಕೇಕು ಎಂದುಕೊಳ್ಳಲಾಗಿದೆಯೇ..?

೨. ಸಾಹಿತ್ಯದಲ್ಲಿ ಬಂಡಾಯದ ಆಶಯಗಳನ್ನು ಅಥವಾ ಅಂಶಗಳನ್ನು ತನ್ನಿ ಎಂದು ರಾಜಕೀಯ ನಾಯಕರೊಬ್ಬರು ಕರೆ ಕೊಡುತ್ತಾರೆ ಎಂದರೆ ಅವರ ತಿಳುವಳಿಕೆಯಲ್ಲಿ ಸಾಹಿತ್ಯ ಅಂದರೆ ಅದನ್ನೊಂದು ಪ್ಯಾಕಿಂಗ್ ಪೇಪರ್ ಎಂದು ತಿಳಿಯಲಾಗಿದೆಯೇ..?

೩. ಸಿದ್ಧಾಂತವೊಂದರ ಜಾರಿಗೆ, ಅಥವಾ ಅದರ ನಿರ್ವಹಣೆಗೆ ಅಥವಾ ಕಾರ್ಯಾಚರಣೆಗೆ ಸಾಹಿತ್ಯದ ಮುಸುಕು ಹಾಕಿ ಬರುವಂತಹ ಅವಶ್ಯಕತೆ ಏನಿದೆ..?

೪. ಮನುಷ್ಯನ ಸ್ವಾಯತ್ತತೆಯ ಬಗ್ಗೆ, ಸಂಸ್ಥೆಗಳ ಸ್ವಾಯತ್ತತೆಯ ಬಗ್ಗೆ ಮಾತಾಡುವ ನಮಗೆ ಸಾಹಿತ್ಯಕ್ಕೂ ಒಂದು ಸ್ವಾಯತ್ತತೆ ಇದೆ ಎಂಬ ಕನಿಷ್ಠ ತಿಳುವಳಿಕೆಯಾದರೂ ಇಲ್ಲವೇ..?

೫. ದೆಹಲಿಯ ಪ್ರತಿಷ್ಠಿತ ಜವಾಹರ್ ನೆಹರೂ ವಿಶ್ವವಿದ್ಯಾನಿಲಯದಲ್ಲಿ ಸಮಾಜವಿಜ್ಞಾನವನ್ನು ಬೋಧಿಸುವ ಅಧ್ಯಾಪಕರು ಮಾನವಿಕಗಳನ್ನು ಸಮಾಜವಿಜ್ಞಾನದವರು ಹೀಗೆ ತಮಗೆ ಬೇಕಾದಂತೆ ಬಳಸಿ ಎಸೆಯಬಹುದು ಎಂಬ ಹೊಸ ಪಾಠಗಳನ್ನೇನಾದರೂ ಕಲಿಸಿ ಕೊಟ್ಟಿದ್ದಾರೆಯೇ..?

ಯಾಕೆ ಈ ಪ್ರಶ್ನೆಗಳು ಮೂಡಿಬರುತ್ತವೆ ಎಂದರೆ ನಮ್ಮಲ್ಲಿ ಬಹಳಷ್ಟು ಜನರ ಕಾಮನ್‌ಸೆನ್ಸ್‌ನಲ್ಲಿ ಇಂದಿನ ಸಂದರ್ಭದಲ್ಲಿ ಸಾಹಿತ್ಯ ಒಂದು ವಾಹಕವಷ್ಟೇ ಹೊರತು ಅದಾಗಿ ಅದು ಏನೂ ಅಲ್ಲ. ಎಲ್ಲ ಸಂಗತಿಗಳೂ, ಎಲ್ಲ ವಿದ್ಯಮಾನಗಳು ಇವತ್ತು ನನಗೆ ಪೂರ್ತಿಯಾಗಿ ಅರ್ಥವಾಗುವಂತೆ ಸಾಹಿತ್ಯವೂ ಪೂರ್ತಿಯಾಗಿ ಅರ್ಥವಾಗಿ ಅದರ ಸ್ವಾದವನ್ನು ನಾನು ಪೂರ್ಣವಾಗಿ ಹೀರಿಬಿಡುತ್ತೇನೆ ಎಂದಿದೆಯೇ ಹೊರತು ಅದೊಂದು ಜೀವನದರ್ಶನ, ಅದೊಂದು ಕಾಣ್ಕೆ, ಅದನ್ನು ನಾನು ನನ್ನ ಜೀವನಾನುಭವಗಳ ಹಿನ್ನೆಲೆಯಲ್ಲಿ ಅನುಸಂಧಾನ ನಡೆಸಿ ನನ್ನ ಮಿತಿಗೆ ತಕ್ಕಂತೆ ಭರಿಸಿಕೊಳ್ಳುವುದಷ್ಟೇ ನನ್ನ ಸಾಮರ್ಥ್ಯ ಎಂಬ ವಿನೀತ ಭಾವನೆಯೇ ಇಲ್ಲವಾಗಿದೆ.

ವರ್ತಮಾನದಲ್ಲಿ ಬದುಕುತ್ತಿರುವ ನಮಗೆ ಈ ಕಾಲದ ಬಲದಿಂದ ಬಂದಿರುವ ಅನುಕೂಲವೆಂದರೆ ಅದು ನಾವು ನಡೆದು ಬಂದ ಹಾದಿಯನ್ನೊಮ್ಮೆ ಹಿಮ್ಮುಖವಾಗಿ ನಿಂತು ನೋಡುವಂಥ ಸೌಲಭ್ಯ. ಆ ಸೌಲಭ್ಯವನ್ನು ಬಳಸಿಕೊಂಡು ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯನ್ನೊಮ್ಮೆ ನೋಡುವುದಾದಲ್ಲಿ ನನ್ನಂಥವನಿಗೆ ನವೋದಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯ ಎಂಬಿತ್ಯಾದಿ ವರ್ಗೀಕರಣಗಳು ನಮ್ಮ ವಿಮರ್ಶಕರು ನಮಗೆ ಹಾಕಿಕೊಟ್ಟ ತಪ್ಪು ವರ್ಗೀಕರಣಗಳು ಅಂತಲೇ ಕಾಣಿಸುತ್ತಿವೆ. ಯಾಕೆಂದರೆ ವರ್ಗೀಕರಿಸಿ ನೋಡುವುದು ಮತ್ತು ವಿಭಜಿಸಿ ನೋಡುವುದು ನಾವು ಆಧುನಿಕತೆಯ ಕಾಲದಲ್ಲಿ ಕಲಿತು ಬಂದ ಕೆಲವು ಅಪಸವ್ಯಗಳು. ಇವೆಲ್ಲವೂ ಪಶ್ಚಿಮದಿಂದ ನಮಗೆ ಅಂಕುಡೊಂಕಾಗಿ ಬಂದ ಆಧುನಿಕತೆಯ ಮತ್ತು ಹುಸಿ ವೈಜ್ಞಾನಿಕತೆಯ ಪಾಪದ ಫಲಗಳು. ಅವವೇ ತಪ್ಪುಗಳನ್ನು ನಾವು ಇವತ್ತಿಗೂ ಮಾಡುತ್ತಿದ್ದೇವೆ.

ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಇವತ್ತಿಗೂ 'ನವೋದಯದಲ್ಲಿ ಸಮಾಜ' 'ನವ್ಯದಲ್ಲಿ ವ್ಯಕ್ತಿ' ಇತ್ಯಾದಿ ವಿಷಯಗಳ ಸುತ್ತ ಸಂಶೋಧನ ಸಮಸ್ಯೆಗಳು ಇಡಿಕ್ಕಿರಿದು ನಿಂತಿವೆ. ನನಗನಿಸುವ ಪ್ರಕಾರ ನಾವು ಇನ್ನು ಮುಂದಾದರೂ ಈ ನವೋದಯ-ನವ್ಯ ಇತ್ಯಾದಿ ಶುಷ್ಕ ವರ್ಗೀಕರಣಗಳಿಂದ ಹೊರಬಂದು ೬೦-



ಸೀತಾರಾಂ ಯೆಚೂರಿ ಬರಗೂರು ಸಿದ್ಧಲಿಂಗಯ್ಯ

೭೦ ವರ್ಷಗಳ ಸಾಹಿತ್ಯವನ್ನು ಕುವೆಂಪುರವರ ಸಾಹಿತ್ಯ, ಬೇಂದ್ರೆಯವರ ಸಾಹಿತ್ಯ, ದೇವನೂರು ಮಹಾದೇವರ ಸಾಹಿತ್ಯ, ಅನುಪಮಾ ನಿರಂಜನ-ಬೊಳುವಾರು ಮಹಮ್ಮದ್ ಕುಂಞಿಯವರ ಸಾಹಿತ್ಯ, ತೇಜಸ್ವಿ-ಲಂಕೇಶ್-ಅನಂತಮೂರ್ತಿಯವರ ಸಾಹಿತ್ಯ ಎಂದು ನೋಡುವುದು ಹೆಚ್ಚು ಸೂಕ್ತವಾಗಬಲ್ಲುದು ಎಂದು ಕಾಣುತ್ತದೆ.


ಒಂದು ವಿಶಿಷ್ಟ ಸಂವೇದನೆಯಾಗಿ ಅಥವಾ ಹಲವು ವಿಶಿಷ್ಟ ಸಂವೇದನೆಗಳ ಗುಚ್ಛವಾಗಿ ಹೊರಹೊಮ್ಮಿದ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಪ್ರಾಕಾರಗಳನ್ನಾಗಿ ನೋಡದೆ ಅರ್ಥಪೂರ್ಣ ವ್ಯಕ್ತಿತ್ವಗಳನ್ನಾಗಿ ನೋಡುವ ಹೊಸಬಗೆಯೊಂದು ಆರಂಭವಾಗಬೇಕು. ಹೆಚ್ಚು ಪ್ರಚಲಿತದಲ್ಲಿರುವ ಮತ್ತು ಜನಪ್ರಿಯವಾಗಿರುವ ಮತ್ತು ಪ್ರಗತಿಪರ ಎಂದು ಭಾವಿಸಿರುವ ಅಥವಾ ಸಂಪ್ರದಾಯವಾದೀ ತತ್ತ್ವಗಳ ದಾಸರಾಗಿ ಮತ್ತು ವ್ಯಸನಿಗಳಾಗಿ ತೂರಾಡುತ್ತ ಜೀವದ ಆಧಾರಕ್ಕೆ ಸಾಹಿತ್ಯದ ಒಂದು ಎಳೆಯನ್ನು ಮಾತ್ರ ಹಿಡಿದುಕೊಂಡು ನಿಂತಿರುವವರು ಕನ್ನಡ ಸಾಹಿತ್ಯದ ರುಚಿಯನ್ನು ಗಣನೀಯವಾಗಿ ರೂಕ್ಷಗೊಳಿಸುವ ಅಪಾಯಗಳಿವೆ.

ದೇವನೂರು ಮಹಾದೇವರನ್ನೇ ಗಮನದಲ್ಲಿಟ್ಟುಕೊಂಡು ಹೇಳುವುದಾದರೆ ಮಹಾದೇವರಂತಹ ಪ್ರತಿಭಾಶಾಲಿ ಬರಹಗಾರರನ್ನು ಚಳುವಳಿಯೊಂದರ ಉತ್ಪನ್ನ ಎಂದು ಭಾವಿಸುವುದು ಆ ಲೇಖಕನ ಪ್ರತಿಭೆಗೆ ದೊಡ್ಡ ಅನ್ಯಾಯ ಮಾಡಿದಂತೆ. ಮಹಾದೇವರ ಸಾಹಿತ್ಯದಲ್ಲಿ ಅಪಾರವಾದ ದಲಿತ ಸಂವೇದನೆ ಇದೆ ಮತ್ತು ಅದು ಬಹಳ ಜನಪ್ರಿಯವಾದ ದಲಿತ ಸಂವೇದನೆಗಿಂತಲೂ ಭಿನ್ನವಾದ ದಲಿತ ಸಂವೇದನೆ. ಇವರಿಗಿಂತ ಭಿನ್ನವಾದ ಸಂವೇದನೆಯನ್ನು ಬೆಳೆಸಿಕೊಂಡಿದ್ದ ಸಿದ್ದಲಿಂಗಯ್ಯನವರ ಆರಂಭದ ಸಾಹಿತ್ಯದಲ್ಲಿ ಕೆಚ್ಚು, ಅವಮಾನದ ವಿರುದ್ಧದ ಕಿಚ್ಚು, ಅಸಹನೆ ಎಲ್ಲವೂ ಇತ್ತು ಮತ್ತು ಇವೆಲ್ಲವೂ ಚಳುವಳಿಗಳಲ್ಲಿ ಇದ್ದಂತಹ ಮತ್ತು ಮತ್ತೆ ಮತ್ತೆ ವ್ಯಕ್ತಗೊಂಡಂತಹ ಭಿನ್ನ ಭಿನ್ನ ಬಗೆಯ ಭಾವನೆಗಳು ಮತ್ತು ಚಿಂತನೆಗಳು. ಆದರೆ ಮಹಾದೇವರ ಬರವಣಿಗೆಯ ಆರಂಭದಲ್ಲೇ ಭಿನ್ನ ಬಗೆಯ ದಲಿತ ಸಂವೇದನೆಗಳೇ ಇದ್ದವು. ಅದು ಬಹಳ ಮುಖ್ಯವಾಗಿ ಹೊರಜಗತ್ತಿಗೆ ಸುಲಭದಲ್ಲಿ ಗೋಚರಿಸದ ದಲಿತ ಬದುಕಿನ ಆಂತರಿಕ ಜೀವನದರ್ಶನವನ್ನು ಮತ್ತು ಬಹಳ ಆಳವಾದ ಸಂವೇದನೆಗಳನ್ನು ಕಟ್ಟುತ್ತಿದ್ದವು.

ದಲಿತ ಪರ ಹೋರಾಟಗಳ ಜೊತೆಗೆ ಬೆಳೆದುಬಂದ ಸಿದ್ಧಲಿಂಗಯ್ಯನವರ ಆರಂಭದ ಸಾಹಿತ್ಯಕ್ಕೂ ಮತ್ತು ದಲಿತ ಜಗತ್ತಿನ ಶೋಧನೆ ಮತ್ತು ಅನಾವರಣದ ಮೂಲಕ ವಿಕಾಸಗೊಂಡ ದೇವನೂರುರವರ ಸಾಹಿತ್ಯಕ್ಕೂ ಇರುವ ಈ ಮೂಲಭೂತ ವ್ಯತ್ಯಾಸವನ್ನು ನಾವು ಗುರುತಿಸಿಕೊಂಡಿದ್ದೇ ಆದಲ್ಲಿ ಈ ಲೇಖನ ಚರ್ಚಿಸುತ್ತಿರುವ ಸಾಹಿತ್ಯ ಮತ್ತು ಸಿದ್ಧಾಂತಗಳ ಸಮಸ್ಯೆ ಸ್ವಯಂಸ್ಪಷ್ಟವಾಗುತ್ತದೆ. ಇದು ಗಮನಕ್ಕೆ ಬಂದದ್ದೇ ಸಿದ್ದಲಿಂಗಯ್ಯನವರು ಈ ಸೈದ್ಧಾಂತಿಕ ಕವಚದಿಂದ ಹೊರಬಂದು ಹೊಸಬಗೆಯ ಸಾಹಿತ್ಯವನ್ನು ತಮ್ಮ ಅಪಾರ ಜೀವನಾನುಭವದಿಂದ ಕಟ್ಟಿಕೊಟ್ಟರು. ಊರು ಕೇರಿ ಇದಕ್ಕೊಂದು ಒಳ್ಳೆಯ ಉದಾಹರಣೆ. ಹಾಗೆಯೇ ತನ್ನನ್ನು ಇನ್ನು ಮುಂದೆ ದಲಿತ ಕವಿ ಎಂದು ಕರೆಯದಿರಿ ಎಂಬ ಅವರ ಆಗ್ರಹದಲ್ಲೂ ಈ ಸೈದ್ಧಾಂತಿಕ ವಿಸರ್ಜನೆಯ ತುಡಿತ ಇದೆ ಎಂಬುದನ್ನು ನಾವಿಲ್ಲಿ ಗಮನಿಸಬೇಕು. (ಸಿದ್ದಲಿಂಗಯ್ಯನವರ ಈ ಆಗ್ರಹವನ್ನು ಕನ್ನಡದ ಬಹುಪಾಲು ಜನ ತಪ್ಪಾಗಿ ಗ್ರಹಿಸಿರುವುದನ್ನು ಇಲ್ಲಿ ಒತ್ತಿ ಹೇಳಬೇಕಾಗಿದೆ).

ನಾನು ಬಹಳ ಬಾರಿ ಯೋಚಿಸಿದ್ದಿದೆ. ಇದು ತಪ್ಪಾಗಿದ್ದರೆ ಸಾಹಿತ್ಯಲೋಕದ ಹಿರಿಯರು ನನ್ನನ್ನು ಮನ್ನಿಸಬೇಕು. 'ಚೋಮನ ದುಡಿ'ಯಂತಹ ಒಂದು


ದೇವನೂರು


ಬೊಳುವಾರು


ಎಚ್. ನಾಗವೇಣಿ

ಕಾದಂಬರಿ ಶಿವರಾಮ ಕಾರಂತರ ಕೈಗೆ ಸಿಗದೆ ಸಾಮಾಜಿಕ-ರಾಜಕೀಯ ಸಿದ್ಧಾಂತಗಳ ಶಿಲ್ಪದಲ್ಲಿ ಸ್ವಯಂ ಲೋಲುಪನಾಗಿರುವ ಬೇರಿನ್ನಾವುದೇ ಆಧುನಿಕ ಹೋರಾಟಗಾರನ ಕೈಗೆ ಸಿಗುತ್ತಿದ್ದರೆ ಅದೊಂದು ಕ್ರಾಂತಿಕಾರಿ ಕಾಮಿಡಿ ಆಗಿಬಿಡುತ್ತಿತ್ತೋ ಏನೋ ಎಂದು. ಯಾಕೆಂದರೆ ಕಾರಂತರಿಗೆ ಚೋಮ ಕೇಳುತ್ತಿರುವುದು ಕೇವಲ ಭೂಮಿಯನ್ನು ಮಾತ್ರವಲ್ಲ ಎಂಬುದು ಗೊತ್ತಿತ್ತು. ಕಾರಂತರ ಚೋಮ, ತನ್ನ ಧಣಿ ಸಂಕಪ್ಪಯ್ಯನಲ್ಲಿ ಉಳುಮೆಗಾಗಿ, ಕೃಷಿಗಾಗಿ ಸ್ವಂತಕ್ಕೊಂದು ತುಂಡು ಭೂಮಿ ಕೊಡಿ ಎಂದು ಕೇಳುವುದರ ಮೂಲಕ ಆತ ಮನುಷ್ಯ ಬದುಕಿನ ಆಳದಲ್ಲಿರುವ ಘನತೆಯುಕ್ತ ಬದುಕಿನ ಹಂಬಲವನ್ನೂ ಪರೋಕ್ಷವಾಗಿ ಅಭಿವ್ಯಕ್ತಿಸುತ್ತಿದ್ದಾನೆ. ಯಾಕೆಂದರೆ ಚೋಮ ಬದುಕಿದ ಊರು ಸ್ವಂತ ಭೂಮಿ ಹೊಂದಿದವನಿಗೆ ಮಾತ್ರ ಗೌರವವನ್ನು ಕೊಡುವಂತಹ ಊರು. ಸ್ವಂತ ಮನೆ ಇಲ್ಲದ ಮೇಲ್ಜಾತಿಯ ಬಡವರೂ ಹೇಳುತ್ತಿದ್ದ ಮಾತು ಒಂದು ಇಲ್ಲಿಗೆ ನೆನಪಿಗೆ ಬರುತ್ತಿದೆ. "ಹಾರುವ ಕಾಗೆಗೂ ಒಂದು ಕಾರಿ(ಗೂಡು) ಇದೆ. ನರಮನುಷ್ಯನಾಗಿರುವ ನನಗೆ ಇಲ್ಲವೇ ದೇವರೇ." ಅಂದರೆ ಸ್ವಂತ ಸೂರು ಮತ್ತು ಹಿಡಿ ಮಣ್ಣಿನಷ್ಟು ಹೊಂದುವುದು ಮನುಷ್ಯ ಜನ್ಮದ ಪರಮಘನತೆಯ ಪ್ರಶ್ನೆಯಾಗಿತ್ತು. ಇದು ಪ್ರಚಲಿತ ರಾಜಕೀಯದ ವಾಸನೆಗಳ ಆಚೆಗೂ ಮನುಷ್ಯ ಬದುಕಿನಲ್ಲಿ ಅಡಿಗಡಿಗೆ ಏಳುವ ಆಳವಾದ ಹಂಬಲವಾಗಿತ್ತು.

ನಾನು ವಿದ್ಯಾರ್ಥಿಯಾಗಿದ್ದಾಗ ಕಾರಂತರು ಒಮ್ಮೆ ನಾನು ಓದುತ್ತಿದ್ದ ಮಂಗಳೂರು ವಿವಿಯ ನಮ್ಮ ಕನ್ನಡ ವಿಭಾಗಕ್ಕೆ ಬಂದರು. ಆಗ ಓರ್ವ ನನ್ನ ಸ್ನೇಹಿತ "ಸರ್, ನೀವು ನಿಮ್ಮ ಕಾದಂಬರಿಯಲ್ಲಿ ಚೋಮನಿಗೊಂದು ತುಂಡು ಭೂಮಿಯನ್ನಾದರೂ ಕೊಡಿಸಬೇಕಾಗಿತ್ತು" ಎಂದ. ಪ್ರತ್ಯುತ್ಪನ್ನಮತಿತ್ವಕ್ಕೆ ಹೆಸರಾದ ಕಾರಂತರು "ಕೊಡಲು ನನ್ನಲ್ಲಿ ಭೂಮಿ ಇಲ್ಲ. ನಿನ್ನಲ್ಲಿದ್ದರೆ ಕೊಡು" ಎಂದಿದ್ದರು. ಆ ಉತ್ತರಕ್ಕೆ ನಾವೆಲ್ಲ ಗೊಳ್ ಎಂದು ನಕ್ಕಿದ್ದೆವು. ಈ ಉತ್ತರದ ಕುರಿತು ನಾವು ಯೋಚಿಸಿದಾಗ ನಾವು ತಿಳಿದುಕೊಂಡಿದ್ದೆಂದರೆ ಕಾರಂತರು ಬಹಳ ಆಳವಾದ ಭಾರತೀಯ ಸಾಮಾಜಿಕತೆಯನ್ನು ಹುಸಿ ರಾಜಕೀಯದ ಕಾಲ್ಪನಿಕತೆಯ ಮೂಲಕ ತೆಳುಗೊಳಿಸಿರಲು ಬಯಸಿರಲಿಲ್ಲ.


ಈ ಸಮಸ್ಯೆ ನಮ್ಮ ಪ್ರಗತಿಶೀಲ ಮತ್ತು ಬಂಡಾಯ ಸಾಹಿತಿಗಳಿಗೂ ಅನ್ವಯಿಸುತ್ತದೆ. ತಮ್ಮ ಸಾಹಿತ್ಯದಲ್ಲಿ ಈ ಸಾಹಿತಿಗಳು ತಮ್ಮ ಪಾತ್ರಗಳ ಮೂಲಕ ತಾವೇ ನಿಜವಾಗಲು ಹೊರಟರು. ತಮ್ಮ ಸಮುದಾಯದ, ತಮ್ಮ ವರ್ಗದ ರಾಜಕೀಯ ಪ್ರಜ್ಞೆಯನ್ನು ತಮ್ಮ ಸಾಹಿತ್ಯದ ಮೂಲಕ ರವಾನಿಸುವ ನಂಬಿಕೆಯನ್ನು ಇವರು ಇಟ್ಟುಕೊಂಡವರಾದುದರಿಂದ ಪರಿಣಾಮದಲ್ಲಿ ಸಾಹಿತ್ಯ ಸೊರಗಿತು. ಸಿದ್ಧಾಂತ ಘರ್ಜಿಸಿತು. ನಿರ್ದಿಷ್ಟ ರಾಜಕೀಯ ಸಿದ್ಧಾಂತದ ಮೂಲಕ ನಡೆಸುವ ಒಂದು ಬಗೆಯ ಗುಂಪುಗಾರಿಕೆಯ ಸಾಹಿತ್ಯ ಅದು ಯಾವ ಸುಖವನ್ನೇ ಕೊಡಲಿ ಆ ಸುಖವನ್ನು ನಾವು ಅನುಮಾನಗಳಿಂದ ನೋಡದಿದ್ದರೆ, ಅಲ್ಲಿಯ ವೈರುಧ್ಯಗಳಿಗೆ ನಾವು ಕುರುಡರಾದರೆ, ಅಲ್ಲಿಯ ವಿರೋಧಾಭಾಸಗಳನ್ನು ಕೃತಿಯೊಳಗೆ ತಾರದಿದ್ದರೆ ಘನವಾದ ಸಾಹಿತ್ಯ ಹುಟ್ಟುವುದು ಕಷ್ಟ.

ಸಾಹಿತ್ಯ, ಓದುಗರಲ್ಲಿ ಕುತೂಹಲವನ್ನು ಹುಟ್ಟಿಸುವ ಮತ್ತು ತನ್ನ ಓದುಗರನ್ನು ತಣಿಸುವ ಹಾಗೂ ರಮಿಸುವ ಉಪಯೋಗಿತಾವಾದದ ಕೂಸಾಗಿ ಜನಿಸಿದರೆ ಅದು ಆಳವಾದ ಜೀವನದರ್ಶನವನ್ನು ಕೊಡಲಾರದು. ಕನ್ನಡದಲ್ಲಿ ಮುಸ್ಲಿಮ್ ಬರಹಗಾರರು ತಮ್ಮ ಸಾಹಿತ್ಯದ ಮೂಲಕ ಕಾಣಿಸಿಕೊಂಡಾಗಲೂ ಹೀಗೆಯೇ ಆಯಿತು. ಮುಸ್ಲಿಮ್ ಲೋಕ ಕನ್ನಡದ ಮುಸ್ಲಿಮೇತರರಿಗೆ ಪರಿಚಿತವಲ್ಲದ ಲೋಕ. ಅದು ಪರಿಚಯಗೊಳ್ಳುವವರೆಗೆ ಕನ್ನಡ ಸಾಹಿತ್ಯದ ಓದುಗರಲ್ಲಿ ಒಂದು ಕುತೂಹಲವಿತ್ತು. ಅದು ಪರಿಚಯಗೊಂಡ ಮರುಕ್ಷಣದಲ್ಲೇ ಅಂದರೆ ಕುತೂಹಲ ತಣಿದ ಹೊತ್ತಿನಲ್ಲೇ ಆ ಆಸಕ್ತಿ ಮುದುಡಿ ಹೋಯಿತು. ಕೆಲವು ಮುಖ್ಯವಾದ ಮುಸ್ಲಿಮ್ ಸಂವೇದನೆಯ ಕೃತಿಗಳು ಹೊರಬಂದರೂ ಕೂಡ ಮುಸ್ಲಿಮ್‌ಲೋಕದಲ್ಲಿರುವ ಬಹಳ ಆಳವಾದ ಮತ್ತು ಒಳಸಂವೇದನೆಗಳ ಮನುಷ್ಯನನ್ನು ಸಾಂಸ್ಕೃತಿಕವಾಗಿ ಹಿಡಿಯುವಂಥ ಕೃತಿಗಳು ಬರಲಿಲ್ಲ. ಸಿದ್ಧಾಂತಗಳಿಂದ ಮುಕ್ತವಾಗದ ಮತ್ತು ಈ ಆಳವಾದ ಜೀವನದರ್ಶನಗಳಿಲ್ಲದ ಕೃತಿ ಯಾವ ಸಮುದಾಯದಿಂದ ಬಂದರೂ ಅದು ಕಾಲದ ಘಾತವನ್ನು ತಾಳಿ ನಿಲ್ಲಲಾರದು.

ಕನ್ನಡದಲ್ಲಿ ಸ್ತ್ರೀವಾದ ಅಥವಾ ಸ್ತ್ರೀಪರ ಚಿಂತನೆಯ ಹಿನ್ನೆಲೆಯಲ್ಲಿ ಕಾಣಿಸಿಕೊಂಡ ಸಾಹಿತ್ಯ ಲಿಂಗತ್ವ ರಾಜಕಾರಣವನ್ನು ಪ್ರಧಾನ ಪ್ರಶ್ನೆಯನ್ನಾಗಿ ಮುಂಚೂಣಿಗೆ ತರುವಲ್ಲಿ ಸಫಲವಾಗಿದೆ. ನನ್ನ ಮಟ್ಟಿಗೆ ಅನುಪಮಾ ನಿರಂಜನರವರ 'ಮಾಧವಿ' ಕಾದಂಬರಿಯೇ ಕನ್ನಡದಲ್ಲಿ ಸ್ತ್ರೀಪರ ನಿಲುವನ್ನು ಉದ್ಘಾಟಿಸಿದಂತಹ ಕಾದಂಬರಿ. ಆದರೆ ಅದನ್ನು ಕನ್ನಡದ ಪುರುಷ ವಿಮರ್ಶಾಲೋಕ ಶ್ರೇಷ್ಠ ಸಾಹಿತ್ಯದ ಕುರಿತ ತನ್ನ ದುರ್ವ್ಯಸನದಲ್ಲಿ ಕಡೆಗಣಿಸಿತು. ಅದು ಮಾಡಿದ ಚಾರಿತ್ರಿಕ ಪ್ರಮಾದದಿಂದಾಗಿ ಕನ್ನಡದ ಸಾಹಿತ್ಯದ ಹೆಣ್ಣೋಟವೊಂದು ತನ್ನ ದರ್ಶನ ಶಕ್ತಿಯನ್ನು ಕಳೆದುಕೊಂಡು ಬರಿದೆ ಪ್ರಣಾಳಿಕೆಯಾಯಿತೋ ಎಂಬ ಸಂದೇಹ ಕಾಡುತ್ತಿದೆ. ಕನ್ನಡದ ಹೆಣ್ಣುಮಕ್ಕಳ 'ಅನಸೂಯಾ ಪರಂಪರೆ' (ತ್ರಿಮೂರ್ತಿಗಳನ್ನು ಶಿಶುಗಳನ್ನಾಗಿಸಿದ) ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಅತ್ಯಂತ ಸಶಕ್ತವಾಗಿ ಮೂಡಿಬಂದಿಲ್ಲ ಎಂಬುದನ್ನು ವಿಷಾದದಿಂದಲೇ ಹೇಳಬೇಕಾಗಿದೆ. ನಾಗವೇಣಿ, ವೈದೇಹಿ, ದು. ಸರಸ್ವತಿ ತರಹದ ಅನೇಕ ಮಂದಿ ಸ್ತ್ರೀವಾದ ಎಂಬ ಘೋಷಿತ ಚೌಕಟ್ಟಿನಿಂದ ಹೊರಬಂದು ಯೋಚಿಸುವವರು, ಬರೆಯುವವರು ಕನ್ನಡದ ಸಂದರ್ಭದಲ್ಲಿದ್ದಾರೆ ಎನ್ನುವುದು ಸಂತೋಷದ ಸಂಗತಿ. ಇವರಿಂದ ಕನ್ನಡದ ಸಾಹಿತ್ಯ ಇನ್ನಷ್ಟು ಕಸುವು ತುಂಬಿಕೊಳ್ಳಬೇಕಾಗಿದೆ.

ಸಾಮಾಜಿಕವಾಗಿ ಭಿನ್ನಭಿನ್ನ ಸ್ಥಳಗಳಲ್ಲಿ ನಿಂತಿರುವ ಮತ್ತು ಮತೀಯವಾಗಿಯೂ(ಐಡಿಯಲಾಜಿಕಲ್ ಎಂಬ ಅರ್ಥದಲ್ಲೂ) ಭಿನ್ನ ಭಿನ್ನವಾಗಿರುವ ಕರ್ನಾಟಕದ ಸಮಾಜದಲ್ಲಿರುವ ಸೂಕ್ಷ್ಮಸಂವೇದಿಗಳಾದ ಕನ್ನಡದ ಸಾಹಿತಿಗಳು ಇತಿಹಾಸದ ನಿರಂತರ ಚಲನೆಯಲ್ಲಿ ಯಾವುದೇ ಒಂದು ನಿರ್ದಿಷ್ಟ ರಾಜಕೀಯ ಸಿದ್ಧಾಂತದ ಮೂಲಕ ಬಿಡುಗಡೆ ಸಾಧ್ಯವಾಗದು ಎಂದು ತಿಳುವಳಿಕೆಯಿಂದ ತಮ್ಮ ಕೃತಿಗಳಲ್ಲಿ ಸತ್ಯದ ಅನ್ವೇಷಣೆಗೆ ಹೊರಡುವುದೇ ಆದರೆ ಕನ್ನಡದಲ್ಲಿ ಇನ್ನೂ ಘನವಾದ ಸಾಹಿತ್ಯವನ್ನು ನಾವು ಎದುರು ನೋಡಬಹುದಾಗಿದೆ. ಸಿದ್ಧಾಂತಗಳ ಆಟ-ಪಾಠಗಳಿಂದ ಹೊರಬಂದು ಮತ್ತು ಒಂದರ್ಥದಲ್ಲಿ ಸಿದ್ಧಾಂತಗಳನ್ನು ವಿಸರ್ಜಿಸಿ ಫ್ರೆಶ್ ಆಗಿ ಸೃಜನಾತ್ಮಕವಾಗಿ ಶೋಧನೆಗೆ ತೊಡಗುವುದರಿಂದ ಯಾವುದೇ ಉಪಾಧಿಗಳಿಲ್ಲದೆ, ನವೋದಯ, ನವ್ಯೋತ್ತರ, ಮುಸ್ಲಿಮ್-ಮಹಿಳಾ ಸಂವೇದನೆ ಇತ್ಯಾದಿ ಶೋಧಪೂರ್ವ ಚೌಕಟ್ಟುಗಳಿಲ್ಲದೆ ಕನ್ನಡದ ಸಾಹಿತ್ಯ ಬೆಳೆಯುವಂತಹ ಹುಲುಸಾದ ವಾತಾವರಣ ನಮ್ಮ ಕಾಲದಲ್ಲಿದೆ.

ತನ್ನ ರಾಜಕೀಯ ನಂಬಿಕೆಯನ್ನು ಕಟ್ಟುವುದು ಮತ್ತು ಓದುಗರೆಲ್ಲರೂ ಒಪ್ಪುವ ಹಾಗೆ ಕಟ್ಟುವುದು, ತನ್ನ ಜನರ ರಾಜಕೀಯ ಅಭೀಪ್ಸೆಗಳನ್ನೂ ಅವರು ಸುಖಿಸಿ ವಿರಮಿಸುವಂತೆ ಕಟ್ಟುವುದು ಇವೆರಡೂ ಸಾಹಿತ್ಯವನ್ನೂ ಮತ್ತು ಒಂದು ಅರ್ಥದಲ್ಲಿ ಪ್ರಾಮಾಣಿಕ ಬದ್ಧತೆಯುಳ್ಳ ರಾಜಕೀಯ ಆಂದೋಲನವನ್ನೂ ಕಾಲಾನುಕ್ರಮದಲ್ಲಿ ದುರ್ಬಲಗೊಳಿಸುತ್ತದೆ. ಈ ಬಗೆಯ ಸಾಹಿತ್ಯ ನಂಬಿಕಸ್ಥ ಕಾರ್ಯಕರ್ತರನ್ನು ಸೃಷ್ಟಿಸುತ್ತದೆಯೇ ಹೊರತು ಅನುಮಾನಗಳನ್ನು ಹೊಂದಿರುವ ಸ್ವತಂತ್ರ-ಸ್ವಾಯತ್ತ ಓದುಗರನ್ನಲ್ಲ. ಸಾಹಿತ್ಯದ ಮೂಲದ್ರವ್ಯ ಶೋಧನೆಯೇ ಹೊರತು ಮಂಡನೆಯಂತೂ ಅಲ್ಲವೇ ಅಲ್ಲ.



(ತುಮಕೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿರುವ ಡಾ. ನಿತ್ಯಾನಂದ ಬಿ.ಶೆಟ್ಟಿಯವರು ಈಗ ಕನ್ನಡದ ಪ್ರಮುಖ ಸಾಂಸ್ಕೃತಿಕ ಮತ್ತು ಸಾಮಾಜಿಕ ಚಿಂತಕರಾಗಿ ಹೊರಹೊಮ್ಮುತ್ತಿದ್ದಾರೆ)

ಕನ್ನಡದ ಇಬ್ಬರು ವಿಶಿಷ್ಟ ಲೇಖಕರು

ಡಾ. ಎಸ್.ಎಲ್. ಭೈರಪ್ಪ



ನಮ್ಮ ಓದುಗ ಸಂಸ್ಕೃತಿ ಮತ್ತು ಸೃಜನಶೀಲತೆಯ ಸ್ವರೂಪದ ಕೆಲವು ಆಯಾಮಗಳನ್ನು ಅರ್ಥಮಾಡಿಕೊಳ್ಳಲು ಭೈರಪ್ಪನವರಂತಹ ಸಾಂಸ್ಕೃತಿಕ ವಿದ್ಯಮಾನವನ್ನು ವಸ್ತುನಿಷ್ಠವಾಗಿ ಪರಿಶೀಲಿಸಲೇಬೇಕು. ಮಹಾಕಾವ್ಯಗಳೂ ಸೇರಿದಂತೆ ದೀರ್ಘ ಕಥನ ಪರಂಪರೆ ಹೊಂದಿರುವ ಕನ್ನಡ ಓದುಗರ ಸಂವೇದನೆ ಸಹಜವಾಗಿಯೇ ಧೀರ್ಘ ನಿರೂಪಣೆಯ ಕಥನವನ್ನು ಇಷ್ಟಪಡುತ್ತದೆ. ಎರಡು ದಶಕಗಳ ಕಾಲ ಕಾದಂಬರಿ ಪ್ರಕಾರಕ್ಕೆ ಬದ್ಧವಾಗಿರುವ ಭೈರಪ್ಪನವರ ನಿರಂತರ ಬರವಣಿಗೆ ಅವರಿಗೆ ಓದುಗರೊಡನೆ ಒಂದು ಸಾವಯವ ಸಂಬಂಧವನ್ನು ರೂಪಿಸಿಕೊಟ್ಟಿದೆ.


ಸನ್ನಿವೇಶ ನಿರ್ಮಾಣ, ಪಾತ್ರ ಸೃಷ್ಟಿಯಲ್ಲಿ ವೈವಿಧ್ಯವನ್ನು ಬಯಸುವ ಓದುಗರಿಗೆ ಭೈರಪ್ಪ ಸ್ನೇಹಿಯಾಗಲು ಕಾರಣ ಗ್ರಾಮ, ಸಣ್ಣ ಪಟ್ಟಣ ಮಹಾನಗರ, ಇತಿಹಾಸದ ಕಾಲ, ಭಿನ್ನ ಸಾಮಾಜಿಕ ಮಾನಸಿಕ ಹಿನ್ನೆಲೆ, ವಿಕ್ಷಿಪ್ತ ಸ್ವಭಾವ- ಇವುಗಳ ವರ್ಣನಾ ವೈಖರಿ ಮತ್ತು ವಿಶ್ಲೇಷಣೆ.

ಸಂಪ್ರದಾಯ-ಆಧುನಿಕತೆಯ ಸಂಘರ್ಷ ಮತ್ತು ಸಾಮಾಜಿಕ ಬದಲಾವಣೆಯನ್ನು ಕುರಿತೇ ಭೈರಪ್ಪನವರು ಬರೆಯುವುದು. ಬದಲಾವಣೆಯಿಂದ ಎಲ್ಲ ಕಾಲದಲ್ಲೂ ಪಡೆದುಕೊಳ್ಳುವವರು, ಕಳೆದುಕೊಳ್ಳುವವರು ಇದ್ದೇ ಇರುತ್ತಾರೆ. ಎರಡು ತರಹದ ಪಾತ್ರಗಳನ್ನು ಭೈರಪ್ಪ ಸೃಷ್ಟಿಸಿದರೂ ಅವರ ಒತ್ತಾಸೆ ಅನುಭೂತಿ ಹೆಚ್ಚಿನಂಶ ಕಳೆದುಕೊಳ್ಳುತ್ತಿರುವವರ ವರ್ಗಗಳ ಪರವಾಗಿಯೇ ಇದ್ದು ಈ ವಲಯದ ಓದುಗರಿಗೆ ಮಾನ್ಯರ ಕೃತಿಗಳಲ್ಲಿ ಮಾನಸಿಕ ಸುಖ, ಬಿಡುಗಡೆ ಸಿಗುತ್ತದೆ. ಬದಲಾವಣೆ ಬಯಸುವ, ಅದಕ್ಕೆ ಕಾರಣೀಭೂತರಾಗಿರುವ, ಅದರಿಂದ ಲಾಭ ಪಡೆಯುವ ವರ್ಗಗಳಿಂದಲೂ ಪಾತ್ರಗಳನ್ನು ಸೃಷ್ಟಿಸಿದರೂ ಅವುಗಳಿಗೆ ಭೈರಪ್ಪನವರಲ್ಲಿ ಒತ್ತಾಸೆ, ಅನುಭೂತಿ ಕಡಿಮೆ. ಸಹಜವಾಗಿಯೇ ಈ ವರ್ಗದ ಓದುಗರು ಅವರನ್ನು ವಿರೋಧಿಸುತ್ತಾರೆ, ಭೈರಪ್ಪನವರ ಎಲ್ಲ ಓದುಗರು ಅವರ ಕೃತಿಗಳನ್ನು ಸಮಗ್ರವಾಗಿ ಒಪ್ಪುತ್ತಾರೆಂಬ ವಿಮರ್ಶಕರ ಆತಂಕ ಓದುಗರ ಸಂವೇದನೆಯನ್ನು ಕೀಳಂದಾಜು ಮಾಡುತ್ತದೆ. ಇವರ ಓದುಗರು ಕನ್ನಡದ ಇತರ ಲೇಖಕರನ್ನೂ ಓದುತ್ತಾರಷ್ಟೆ

ಭೈರಪ್ಪನವರಲ್ಲಿ ಹಲವು ಭೈರಪ್ಪಗಳಿದ್ದಾರೆ. ವಂಶವೃಕ್ಷ, ಗೃಹಭಂಗ, ಮತದಾನ ಅನ್ವೇಷಣೆ, ಪರ್ವ, ಸಾಕ್ಷಿಯನ್ನು ಬರೆದವರೇ, ಕವಲು, ಆವರಣ, ಧರ್ಮಶ್ರೀಯಂತಹ ಕೃತಿಗಳನ್ನು ಸೃಷ್ಟಿಸಿದ್ದಾರೆ. ಈ ವಿರೋಧಾಭಾಸಕ್ಕೆ ಅವರ ಸಂಪ್ರದಾಯ ಪ್ರಿಯತೆಗಿಂತ ಹೆಚ್ಚಾಗಿ ಪಾರ್ಶ್ವ ಗ್ರಹಿಕೆಯೇ ಕಾರಣ. ಸತ್ಯದ ಅನುಭವದ, ಸ್ವಭಾವದ ಮತ್ತೊಂದು ಮುಖವನ್ನು ಕೃತಿಯ ಆವರಣದಿಂದ ಹೊರಗಿಡುವುದರಿಂದ, ಇಲ್ಲ ತನ್ನ ದೃಷ್ಟಿಕೋನಕ್ಕನುಗುಣವಾಗುವಷ್ಟು ಮಾತ್ರವೇ ಗ್ರಹಿಸುವುದರಿಂದ ಸೃಜನಶೀಲ ಚೈತನ್ಯ-ಒತ್ತಡದಿಂದ ಮೂಡುವ ತೀವ್ರತೆಗಿಂತ ಹೆಚ್ಚಾಗಿ ವಾದ-ವಾಗ್ವಾದಗಳ ತೀವ್ರತೆಯೇ ಹೆಚ್ಚು ಕಂಡುಬರುತ್ತದೆ. ಭೈರಪ್ಪ ನವ್ಯ ವಿಮರ್ಶೆ-ವಿಮರ್ಶಕರ ಬಗೆಗೆ ಪ್ರತಿರೋಧ ತೋರುವ ಭರದಲ್ಲಿ ಒಟ್ಟು ಸಾಹಿತ್ಯ ವಿಮರ್ಶೆ ಮತ್ತು ಸ್ವವಿಮರ್ಶೆಯಿಂದಲೇ ಇಡಿಯಾಗಿ ವಿಮುಖರಾದ್ದರಿಂದ ಅವರಷ್ಟು ಪ್ರಮಾಣದ ಸೃಜನಶೀಲರಲ್ಲಿ ಕಾಣಬೇಕಾದ ಪ್ರಯೋಗಶೀಲತೆ, ಆಂತರಿಕ ವಿಕಾಸ ಓದುಗರಲ್ಲಿ ಸಿಗಲೇ ಇಲ್ಲ. ವೈಚಾರಿಕವಾಗಿ ಭಾವನಾತ್ಮವಾಗಿ ಭೈರಪ್ಪನವರಿಗೆ ಹತ್ತಿರವಾಗಿರುವ ರಾಜಕೀಯಸ್ಥರೆ ಅಧಿಕಾರದಲ್ಲಿದ್ದಾಗಲೂ ಅವರು ಬಹುಪಾಲು ಸಮಕಾಲೀನರಂತೆ ಯಾವುದೇ ಸ್ಥಾನಮಾನಗಳ ಹಿಂದೆ ಹೋಗಿಲ್ಲ. ಆದರೆ ಅವರಿಗೆ ಈಗ ಕೇಂದ್ರ ಸರ್ಕಾರದಲ್ಲಿರುವ ವರ್ಚಸ್ಸನ್ನು ಬಳಸಿ ದೇಶಬಾಷೆಗಳ ಬಗ್ಗೆ ಜನಪರ ದೂರ-ದೃಷ್ಟಿಯ ನಿಲುವನ್ನು ತಳೆಯಲು ಪ್ರೇರಕರಾಗುವುದಾದರೆ ಭೈರಪ್ಪನವರ ವ್ಯಕ್ತಿತ್ವದ ಸಾಂಸ್ಕೃತಿಕ ಆಯಾಮಕ್ಕೊಂದು ಮೆರಗು ಬರುತ್ತದೆ.

-ಕೆ.ಸತ್ಯನಾರಾಯಣ

ಕೆ.ಪಿ. ಪೂರ್ಣಚಂದ್ರ ತೇಜಸ್ವಿ



ಹಲವು ವಿವಾದಗಳ ನಡುವೆಯೂ ತನ್ನದೇ ಒಂದು ಬೃಹತ್ ಓದುಗ ವರ್ಗವನ್ನು ಸೃಷ್ಟಿಸಿಕೊಂಡಿರುವ ಭೈರಪ್ಪನವರಿಗೆ, ಯಾವುದೇ ವಿವಾದದ ಗೊಡವೆಯೂ ಇಲ್ಲದೆ ಸರಿಸಮನಾಗಿ ಅಥವಾ ಇನ್ನೂ ಹೆಚ್ಚಿನ ಸಂಖ್ಯೆಯ ಮತ್ತು ವೈವಿಧ್ಯದ ಓದುಗ ವರ್ಗವನ್ನು ಸೃಷ್ಟಿಸಿಕೊಂಡಿರುವ ತೇಜಸ್ವಿ ಎಂದೇ ಜನಪ್ರಿಯರಾದ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಆರಂಭದಲ್ಲಿ ನವ್ಯ ಮಾರ್ಗದಲ್ಲೇ ಬರೆದವರು. ಆದರೆ ಬಹುಬೇಗ ಇದು 'ಕಲಿತ ಮೇಷ್ಟ್ರು'ಳ ಅಕ್ಷರ ವಾಮಾಚಾರದ ಸಾಮ್ರಾಜ್ಯ, ಇದಕ್ಕೂ ನಮ್ಮ ಸುತ್ತಲಿನ ಸಮಾಜಕ್ಕೂ ಯಾವುದೇ ಸಂಬಂಧವಿಲ್ಲ ಎಂಬ ತೀರ್ಮಾನಕ್ಕೆ ಬಂದು ಹಳ್ಳಿಗೆ ಹೋಗಿ ನೆಲೆಸಿದರು. ಇದಕ್ಕೆ ಸ್ಫೂರ್ತಿ 'ಕುವೆಂಪು ಅವರ ಕಲಾಸೃಷ್ಟಿ, ಕಾರಂತರ ಜೀವನ ದೃಷ್ಟಿ ಮತ್ತು ಲೋಹಿಯಾ ಅವರ ತತ್ವ ಚಿಂತನೆ' ಎಂದು,ಅವರೇ ಹೇಳಿಕೊಂಡಿದ್ದಾರೆ.

ಹಳ್ಳಿಗಾಡಿನಲ್ಲಿ ತೇಜಸ್ವಿ ನಮ್ಮ ಗ್ರಾಮೀಣ ಸಮಾಜವು ತನ್ನ ಬದುಕನ್ನು ಆಕ್ರಮಿಸಿಕೊಳ್ಳುತ್ತಿದ್ದ ಆಧುನಿಕತೆಯ ಪ್ರಭಾವವನ್ನು ಮುಖಾಮುಖಿಯಾಗುತ್ತಿದ್ದ ಬಗೆಗಳನ್ನು ದೂರನಿಂತು ವಿನಯದಿಂದ ವೀಕ್ಷಿಸಿದರು. ಆ ಮುಖಾಮುಖಿ ಮನುಷ್ಯ-ಮನುಷ್ಯರ ನಡುವಣ ಮುಖಾಮುಖಿಯನ್ನೂ ಮೀರಿ ಮನುಷ್ಯ ಮತ್ತು ಅವನ ಸುತ್ತಲಿನ ಜೀವ ಪರಿಸರದ ಮುಖಾಮುಖಿಯನ್ನೂ ಒಳಗೊಂಡಿದೆ ಎಂಬುದನ್ನು ಅರಿತರು. ಆ ಅರಿವಿನ ದಾರಿಯಲ್ಲಿ ಸ್ಥಳೀಯ ಜ್ಞಾನಪರಂಪರೆಯ ಸತ್ಯ ಮತ್ತು ಸತ್ವಗಳು ಅವರಿಗೆ ಗೋಚರವಾಗಿ ಉಂಟಾದ ಬೆರಗನ್ನು ಅವರು ಅದೇ ಬೆರಗಿನಲ್ಲಿ 'ಅನ್ನ ತಿನ್ನುವ ಎಲ್ಲರಿಗೂ ಸಂವಹನಗೊಳ್ಳುವ' ಭಾಷೆ ಮತ್ತು ಧಾಟಿಗಳಲ್ಲಿ ಬರೆದರು. ಜನ ಅದರಲ್ಲಿ ತಮ್ಮನ್ನೇ ಕಂಡುಕೊಂಡು ಅದು ತಮ್ಮದೇ ಸಾಹಿತ್ಯವೆಂಬಂತೆ ಮುಗಿಬಿದ್ದು ಓದತೊಡಗಿದರು. ಕಥೆ-ಕಾದಂಬರಿಗಳ ಜೊತೆಗೇ ತೇಜಸ್ವಿ ಸಾಮಾನ್ಯ ಮಾನವ ಕುತೂಹಲದ ಐತಿಹಾಸಿಕ ಮತ್ತು ವೈಜ್ಞಾನಿಕ ಆಖ್ಯಾಯಿಕೆ ಮತ್ತು ಸಾಹಸಗಳ ಕಥೆಗಳನ್ನೂ ಬರೆದು ಈವರೆಗೆ ಯಾರೂ ಗಮನಕೊಡದಿದ್ದ ಕನ್ನಡ ಜನಸಾಮಾನ್ಯರ ಲೌಕಿಕ ಜ್ಞಾನದ ಹಸಿವನ್ನು ನೀಗಿಸುವ ದೊಡ್ಡ ಪ್ರಯತ್ನ ಮಾಡಿದರು. ನಮ್ಮ ಕಾಲದ ದೊಡ್ಡ ಲೇಖಕರಷ್ಟೇ ಅಲ್ಲ, ಮಾರ್ಗಪ್ರವರ್ತಕ ಲೇಖಕರೆಂಬ ಅಭಿದಾನಕ್ಕೂ ಒಳಗಾದರು. ಸಾಹಿತ್ಯಕ್ಕೆ ತೇಜಸ್ವಿಯವರ ಬಹುದೊಡ್ಡ ಕೊಡುಗೆಯೆಂದರೆ ಸಾಹಿತ್ಯವನ್ನು ಅದರ ಪೂಜ್ಯತೆಯ ಪೀಠದಿಂದ ಇಳಿಸಿ, ಅದರ ಅಧಿಕಾರ ಕೇಂದ್ರೀಯತೆಯಿಂದ ಅದನ್ನು ಬಿಡುಗಡೆಗೊಳಿಸಿದ್ದು.

ಸಾಹಿತ್ಯ ಚಿಂತನಾ ಕ್ಷೇತ್ರದಲ್ಲೂ ಹೊಸ ಒಳನೋಟಗಳ ಬರಹಗಳನ್ನು ನೀಡಿರುವ ತೇಜಸ್ವಿ ಕನ್ನಡ ಸಾಹಿತ್ಯ ಚರಿತ್ರೆ ಮತ್ತು ಪಂಪ-ಕುಮಾರವ್ಯಾಸ-ಕುವೆಂಪುರಾದಿಯಾಗಿ ಕನ್ನಡದ ಮುಖ್ಯ ಲೇಖಕರನ್ನು ಗ್ರಹಿಸಬೇಕಾದ ಹೊಸ ನೆಲೆಗಳ ಬಗ್ಗೆಯೂ ಬರೆದು ಕುತೂಹಲ ಕೆರಳಿಸಿದರು. ಆದರೆ ತನ್ನದೇ ಮಡಿ-ಮೈಲಿಗೆಗಳ ಪ್ರಪಂಚದಲ್ಲಿ ಬಂದಿಯಾಗಿರುವ ನಮ್ಮ ಸಾಹಿತ್ಯದ ಅಕಡೆಮಿಕ್ ಲೋಕ ಸಹಜವಾಗಿಯೇ ಈ ಚಿಂತನೆಗಳನ್ನು ನಿರ್ಲಕ್ಷಿಸುತ್ತಲೇ ಬಂದಿದೆ.

-ಡಿಎಸ್ಸೆನ್

ಇವೊತ್ತಿನ ಕನ್ನಡ ಸಾಹಿತ್ಯದ ಒಲವು-ನಿಲುವುಗಳು

–ತಾರಿಣಿ ಶುಭದಾಯಿನಿ

ಬರಹಗಾರ ಒಬ್ಬ ಈಸ್ತೇಟ್(ಕಲಾಭಿಜ್ಞ) ಆಗಿರಬೇಕೆ? ಅಥವಾ ಸಮಾಜಸೇವಕನ ಹೊಣೆಗಾರಿಕೆಯನ್ನು ಹೊತ್ತುಕೊಳ್ಳಬೇಕೆ? ಎನ್ನುವ ಪ್ರಶ್ನೆಯೊಂದಿಗೇ ಸಮಕಾಲೀನ ಸಾಹಿತ್ಯ ಚರ್ಚೆಗೆ ಇಳಿಯಬೇಕಾದ ಒತ್ತಡ ಇದೆ. ಸಾಮಾಜಿಕತೆ ಎನ್ನುವುದು ಎಷ್ಟರಮಟ್ಟಿಗೆ ಸಾಹಿತ್ಯದೊಳಗೆ ಪ್ರವೇಶ ಪಡೆಯಬೇಕು? ಅದರ ಪ್ರಮಾಣವನ್ನು ನಿರ್ಧರಿಸಬಲ್ಲ ಮಾನದಂಡಗಳು ಯಾವುವು? ಎಂಬಿತ್ಯಾದಿಗಳ ಬಗ್ಗೆ ಸಾಹಿತ್ಯ ವಿಮರ್ಶಕರಿಗೆ; ಸ್ವತ; ಬರಹಗಾರರಿಗೆ ಗೊಂದಲವಿದೆ. ಜಾಗತೀಕರಣದ ಬಗೆಗಿನ ಆತಂಕ ಹಾಗು ಬದಲಾದ ಕಾಲಮಾನದಲ್ಲಿ ಪ್ರಚಲಿತವಿರುವ ಅಭಿವ್ಯಕ್ತಿ ಕ್ರಮಗಳು ಮೂಡಿಸುವ ಲಿಪಿ ಸಾಹಿತ್ಯದ ಪ್ರಕಾರದ ಬಗೆಗಿನ ಅಸ್ಥಿರತೆ ಇವು ಸಾಹಿತ್ಯ ರಚನೆಯ ಕ್ರಮಗಳನ್ನೆ ವಿಸರ್ಜನೆ ಮಾಡಿಕೊಳ್ಳುವ ಅಗತ್ಯವನ್ನು ಮುಂದೊಡ್ಡುತ್ತಿವೆ. ಈ ಹಿನ್ನೆಲೆಯಲ್ಲಿಯೇ ಸಮಕಾಲೀನ ಸಾಹಿತ್ಯವನ್ನು ಪ್ರವೇಶಿಸಬೇಕಾಗಿದೆ.

ಸದ್ಯ ಸೃಜನಶೀಲ ಬರವಣಿಗೆಗಳಲ್ಲಾಗಲೀ ವಿಮರ್ಶೆಯಲ್ಲಾಗಲೀ ಸಂಸ್ಕೃತಿಯ ಸಂಗತಿ ಕೇಂದ್ರವಾಗಿದೆ. ಸಂಸ್ಕೃತಿ ಎನ್ನುವುದು ಅಮೂರ್ತವಾಗಿದ್ದರೂ ಅದನ್ನು ವಿವರಿಸಿಕೊಳ್ಳುವ ನೆಲೆಗಳು ಎಡಪಂಥೀಯ, ಬಲಪಂಥೀಯ ಅಥವಾ ಲೋಲುಪ ಎಂಬಂತಹ ಅಚ್ಚುಗಳಲ್ಲಿ ಕಾಣಿಸಿಕೊಳ್ಳುತ್ತಿರುವುದರಿಂದ ಸಾಂಸ್ಕೃತಿಕ ಎನ್ನುವ ನುಡಿಗಟ್ಟನ್ನು ಎಲ್ಲರೂ ತಮಗೆ ತಿಳಿದಂತೆ, ತಮಗೆ ಬೇಕಾದಂತೆ ಬಳಸುತ್ತಿದ್ದಾರೆ ಎನ್ನುವ ಅಂಶವನ್ನು ಗಮನಿಸಬೇಕಿದೆ. ಸಾಂಸ್ಕೃತಿಕ ಅಧ್ಯಯನಗಳು, ಬರಹಗಳು ಆರಂಭವಾದಂತೆ ಅಲ್ಲಿ ಬಹುತ್ವವನ್ನು ಗುರುತಿಸಬಹುದಾಗಿದೆ. ಆದರೆ ಬಹುತ್ವದ ಸಮಸ್ಯೆಯೇನೆಂದರೆ ಅದರ ನಿರ್ವಹಣೆಯು ಯಾರು ಎಲ್ಲಿ ಮಾಡಬೇಕೆಂಬುದು.

ಸಂಸ್ಕೃತಿಯ ಬಾಹುಳ್ಯತೆಯನ್ನು ಕೆಲವರು ಆಧುನಿಕೋತ್ತರ ಎಂದು ಗುರುತಿಸುವುದುಂಟು. ಬಹುತ್ವದ ಬಗೆಗೆ ಆಧುನಿಕೋತ್ತರವಾದವು ಮಾತನಾಡಿದರೂ ಅದು ಹೇಳುವ ನೆಲೆಯಲ್ಲಿ ಸಾಹಿತ್ಯವನ್ನು ಗ್ರಹಿಸುವುದು ಕಷ್ಟ. ಆಧುನಿಕತೆಯನ್ನು ಅರ್ಥ ಮಾಡಿಕೊಂಡು ಪೂರೈಸಿರದ ತಲೆಮಾರುಗಳಲ್ಲಿ ಅದರ ಉತ್ತರೋತ್ತರದ ವೈರುಧ್ಯದ ನೆಲೆಗಳು ತಲುಪಬೇಕಾದ ನೆಲೆಯಲ್ಲಿ ತಲುಪುತ್ತವೆಯೇ ಎಂಬುದು ಅನುಮಾನ. ಸದ್ಯ ಆಧುನಿಕೋತ್ತರವಾದದಿಂದ ಬರಹಗಾರರು ಪಡೆದುಕೊಂಡಿರುವುದು ವಿರಾಟ್ ಕಥನಗಳ ಕಾಲ ಮುಗಿಯಿತೆಂದು ಸಾಹಿತ್ಯವನ್ನು ಸುಗಮಗೊಳಿಸಿಕೊಳ್ಳುವ ಪ್ರಕ್ರಿಯೆ ಹಾಗು ಆಧ್ಯಾತ್ಮಿಕತೆಯನ್ನು ಆಧುನಿಕ ನುಡಿಗಟ್ಟಿನಲ್ಲಿ ಹೇಳಬಹುದೆಂಬ ಸಣ್ಣ ಎಳೆ ಮಾತ್ರ ಎನಿಸುತ್ತದೆ.

ಜಾಗತೀಕರಣೋತ್ತರ ಸಂದರ್ಭದಲ್ಲಿ ಕ್ಷಣಭಂಗುರತೆಯೇ ಸಾಹಿತ್ಯಕ್ಕೆ ತೊಡಕಾಗಿದೆ. ಒಂದು ಪ್ರಯೋಗ ಆಳವಾಗಿ ಕಾಡುವುದರೊಳಗೆ ಇನ್ನೊಂದು ಮತ್ತೊಂದು ಮೇಲಿಂದ ಮೇಲೆ ಅಭಿವ್ಯಕ್ತಿ ಕ್ರಮಗಳು ನುಗ್ಗತೊಡಗಿದಾಗ ಅವನ್ನು ಸಾವಧಾನದಿಂದ ಗ್ರಹಿಸುವ ತಾಳ್ಮೆ ಮಾಯವಾಗುತ್ತದೆ. ಅಲ್ಲದೆ ಮಾರುಕಟ್ಟೆಯ ಒತ್ತಡದಿಂದ ಸೃಷ್ಟಿಯಾಗುವ ವಿಪುಲವಾದ ಸಾಹಿತ್ಯ ಒಬ್ಬ ಓದುಗನನ್ನು ಮತ್ತೊಮ್ಮೆ ಓದಲಾಗದಷ್ಟು ವೇಗದ ವಾತಾವರಣವನ್ನು ಸೃಷ್ಟಿಸಿವೆ. ಈ ಕಹಿಸತ್ಯದ ಜೊತೆಗೇ ಓದುವ, ಬರೆಯುವ ಹಲವಾರು ತಾಂತ್ರಿಕ ಸಾಧನಗಳು ಚಾಲನೆಯಲ್ಲಿರುವುದರಿಂದ ಸಾಹಿತ್ಯ ಚರ್ಚೆಗಳಿಗೆ ಒಂದು ಸಾಮೂಹಿಕತೆ ಸಾಧ್ಯವಾಗುತ್ತಿಲ್ಲ. ಆದುದರಿಂದ ಬರಹಗಾರರ ಬರಹಗಳು ದ್ವೀಪಗಳಂತೆ; ಸ್ವಯಂಪೂರ್ಣ; ಆದರೆ ಸಂಪರ್ಕವಿಲ್ಲದ ರೀತಿ ಕಾಣುತ್ತಲಿವೆ.

ಕನ್ನಡದ ಇಪ್ಪತ್ತೊಂದನೇ ಶತಮಾನದ ಬರವಣಿಗೆಯನ್ನು ಗಮನಿಸಿದರೆ ಸಾಹಿತ್ಯ ಪ್ರಕಾರಗಳ ಬಗೆಗಿನ ಜಿಗುಟುತನ ಹೊರಟು ಹೋಗಿ, ಸರಳ ಸುಲಲಿತ ಗದ್ಯದ ಬಗೆಗೆ ಒಲವು ಮೂಡಿದಂತಿದೆ(ವಸುಧೇಂದ್ರ ಅವರ ಪ್ರಬಂಧಗಳು ಹಾಗು ಕಥೆಗಳು ಒಟ್ಟೊಟ್ಟಿಗೇ ಒಂದು ಸಂಕಲನದಲ್ಲಿ ಪ್ರಕಟಗೊಳ್ಳುತ್ತವೆ ಎನ್ನುವುದನ್ನು ಗಮನಿಸಿ). ಈ ಹೊತ್ತು ಜನರನ್ನು ತಲುಪುತ್ತಿರುವುದು ಗದ್ಯವೇ. ಕನ್ನಡದ ಮಟ್ಟಿಗೆ ಪ್ರಕಾರಗಳ ಹಂಗು ತೊರೆದು ಬರೆಯುವವರ ಸಂಖ್ಯೆ ಹೆಚ್ಚಾಗಿದ್ದು, ಆತ್ಮಕಥೆ, ಅನುಭವ ಕಥನ, ನೆನಪು, ಹಿನ್ನೋಟ ಹೀಗೆ ಹಲವಾರು ಪ್ರಬಂದ ಧ್ವನಿಯುಳ್ಳ ಬರಹಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿವೆ. ಆತ್ಮಕಥೆಗಳಂತೂ ಸಾಕಷ್ಟು ಸಂಖ್ಯೆಯಲ್ಲಿ ಬಂದಿವೆ. ಕಳೆದ ಐದಾರು ವರ್ಷಗಳಲ್ಲಿ ಕರ್ನಾಟಕದ ಅನೇಕ ಮೂಲೆಗಳಿಂದ ಬರೆಯುವ ಲೇಖಕರು ಕಾಣುತ್ತಾರೆ. ಇವರು ಬಹುತೇಕ ಅನಾಮಿಕವಾಗಿದ್ದು ಬರವಣಿಗೆಯ ಹವ್ಯಾಸಿ ಮಾದರಿಯನ್ನು ಅನುಸರಿಸುತ್ತಿದ್ದಾರೆ. ಇವುಗಳಲ್ಲಿ ನನಗೆ ಕಂಡಂತೆ ಮದರಿಯವರ 'ಗೊಂದಲಿಗ್ಯಾ', ಸೆಲ್ವಿ ಅನುವಾದಿಸಿದ


ಎ.ಎಂ. ಮದರಿ


ವಿವೇಕ್


ಪ್ರತಿಭಾ



ಷ. ಶೆಟ್ಟರ್

'ನಾನು ಅವನಲ್ಲ ಅವಳು', ಉಮಾಶ್ರೀ ಅವರ 'ಬೆಂಕಿ...', ಶಾಮಣ್ಣ ಅವರ 'ಕಾಡುತೊರೆಯ ಜಾಡು' ಮುಂತಾದವು ಅನುಭವದ ವಿಭಿನ್ನತೆಗಳಿಂದಲೇ ಆಕರ್ಷಕವಾಗಿರುವಂತ ಕೃತಿಗಳು. ಇವುಗಳ ಜೊತೆಗೆ ಬರಹಗಾರರಾದ ಪ್ರತಿಭಾ ಅವರ 'ಅನುದಿನದ ಅಂತರಗಂಗೆ', ಅನಂತಮೂರ್ತಿಯವರ 'ಸುರಗಿ', ರಹಮತ್ ನಿರೂಪಿಸಿದ 'ಅಮೀರ್‌ಬಾಯಿ ಕರ್ನಾಟಕಿ' ಮುಂತಾದವು ಇವುಗಳ ಲೇಖಕರ ಜನಪ್ರಿಯ ಹಿನ್ನೆಲೆಗಳ ಹೊರತಾಗಿಯೂ ಸಪ್ಪೆಯಾದಂತೆ ತೋರುತ್ತವೆ.

ಕನ್ನಡದ ಕತೆಗಳ ಕಥೆಗಾರಿಕರ ಲೋಕದೃಷ್ಟಿ ಹಾಗು ನಿರೂಪಣಾಕ್ರಮಗಳ ನೆಲೆಗಳಲ್ಲಿ ಬದಲಾವಣೆ ಕಾಣುತ್ತಲಿದೆ. ವರ್ತಮಾನಕ್ಕೆ ತಾಗಿಕೊಂಡಂತೆ 'ಬಿಗ್‌ಸ್ಟೋರಿ'ಗಳ ಆವೃತ್ತಿಯಂತೆ ಕಾಣುವ ಕತೆಗಳು; ಪ್ರಾದೇಶಿಕತೆಯ ಸಮಸ್ಯೆಯನ್ನು ಹೊತ್ತುಕೊಂಡ ಕತೆಗಳು, ಸಾಮಾಜಿಕ ನಿಶ್ಚಿತತೆಗಳನ್ನು ಪ್ರಸ್ತುತಗೊಳಿಸುವ ಕತೆಗಳು ಪ್ರಮುಖವಾಗಿವೆ. ಇವುಗಳ ಹೊರತಾಗಿ ಹೊಸ ಪ್ರಯೋಗಗಳೆಂದರೆ ವಿವೇಕ ಶಾನುಭಾಗ ಅವರ 'ಘಾಚರ್ ಘೋಚರ್' ಸಂಕಲನ (ಇದು ಜಾಗತೀಕರಣದಲ್ಲಿ ಸಾಮಾನ್ಯವಾಗಿರುವ ಔಟ್‌ಸೋರ್ಸ್ ಕೀಲಿಯ ಮೂಲಕ ಜಾಗತೀಕರಣೋತ್ತರ ಮನುಷ್ಯ ಸಂಬಂಧಗಳನ್ನು ಹೇಳುತ್ತದೆ), ವಿನಯಾ ಅವರ 'ಉರಿ', ಕೆ.ಸತ್ಯನಾರಾಯಣ ಮತ್ತು ಮೌನೇಶ ಬಡಿಗೇರರ ಇತ್ತೀಚಿನ ಕರೆಗಳು. ವಸುಧೇಂದ್ರ ಅವರ 'ಮೋಹನಸ್ವಾಮಿ' ಕತೆಗಳು ಕನ್ನಡದ ಬೋಲ್ಡ್ ಗೇ ಕತೆಗಳು. ಆದರೆ ಸಾಹಿತ್ಯದ ಅಭಿವ್ಯಕ್ತಿಗೂ ವೈಯಕ್ತಿಕ ಅಭಿವ್ಯಕ್ತಿಗೂ ಇರುವ ಗೆರೆ ತೀರಾ ತೆಳುವಾಗಿದ್ದು ವಸುಧೇಂದ್ರ ಬರಹಗಾರರಾಗಿ ಹಿನ್ನೆಲೆಗೆ ಸರಿಯುತ್ತಿರುವಂತೆ ತೋರುತ್ತಿದೆ.

ಈ ಹೊತ್ತಿನ ಕಾವ್ಯದ ಬಗೆಗೆ ಅನೇಕ ಗೊಣಗಾಟಗಳಿದ್ದರೂ ಗಂಭೀರವಾದ ಪ್ರಯೋಗಗಳನ್ನು ಹೊಸ/ಹಳೆಯ ತಲೆಮಾರುಗಳ ಕವಿಗಳು ಮಾಡುತ್ತಿದ್ದಾರಾದರೂ ಅವರ ಕಾವ್ಯ ಪ್ರಯೋಗಗಳು ಎಲ್ಲರಿಗೂ ಸಂವಹಿಸುತ್ತಿಲ್ಲ. ಪ್ರತಿಭಾ, ದೇವಿ ಕವಿತೆಗಳ ಮೂಲಕ, ಕಾಫಿಹೌಸ್ ಕವಿತೆಗಳ ಮೂಲಕ, ಲಲಿತಾ ಸಿದ್ಧಬಸವಯ್ಯ ಕಾವ್ಯದ ಸ್ವರೂಪವನ್ನು ಕುರಿತ ಪದ್ಯಗಳ ಮೂಲಕ ಕುತೂಹಲ ಹುಟ್ಟಿಸಿದ್ದಾರೆ. ಹಾಗೇ ಎಸ್.ಮಂಜುನಾಥರ ಇತ್ತೀಚಿನ ಕಾವ್ಯ ಮಾನವ ಸಂದರ್ಭಗಳ ಕಡೆ ಹೆಚ್ಚು ಹೊರಳುತ್ತಿರುವುದನ್ನೂ ಗಮನಿಸಬಹುದು. ಮಿಕ್ಕಂತೆ ಬಹುತೇಕ ಕವಿಗಳ ನುಡಿಗಟ್ಟು, ವಸ್ತು ತೀರಾ ಹೊಸದು ಎಂದು ಎನಿಸುತ್ತಿಲ್ಲ.

ಸಾಹಿತ್ಯ ವಿಮರ್ಶೆ ಮೂಲತಃ ಸಂಸ್ಕೃತಿ ವಿಮರ್ಶೆಯೇ ಎಂಬ ಗ್ರಹಿಕೆಯಲ್ಲಿ ಅನೇಕ ಬಗೆಯ ಮೀಮಾಂಸಾತ್ಮಕ ಬರಹಗಳು ಮುನ್ನೆಲೆಗೆ ಬರುತ್ತಿವೆ. ರಹಮತ್, ಬೂದಾಳ್ ಮುಂತಾದವರು ಸೃಷ್ಟಿಸಿದ ಪರ್ಯಾಯ ಧಾರೆಗಳು ಸಾಹಿತ್ಯ ವಿಮರ್ಶೆಗೆ ನೆರವಾಗುವುದಕ್ಕಿಂತ ಸ್ವತಂತ್ರ ಮೀಮಾಂಸೆಯ ಹಂತದಲ್ಲಿಯೇ ನಿಲ್ಲುತ್ತಿವೆ. ಷ.ಶೆಟ್ಟರ್ ಅವರ 'ಹಳಗನ್ನಡ' ತರದ ಕೃತಿಗಳು ಅನ್ಯಶಿಸ್ತುಗಳ ನೆಲೆಗಳಲ್ಲಿ ಸಾಹಿತ್ಯ ಪ್ರವೇಶವನ್ನು ಸೂಚಿಸುತ್ತಿರುವುದು ವಿಮರ್ಶೆಗೆ ಹೊಸ ಆಯಾಮ ನೀಡುವಂತಿದೆ. ನವ್ಯ ಸಾಹಿತ್ಯ ತನ್ನ ಜೊತೆಗೇ ಬೆಳೆಸಿದ ವಿಮರ್ಶೆಯಂತೆ ಆನಂತರದಲ್ಲಿ ಕಾಣದೇ ಈಗ ಸಾಹಿತ್ಯ ವಿಮರ್ಶೆಯ ಕಾರ್ಯಸೂಚಿಗಳು, ಚೌಕಟ್ಟುಗಳು ಬೇರೊಂದು ನೆಲೆಗೆ ತಲುಪಿವೆ. ಇದರೊಂದಿಗೆ ಪಠ್ಯ ಓದುವ, ಅದರ ಮೂಲಕ ಸಂಸ್ಕೃತಿ ಮೀಮಾಂಸೆಯನ್ನು ಮೂಡಿಸುತ್ತಿದ್ದ ಕನ್ನಡದ ವಿಮರ್ಶೆಯ ಸ್ವರೂಪ ನಿರ್ಣಾಯಕವಾಗಿ ಬದಲಾಗಿದೆ.



(ಕನ್ನಡದ ಗಮನಾರ್ಹ ಕವಯತ್ರಿಯೂ ವಿಮರ್ಶಕಿಯೂ ಆದ ತಾರಿಣಿಯವರು ಸದ್ಯ ಚಿತ್ರದುರ್ಗದ ಸರ್ಕಾರೀ ಕಾಲೇಜೊಂದರಲ್ಲಿ ಇಂಗ್ಲಿಷ್ ಅಧ್ಯಾಪಕಿಯಾಗಿದ್ದಾರೆ)

ಸಾಹಿತ್ಯ-ಸಂಸ್ಕೃತಿ-ದೈವ-ಧರ್ಮ-ಪ್ರಶಸ್ತಿ-ಪ್ರತಿಭಟನೆ ಇತ್ಯಾದಿ ಇತ್ಯಾದಿ...

ಕ

ಇನ್ನೊಂದು ರಾಜ್ಯೋತ್ಸವ ಬಂದಿದೆ. ಕನ್ನಡ ಜನದ ಕರ್ನಾಟಕ ಸರ್ಕಾರ ಕನ್ನಡವನ್ನೇ ಮರೆತಿರುವ ದುರದೃಷ್ಟಕರ ಸಂಗತಿ ಮತ್ತೆ ಈಗ ನೆನಪಾಗುತ್ತಿದೆ. ಜಾಗತೀಕರಣದ ಈ ಪ್ರತಿಕೂಲ ದಿನಗಳಲ್ಲಿ ಕರ್ನಾಟಕದಲ್ಲಿ ಕನ್ನಡವನ್ನು ಉಳಿಸಿ ಬೆಳೆಸುವ ಖಚಿತ ಮಾರ್ಗ, ಅದನ್ನು ಶಾಲಾ ಶಿಕ್ಷಣದ ಮಟ್ಟಿಗಾದರೂ ಶಿಕ್ಷಣದ ಮಾಧ್ಯಮವನ್ನಾಗಿ ಮಾಡುವುದಾಗಿತ್ತು. ಆದರೆ ಇದಕ್ಕೆ ನಮ್ಮ ಸಂವಿಧಾನವೇ ಅಡ್ಡಿಯಾಗಿದೆ ಎಂಬ ವಿಪರ್ಯಾಸದ ಸಂಗತಿ ಸರ್ವೋಚ್ಚ ನ್ಯಾಯಾಲಯದ ಮೂಲಕ ಬೆಳಕಿಗೆ ಬಂತು. ಆಗ ಭಾರತೀಯ ಭಾಷೆಗಳ ಉಳಿವಿಗಾಗಿ ಸಹಜವಾಗಿ ಉಳಿದ ಏಕೈಕ ಮಾರ್ಗವೆಂದರೆ, ಸಂವಿಧಾನವನ್ನೇ ತಿದ್ದುಪಡಿ ಮಾಡುವುದು. ಈ ದಿಸೆಯಲ್ಲಿ ಸ್ವಲ್ಪ ಕಾಲ ಮಾತನಾಡಿದ ಕರ್ನಾಟಕ ಸರ್ಕಾರ ಏಕೋ ಮನಸ್ಸು ಬದಲಿಸಿ, ಕನ್ನಡವನ್ನು ಶಿಕ್ಷಣ ಮಾಧ್ಯಮವನ್ನಾಗಿ ಮಾಡಲು ಸಂವಿಧಾನ ಅಡ್ಡಿ ಬರದ ಮಾರ್ಗವೊಂದನ್ನು ಕಂಡು ಹಿಡಿದಿರುವುದಾಗಿ ಹೇಳಿಕೊಂಡು, ಅದಕ್ಕೆ ನಮ್ಮ ವಿಧಾನಮಂಡಲದ ಒಪ್ಪಿಗೆಯನ್ನೂ ಪಡೆದು ರಾಷ್ಟ್ರಪತಿಗಳ ಅಂಕಿತವೊಂದೂ ಈಗ ಬಾಕಿ ಇರುವುದು ಎಂದು ಹೇಳಿತು. ಆದರೆ ಪ್ರಸ್ತುತ ಶೈಕ್ಷಣಿಕ ವರ್ಷ ಅರ್ಧ ಮುಗಿದರೂ ಸರ್ಕಾರದಿಂದ ಅದರ ಬಗ್ಗೆ ಸುದ್ದಿಯಿಲ್ಲ!


ಇದರ ಅರ್ಥ ಏನು? ಕನ್ನಡ ಬಗ್ಗೆ ತಾನು ಏನೆಲ್ಲ ಮಾಡಬಹುದೋ ಅದನ್ನೆಲ್ಲ ತಾನು ಮಾಡಿದ್ದೇನೆ ಎಂದು ಕನ್ನಡಿಗರಿಗೆ ಹೇಳಿ ಅದು ತನ್ನ ಕೈತೊಳೆದುಕೊಳ್ಳಬೇಕಾಗಿತ್ತು, ಅಷ್ಟೆ! ಅದನ್ನು ಅದು ಮಾಡಿದೆ. ಕನ್ನಡದ ಪರಿಸ್ಥಿತಿ ಮಾತ್ರ ಹಾಗೇ ಉಳಿದಿದೆ. ವಾಸ್ತವವಾಗಿ, ಮೋದಿಯವರ 'ಡಿಜಿಟಲ್ ಇಂಡಿಯಾ' ಆಂದೋಳನ ಆರಂಭವಾದ ಮೇಲಂತೂ ಕನ್ನಡದ ಸ್ಥಿತಿ ಇನ್ನೂ ಚಿಂತಾಜನಕವಾಗಿದೆ! ಇದಾವುದರ ನೆದರೂ ಇಲ್ಲದ ಸರ್ಕಾರ ಮತ್ತು ಕನ್ನಡ 'ಓರಾಟ'ಗಾರರು ಮತ್ತೊಂದು ರಾಜ್ಯೋತ್ಸವದ ಸಂಭ್ರಮದ ಆಚರಣೆಗೆ ಸಿದ್ಧವಾಗುತ್ತಿದ್ದಾರೆ. ಕನ್ನಡಿಗರ ಪಾಲಿಗೆ ಇದಕ್ಕಿಂತ ದೊಡ್ಡ ಆತ್ಮದ್ರೋಹ ಇನ್ನೊಂದಿರಲಾರದು. ಇನ್ನು ಕನ್ನಡಕ್ಕಾಗಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ತ್ಯಾಗ ಮಾಡಿ ಹೋರಾಟ ಮುಂದುವರೆಸುವುದಾಗಿ ಹೇಳಿದ ಲೇಖಕ ಮಹಾಶಯರೊಬ್ಬರು ಸುಸ್ತಾಗಿ ಮನೆ ಸೇರಿದಂತಿದೆ. ಕನ್ನಡ ಈಗ ಯಾರಿಗೂ ಬೇಡವಾದಂತಿದೆ. ಕನ್ನಡವೆನ್ನುವುದೇ ಕನ್ನಡಿಗರಿಗೆ ತಮ್ಮ ಭವಿಷ್ಯಕ್ಕೆ ಕುತ್ತಿನಂತೆ ಕಾಣುತ್ತಿರುವಂತಿದೆ. ಆದರೆ ಅವರು ಕಾಣುತ್ತಿರುವ ಈ ಭವಿಷ್ಯ ಎಂತಹುದು ಎಂಬುದು ಅವರ ಅರಿವಿಗೆ ಬರಲಾಗದಂತಹ ದಿನಗಳಿವು ಎಂಬುದನ್ನಷ್ಟೇ ಇಲ್ಲಿ ಹೇಳಬಹುದು.



ಹೀಗೆ ಈ ಅರಿವಿಗೆ ಎರವಾದವರಲ್ಲಿ, ನಮ್ಮ ಲೇಖಕ-ಬುದ್ಧಿಜೀವಿಗಳೂ ಸೇರಿದ್ದಾರೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಏಕೆಂದರೆ, ಹಿರಿಯ ಸಂಶೋಧಕ ಎಂ.ಎಂ. ಕಲಬುರ್ಗಿಯವರ ಹತ್ಯೆಯೇ ನೆಪವಾಗಿ ತಮ್ಮ ಪ್ರಶಸ್ತಿ-ಬಹುಮಾನಗಳನ್ನು ಹಿಂದಿರುಗಿಸುತ್ತಿರುವ ಇವರು ಕನ್ನಡವನ್ನು ಉಳಿಸುವುದಕ್ಕಾಗಿ ಇಂತಹ ಒಂದು ಪ್ರತಿಭಟನೆ-ಕೆಚ್ಚಿಗೆ ಮುಂದಾಗಲಿಲ್ಲ. ಹಾಗಾಗಿ ಕರ್ನಾಟಕದ ಮಟ್ಟಿಗಾದರೂ ಹೇಳುವುದಾದರೆ, ಈ ಪ್ರಶಸ್ತಿ ವಾಪಸಾತಿ ಚಳುವಳಿ, ಅದರ ವಿರೋಧಿಗಳು ಆಪಾದಿಸುತ್ತಿರುವಂತೆ ಅಭಿಪ್ರಾಯ ಸ್ವಾತಂತ್ರ್ಯದ ದಮನದ ವಿರುದ್ಧವಾಗಿರುವುದಕ್ಕಿಂತ ಹೆಚ್ಚಾಗಿ ರಾಜಕೀಯ ಪ್ರೇರಿತವೇ ಆಗಿರುವಂತೆ ಕಾಣುತ್ತದೆ. ಪ್ರಶಸ್ತಿ ವಾಪಸ್ ನೀಡಿದವರ ರಾಜಕೀಯ ನಿಷ್ಠೆಯನ್ನೊಮ್ಮೆ ನೋಡಿದರೂ ಇದು ನಿಜವೆನ್ನಿಸುತ್ತದೆ. ಬಹುಶಃ ಚಂಪಾ ಮತ್ತು ಕೆಲ ಕಿರಿಯ ಸಾಹಿತಿಗಳ ಹೊರತಾಗಿ ಇವರಾರೂ ಕಲ್ಬುರ್ಗಿ ಹತ್ಯೆಗೆ ಕಾರಣರಾದವರನ್ನು ಪತ್ತೆ ಹಚ್ಚುವಲ್ಲಿ ಸೋತಿರುವ ರಾಜ್ಯ ಸರ್ಕಾರದ ಜಡತೆಯನ್ನು ಪ್ರಶ್ನಿಸಿದಂತಿಲ್ಲ. ಅದಕ್ಕೆ ಛೀಮಾರಿ ಹಾಕಿಲ್ಲ. ಈ ಸಂಬಂಧ ರಾಜ್ಯ ಸರ್ಕಾರಕ್ಕೂ ಕೆಲ ಅಗತ್ಯ ಪ್ರಶ್ನೆಗಳನ್ನು ಹಾಕಿದ್ದರೆ ಈ ಸಾಹಿತಿಗಳ ವಿಶ್ವಾಸಾರ್ಹತೆ ಹೆಚ್ಚುತ್ತಿತ್ತು.

ಅಂದ ಮಾತ್ರಕ್ಕೆ, ಪ್ರಶಸ್ತಿ ವಾಪಸಾತಿ ಆಂದೋಲನದಿಂದ ಪ್ರಯೋಜನವಿಲ್ಲವೆಂದು ನಾನು ಹೇಳುತ್ತಿಲ್ಲ. ದಾದ್ರಿ ಘಟನೆಯ ನಂತರವಂತೂ, ದೇಶದಲ್ಲಿ ಹೆಚ್ಚುತ್ತಿರುವ ಎಲ್ಲ ರೀತಿಯ ಅಸಹಿಷ್ಣುತೆ ಮತ್ತು ಅದು ವ್ಯಕ್ತವಾಗುತ್ತಿರುವ ಹಿಂಸಾತ್ಮಕ ರೂಪಗಳ ವಿರುದ್ಧ ವಿವೇಕಿಗಳೆನಿಸಿಕೊಂಡವರೆಲ್ಲರೂ ಗಟ್ಟಿಯಾಗಿಯೇ ದನಿ ಎತ್ತುವ ಕಾಲ ಬಂದಿದೆ. ಲೇಖಕರೇನೂ ಇದಕ್ಕೆ ಹೊರತಾದವರಲ್ಲ. ಹೊರತಾಗಿಯೂ ಇಲ್ಲ. ಹಾಗಾಗಿಯೇ ರಾಷ್ಟ್ರಮಟ್ಟದಲ್ಲಿ ಅನೇಕ ಗಣ್ಯ ಸಾಹಿತಿಗಳು ತಮ್ಮ ಸಾಹಿತ್ಯ ಪ್ರಶಸ್ತಿಗಳನ್ನೂ ಸ್ಥಾನ-ಮಾನಗಳನ್ನೂ ಹಿಂತಿರುಗಿಸಿದ್ದಾರೆ. ಕಲ್ಬುರ್ಗಿಯವರ ಹತ್ಯೆಯ ಎಚ್ಚರಿಕೆಯ ಕರೆಗಂಟೆಗೆ ಕಿವುಡಾದ ಬರಹಗಾರ ಮತ್ತೇನನ್ನೂ ಕೇಳಲಾರ;ನೋಡಲಾರ. ಅರುಣ್ ಜೇಟ್ಲಿಯಂತಹವರು ಏನೇ ಹೇಳಲಿ, ಪ್ರತಿಭಟನೆಯ ಧ್ವನಿಯನ್ನು ಸೃಷ್ಟಿಸುವುದು ಇಂದಿನ ತುರ್ತು ಅಗತ್ಯವಾಗಿದೆ. ಈ ಮಧ್ಯೆ ಸಾಹಿತಿಗಳು ಅತ್ತೂ ಕರೆದು ಔತಣ ಮಾಡಿಸಿಕೊಂಡಂತೆ ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಈಗ ಕಲ್ಬುರ್ಗಿಯವರ ಹತ್ಯೆಯನ್ನು ಖಂಡಿಸುವ ಮತ್ತು ಲೇಖಕರ ಸ್ವಾತಂತ್ರ್ಯವನ್ನು ಎತ್ತಿಹಿಡಿಯುವ ನಿರ್ಣಯವೊಂದನ್ನು ಪಾಸು ಮಾಡಿಸಿಕೊಂಡಿದ್ದಾರೆ. ಇದು ಎಷ್ಟು ಜನ ಸಾಹಿತಿಗಳಿಗೆ ತೃಪ್ತಿ ತಂದಿದೆಯೋ, ಮುಂದಿನ ದಿನಗಳಲ್ಲಿ ಕಾದು ನೋಡಬೇಕು.

ಭಗವಾನ್‌ಗೆ ಮಾತ್ರ ಮೆರಿಟ್ ಪ್ರಶಸ್ತಿ!



ಕೆ.ಎಸ್.ಭಗವಾನ್ ರಾಮಚಂದ್ರ ಗುಹಾ

ಪ್ರಶಸ್ತಿಗಳ ಬಗ್ಗೆ ಮಾತನಾಡುತ್ತಿರುವ ಈ ಸಂದರ್ಭದಲ್ಲೇ ಈ ಬಾರಿಯ ನಮ್ಮ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಕಟಿಸಿರುವ ಗೌರವ (ಜೀವಮಾನ ಸಾಧನೆಯ!) ಪ್ರಶಸ್ತಿಗಳ ಬಗ್ಗೆಯೂ ಒಂದು ಮಾತು ಹೇಳಬೇಕು. ಕಳೆದ ಕೆಲವು ವರ್ಷಗಳಿಂದ ಈ ಪ್ರಶಸ್ತಿಗಳನ್ನು ರೆವೆನ್ಯೂ ವಿಭಾಗವಾರು ನೋಡಿ, ಸಾಹಿತ್ಯ ನ್ಯಾಯವೊಂದನ್ನು ಬಿಟ್ಟು ಇನ್ನೆಲ್ಲ-ಸಾಮಾಜಿಕ, ಅಲ್ಪಸಂಖ್ಯಾತ, ಲಿಂಗ, ಪ್ರಾದೇಶಿಕ ಇತ್ಯಾದಿ-ನ್ಯಾಯಗಳನ್ನು ಪರಿಗಣಿಸಿ ಪಡಪೋಶಿ ಸಾಹಿತಿಗಳಿಗೆಲ್ಲ ನೀಡುತ್ತಿದ್ದ ಅಕಾಡೆಮಿ ಈ ಬಾರಿ ಈ ನ್ಯಾಯಗಳನ್ನು ಮೀರಿದ ಸಾಹಿತ್ಯ ನ್ಯಾಯವನ್ನೇ ಪರಿಗಣಿಸಿ ಚೆನ್ನಿ, ರಹಮತ್, ಮೊಗಳ್ಳಿ, ಸುಮಿತ್ರಾಬಾಯಿಯವರಂತಹ ನಿಜಸಾಹಿತಿಗಳಿಗೇ ನೀಡಿದೆ ಎಂದು ಸಮಾಧಾನದ ನಿಟ್ಟುಸಿರು ಬಿಡುತ್ತಿರುವಂತೆಯೇ, ಆ ನಿಟ್ಟುಸಿರು ಮುಗಿಯುವ ಮುನ್ನವೇ ಗೊತ್ತಾದ ಸಂಗತಿ ಎಂದರೆ, ಇವರಿಗೆ ನೀಡಿರುವುದೂ ಕ್ರಮವಾಗಿ ಪ್ರಾದೇಶಿಕ, ಅಲ್ಪಸಂಖ್ಯಾತ, ದಲಿತ, ಮಹಿಳಾ ಇತ್ಯಾದಿ ಕೋಟಗಳ ಪ್ರಕಾರವೇ ಅಂತೆ. ಭಗವಾನ್ ಒಬ್ಬರಿಗೇ ಜನರಲ್ ಕೋಟಾದಲ್ಲಿ(ಅಂದರೆ ಸಾಹಿತ್ಯ ನ್ಯಾಯಕ್ಕನುಸಾರವಾಗಿ) ಪ್ರಶಸ್ತಿ ನೀಡಿರುವುದಂತೆ. ಇದು ಗೊತ್ತಾಗಿ, ನಾನು ಈ ಮೊದಲು ಸಲ್ಲಿಸಿದ್ದ ಅಭಿನಂದನೆಯನ್ನು ಹಿಂದಕ್ಕೆ ಪಡೆಯಲು ಚೆನ್ನಿಯವರಿಗೆ ಕರೆ ಮಾಡಿ ಇದನ್ನು ತಿಳಿಸಿದಾಗ ಅವರು ಬಿದ್ದು ಬಿದ್ದು ನಕ್ಕರು. ಅವರು ನಕ್ಕದ್ದು ಭಗವಾನ್‌ಗೆ ಸಂದ ಪ್ರಶಸ್ತಿಯ ಬಗೆಗೋ ಅಥವಾ ತಮಗೆ ಸಂದ ಪ್ರಶಸ್ತಿಯ ಬಗೆಗೋ ಗೊತ್ತಾಗಲಿಲ್ಲ! ಅದೇನೇ ಇರಲಿ, ಬಹುಶಃ ಇದೆಲ್ಲ ನನ್ನಂತೆಯೇ ಇತಿಹಾಸ ಸಂಶೋಧಕ ರಾಮಚಂದ್ರ ಗುಹಾರಿಗೂ ಗೊತ್ತಾಗಿಯೋ ಏನೋ ಅವರು ಮೊನ್ನೆ ಅಖಿಲ ಭಾರತ ಟಿವಿ. ವಾಹಿನಿಯೊಂದರಲ್ಲಿ ಮಾತನಾಡುತ್ತಾ, ಭಗವಾನ್ ಮತ್ತು ಎಂ.ಎಫ್. ಹುಸೇನರ ಹೆಸರುಗಳನ್ನು ಒಟ್ಟಿಗೇ ಪ್ರಸ್ತಾಪಿಸಿ, 'ಹುಸೇನರಿಗೆ ಕೊಟ್ಟಂತಹ ಕಿರುಕುಳವನ್ನೇ ಬಲಪಂಥೀಯ ಪುಡಿ ಗುಂಪುಗಳು ನನ್ನ ರಾಜ್ಯ ಕರ್ನಾಟಕದ ಓರ್ವ ಅಪೂರ್ವ ವಿಚಾರವಾದಿಯಾದ ಕೆ.ಎಸ್. ಭಗವಾನ್‌ರಿಗೂ ಕೊಡುತ್ತಿವೆ' ಎಂದು ಕನಲಿದ್ದು ಎಂದು ಕಾಣುತ್ತದೆ!

ಬಾಬಾಬುಡನ್‌ಗಿರಿಯ ನೆತ್ತಿಯಲ್ಲಿ...

ನಮ್ಮ ನಮ್ಮ ಕೆಲವು ಕುಟುಂಬಗಳು ಒಟ್ಟಿಗೆ ಬಾಬಾ ಬುಡನ್‌ಗಿರಿ-ಕಳಸ-ಕುಂದಾದ್ರಿ ಪ್ರವಾಸ ಕೈಗೊಂಡಿದ್ದೆವು. ಕರ್ನಾಟಕದ ಪ್ರಕೃತಿ ಸೌಂದರ್ಯ. ಅದರಲ್ಲೂ ಮಲೆನಾಡಿನಲ್ಲಿ ಮಳೆಗಾಲ ಮುಗಿದ(ಅದು ಎಷ್ಟೇ ದುರ್ಬಲವಾಗಿದ್ದರೂ) ನಂತರ ಗರಿಗೆದರಿ ನಿಲ್ಲುತ್ತದೆ. ಚಿಕ್ಕಮಗಳೂರಿನಿಂದ ಕಳಸದವರೆಗಿನ ಸುಮಾರು ಅರವತ್ತು-ಎಪ್ಪತ್ತು ಕಿ.ಮೀ.ಗಳ ರಸ್ತೆಯ ಇಕ್ಕೆಲಗಳಲ್ಲೂ ಕಾಣುವ ಅರಣ್ಯ ಸಂಪತ್ತು ಮತ್ತು ಜೊತೆಗೇ ಸೇರಿಕೊಂಡಿರುವ ಕಾಫಿ ಮತ್ತು ಚಹಾ ತೋಟಗಳ ವಿಂಗಮ ನೋಟ ನಯನಮನೋಹರವೆಂದರೇನು ಎಂಬುದನ್ನು ತಿಳಿಸಿಕೊಡುವಂತಿದೆ. ದಟ್ಟ ಕಾವಳ ಕವಿದ ಸಂಜೆಯಲ್ಲಿ ಆಗುಂಬೆ ಬಳಿಯ ಕಡಿದಾದ ಕುಂದಾದ್ರಿ ಬೆಟ್ಟವನ್ನು



ಏರಿ, ಅದರ ತುದಿಯಲ್ಲಿ ಅನುಭವಿಸಿದ ಅವ್ಯಕ್ತ ಆನಂದ ಬಹಳ ದಿನ ಮನದಲ್ಲಿ ಉಳಿಯುವಂತಹದ್ದು. ನಮ್ಮ ಜೊತೆಯಲ್ಲಿದ್ದ ಕಲ್ಬುರ್ಗಿ ಕಡೆಯ ದಂಪತಿಗಳಿಗಂತೂ ಇದೊಂದು ಅಪೂರ್ವ ಅನುಭವ.

ಆದರೆ ಇದೇ ಸಂದರ್ಭದಲ್ಲಿ ನನಗಾದ ಒಂದು ಜಿಗುಪ್ಸೆಯ ಸಂಗತಿಯೊಂದನ್ನೂ ಇಲ್ಲಿ ಹೇಳಬೇಕು. ೨೫ ವರ್ಷಗಳ ಹಿಂದೆ ನಾನು ನೋಡಿದ್ದ ಬಾಬಾಬುಡನ್‌ಗಿರಿ ಬದಲಾಗಿದೆ. ನಾನು ಯೂರೋಪಿನ ಆಲ್ಪ್ಸ್ ಪರ್ವತದ ತುತ್ತತುದಿಗೂ ಹೋಗಿ ಬಂದಿದ್ದೇನೆ. ಆದರೆ ಬಾಬಾ ಬುಡನ್ ಗಿರಿಯ ತುತ್ತತುದಿಯಲ್ಲಿನ ದೈವೀಕವೆನ್ನಿಸುವ ಮಂಜು ಕವಿದ ಹಸಿರು ಗುಡ್ಡಗಳ ಬಯಲಿನ ಆನಂದ ಎಲ್ಲೂ ಸಿಗುವುದಿಲ್ಲ. ಆದರೆ ಆ ಆನಂದದ ರುಚಿ ಕೆಡುವಂತೆ ಬಾಬಾಬುಡನ್ ಪ್ರದೇಶವನ್ನೀಗ ದತ್ತಮಾಲಾದವರ ಕಾಟದಲ್ಲಿ ಕಬ್ಬಿಣದ ಪಂಜರವನ್ನಾಗಿ ಮಾಡಲಾಗಿದೆ. ಇಲ್ಲಿ ಧರ್ಮ ಕಬ್ಬಿಣದ ಪಂಜರದಲ್ಲಿ ಸೆರೆಯಾಗಿದೆ. ಬಾಬಾ ಬುಡಾನ್ ದತ್ತಾತ್ರೇಯ ಪೀಠದ ಸುತ್ತಣ ಗುಡ್ಡಗಳಲ್ಲಿ ಹರಡಿರುವ ತಮ್ಮ ಹಿರಿಯರ ಗೋರಿಗಳಿಗೆ ಹೂ ಇಡಲು ಆ ಕಬ್ಬಿಣದ ಪಂಜರದ ತೂರಿ ಹಾರುವ ಸಾಹಸಮಾಡುತ್ತಿದ್ದ ಕೆಲವು ಮುಸ್ಲಿಂ ಶ್ರದ್ಧಾಳು ಯುವಕರನ್ನು ಕಂಡು ನನ್ನ ಕಣ್ಣುಗಳು ತುಂಬಿಕೊಂಡವು. ಇದನ್ನೆಲ್ಲ ಯಾರಿಗೆ ಹೇಳುವುದು?

ಇರಲಿ, ದಾವಣಗೆರೆಯ ಗೆಳೆಯರೊಬ್ಬರು ಎರಡು ವರ್ಷಗಳ ಹಿಂದೆ ಎಂ.ಎಂ. ಕಲಬುರ್ಗಿಯವರು ಅಲ್ಲಿ ಬಸವಜಯಂತಿ ಸಂದರ್ಭದಲ್ಲಿ(ಮೇ ೧೩, ೨೦೧೩) ಮಾನವ ಹಕ್ಕುಗಳ ವೇದಿಕೆಯಲ್ಲಿ ಮಾಡಿದ ಪುಟ್ಟ ಭಾಷಣದ ಲಿಪೀಕರಣ ಮಾಡಿ ಕಳಿಸಿದ್ದಾರೆ. ಇದು ಕಲ್ಬುರ್ಗಿಯವರ ಒಟ್ಟು ಧಾರ್ಮಿಕ-ಸಾಮಾಜಿಕ ಚಿಂತನೆಯನ್ನು ಕ್ರೋಢಿಕರಿಸಿರುವಂತಿರುವುದರಿಂದ ನಮ್ಮ ಓದುಗರ ಅವಗಾಹನೆಗಾಗಿ ಇಲ್ಲಿ ನೀಡುತ್ತಿದ್ದೇವೆ.

–ಡಿ.ಎಸ್. ನಾಗಭೂಷಣ

ಕಲ್ಬುರ್ಗಿಯವರ ಒಂದು ಪುಟ್ಟ ಭಾಷಣ:

ವೇದಿಕೆಗೆ ನಮಸ್ಕಾರ, ಸಭಿಕರಿಗೆ ನಮಸ್ಕಾರ. ನಾನು ಸಾಯುವುದಿಲ್ಲ. ನನ್ನಲ್ಲಿ ಸತ್ಯ ಜೀವಂತವಾಗಿರುವವರೆಗೆ ಈ ಮಾತು ನನ್ನ ಶ್ವಾಸ... ವಿಶ್ವಾಸ.


ಮಾನವ ಹಕ್ಕುಗಳ ಪ್ರಥಮ ಹರಿಕಾರ ರೂಸ್‌ವೆಲ್ಟ್ ೧೯೪೮ರಲ್ಲಿ ಎರಡನೆಯ ಮಹಾಯುದ್ಧದಲ್ಲಿ ಆದ ಅಪಾರ ಹಾನಿಯಿಂದ ನೊಂದು ೩೦ ಅಂಶಗಳ ಮಾನವ ಹಕ್ಕುಗಳನ್ನು ಮಂಡಿಸಿದ. ಬಸವನ ವಚನಗಳಲ್ಲಿ ೧೨ನೆಯ ಶತಮಾನದಲ್ಲೇ ಇವೆಲ್ಲ ಬಂದಿವೆ. ಭಾರತದ ಇತಿಹಾಸದಲ್ಲಿ ಉಪನಿಷತ್ತುಕಾರರು, ಇತರೆ ಮಹಾತ್ಮರು ಕಾಡಿನಲ್ಲಿ ಮರದಡಿ ಜ್ಞಾನದ ಮೂಲಕ ಕ್ರಿಯೆಯನ್ನು ಬೋಧಿಸಿದರೆ ಬಸವಣ್ಣ ಜನರ ಮಧ್ಯೆ ಹೋರಾಟದಲ್ಲಿ ಕ್ರಿಯೆಯ ಮೂಲಕ ಜ್ಞಾನ ಅನುಷ್ಠಾನ ಮಾಡಿದವ. ಆತನದು ಮೊದಲು ನಡೆ, ಅನಂತರ ನುಡಿ. ಬಸವಣ್ಣ ಬರುವವರೆಗೂ ಜ್ಞಾನದ ಮೂಲಕ ಕ್ರಿಯೆಯು ಪ್ರಚಲಿತದಲ್ಲಿತ್ತು. ಬಸವಣ್ಣ ಭಾರತದ ಮೊದಲ 'ಆಕ್ಟಿವಿಸ್ಟ್', ಚಳುವಳಿಗಾರ. 'ನಾಲಗೆ ತಾಗಿದ ರುಚಿಗೆ ಮನವೇ ಸಾಕ್ಷಿ ಅಯ್ಯಾ..' 'ಮಾಲೆಗಾರರ ಕೇಳಿ ಹೂವು ಅರಳುವದೇ ಅಯ್ಯಾ..' ಎಂದರಿತು ಕಾರ್ಯ ನಿರ್ವಹಿಸಿದವ.

ಕಲ್ಯಾಣಕ್ಕೆ ಹೋದ ಆರಂಭದಲ್ಲೇ ಶಿವನಾಗಮಯ್ಯ ಎನ್ನುವ ದಲಿತನೊಂದಿಗೆ ದೋಸ್ತಿ ಮಾಡಿ, ಅವನ ಮನೆಯಲ್ಲಿ ಉಂಡ. ಅಸ್ಪೃಶ್ಯತೆಯ ಅಪರಾಧದ ಮೇಲೆ ಬಸವಣ್ಣನನ್ನು ಆಸ್ಥಾನದ ಬದಲಿಗೆ (ಮೈಲಿಗೆ ಆಗುತ್ತದೆಯೆಂದು) ಬೀದಿಯಲ್ಲಿಯೇ ವಿಚಾರಣೆ ನಡೆಸಿದರು. ಇವನ ಸಮತಾವಾದ ಮಾನವತಾವಾದಕ್ಕೆ ಅಂದಿನ ಸಂಪ್ರದಾಯಸ್ಥರು ಸದ್ಯಕ್ಕೆ ಸುಮ್ಮನಾದರು.

ಬಸವಣ್ಣನ ಬದುಕಿನ ಮೂರು ಪ್ರಮುಖ ಘಟ್ಟಗಳು: ೧. ಬಾಗೇವಾಡಿ— ಕರ್ಮದಿಂದ ಧರ್ಮಕ್ಕೆ ೨. ಕೂಡಲಸಂಗಮದಲ್ಲಿ – ಅಂಗದಿಂದ ಲಿಂಗಕ್ಕೆ ೩. ಕಲ್ಯಾಣದಲಿ –ಲಿಂಗದಿಂದ ಜಂಗಮಕ್ಕೆ ಬಸವಣ್ಣನ ಆತ್ಮೋದ್ಧಾರ ಸಮಾಜೋದ್ಧಾರದ ಪಯಣ ನಡೆಸಿದ.

ಲಿಂಗ ಪೂಜೆಯು ಮುಂಜಾನೆಯ ಬಿಸಿಲಿನಂತೆ ಹಿತ, ಸುಲಭ. ಆದರೆ ಜಂಗಮ ಪೂಜೆ (ಸಮಾಜ ಸೇವೆ) ಮಧ್ಯಾಹ್ನದ ಬಿಸಿಲಿನಂತೆ ಕಡುಕಷ್ಟ. ಆತ್ಮೋದ್ಧಾರ ಸುಲಭ. ಆದರೆ ಸಮಾಜೋದ್ಧಾರ ಕಷ್ಟಸಾಧ್ಯ. ಬಸವ, ಮುಂದೆ ಗಾಂಧಿ ಸಮಾಜೋದ್ಧಾರ ಮಾಡಿದರು.

ಲಕ್ಷಕೊಬ್ಬ ಭಕ್ತ, ಕೋಟಿಗೊಬ್ಬ ಶರಣ. ನಮ್ಮ ದೇಶದಲ್ಲಿ ದೇವ ದೇವಿಯರ ಮುಂದೆ ಉನ್ಮಾದದ ಭಕ್ತಿ ಪರಂಪರೆ ನಡೆದಿತ್ತು. ರಾಮಕೃಷ್ಣರದು ಉನ್ಮಾದದ ಭಕ್ತಿ. ಭಜನಾ ಭಕ್ತಿ. ಇನ್ನೊಂದು ಪರಂಪರೆ ಉಗ್ರಭಕ್ತಿ. ಶಿವನಿಗೆ ಕಣ್ಣುಕೊಟ್ಟ ಮಾರ್ಕಂಡೇಯನದು ಉಗ್ರಭಕ್ತಿ. ಬಸವನದು ವೈಚಾರಿಕ ಭಕ್ತಿ. ಸಕಲ ಜೀವ ಜಂತುಗಳನ್ನು ಪ್ರಕೃತಿಯನ್ನು ಪ್ರೀತಿಸುವ ಭಕ್ತಿ. ಭಕ್ತ ನಿಂತಲ್ಲಿಂದ ಮುಂದಿನ ಹಂತದಲ್ಲಿ ಶರಣ. ಅಂಗ ಲಿಂಗವಾಗುವ ಹಾಗೆ. ಭಕ್ತ ಶರಣನಾಗುವ Metamorphosis…. ಪರಿವರ್ತನಾ ಪ್ರಕ್ರಿಯೆ. ಜೀವ ಶಿವ ಆಗುವುದು. ಜೀವ ಪರಮಾತ್ಮ ಆಗುವುದು ಅಪೂರ್ವ ಸಿದ್ಧಾಂತ. ವ್ಯಕ್ತಿತ್ವ ದೈವೀಕರಣ ಆಗಿ ಅದು ಸಾಮಾಜೀಕರಣ ಆಗಬೇಕು. ಅರವಿಂದರಿಗೆ ವ್ಯಕ್ತಿತ್ವ ದೈವೀಕರಣ. ಆದರೆ ಗಾಂಧಿ, ಅಂಬೇಡ್ಕರ್ ಸಮಾಜದ ದೈವೀಕರಣದ ಪ್ರಯತ್ನ ಮಾಡಿದರು. ಬಸವಣ್ಣ "ಲಿಂಗ ವ್ಯಸನಿ ಜಂಗಮ (ಸಮಾಜ) ಪ್ರೇಮಿ" ಎನಿಸಯ್ಯ ಎಂದು ಸದಾ ಬೇಡುತ್ತಿರುತ್ತಾರೆ. ಆತ್ಮೋದ್ಧಾರದ ಜೊತೆಗೆ ಸಮಾಜೋದ್ಧಾರ ಮಾಡಿದವನು ಬಸವಣ್ಣ. ವರ್ಗ, ವರ್ಣ, ಲಿಂಗಭೇದ ಅಳಿಸಲು ಚಳವಳಿ ಮಾಡಿದವ. ಭೇದ ಸಂಸ್ಕೃತಿ ಅಳಿಸಿ ಅಭೇದ ಸಂಸ್ಕೃತಿ ಉಳಿಸಿದ.



ಭಾರತದ ಅವನತಿಯ ಎರಡು ಅಂಶಗಳು ಎಂದರೆ ಒಂದು ಜಾತಿ ಮತ್ತೊಂದು ದೇವತೆಗಳು. ಕರ್ನಾಟಕದಲ್ಲಿ ೩೬೦೦೦ ದೇವಾಲಯಗಳಿವೆ. ಅವು ಮೌಢ್ಯ ಹಾಗೂ ಶೋಷಣಾ ಕೇಂದ್ರಗಳು. ದಾನ ಅಂದು ಶೋಷಣೆಯಾಗಿತ್ತು. ೧೬ ದಾನಗಳ ಪಟ್ಟಿ ಇತ್ತು. ಕನ್ಯಾದಾನ, ಕನ್ಯಾಶುಲ್ಕ ಇದ್ದವು. ಬಸವಣ್ಣ ಕಾಯಕವನ್ನು ಕಡ್ಡಾಯ ಮಾಡಿದ. ಅದರಿಂದ ಕಲ್ಯಾಣ ಸುಭಿಕ್ಷವಾಯಿತು. ಶರಣರೆಲ್ಲರಿಗೂ ಕಾಯಕವೇ ಪೂಜೆಯಾಯ್ತು. ಕಾಯಕದಲ್ಲಿ ತೊಡಗಿದರೆ ಗುರು ಪೂಜೆ, ಲಿಂಗ ಪೂಜೆಯಾದರೂ ಬಿಡಬೇಕೆಂಬುದು ಆದರ್ಶವಾಯಿತು. 'ದುಡಿಯದೇ ತಿನ್ನುವುದು ಪದಾರ್ಥ. ದುಡಿದು ತಿನ್ನುವುದು ಪ್ರಸಾದ' ಎಂದು ಪರಿಗಣಿತವಾಯಿತು. ಲಕ್ಕಮ್ಮ ತನ್ನ ಗಂಡ ಸುಮ್ಮನೆ ಕೂತರೆ 'ಕಾಯಕ ಕೆಟ್ಟಿತ್ತು ಎನ್ನಾಳ್ದನೆ' ಎಂದು ಎಚ್ಚರಿಸುತ್ತಾಳೆ. ಕಾಯಕದಲ್ಲಿ ವಸ್ತುವಿನ ನೈಜ ಬೆಲೆಗಿಂತ ಹೆಚ್ಚಿಗೆ ಪಡೆದರೆ ಅದು ಮೋಸ. ನುಲಿಯ ಚಂದಯ್ಯನ ಶಿಷ್ಯ ಲಿಂಗಯ್ಯ ಹಗ್ಗ ಮಾರಿ ದುಪ್ಪಟ್ಟು ಹಣ ತಂದಾಗ ಚಂದಯ್ಯ ಸಂತೋಷಿಸದೆ ಲಿಂಗಯ್ಯನನ್ನು ನಿಂದಿಸಿ, ತಂದ ಜಾಸ್ತಿ ಹಣ ವಾಪಸು ಕೊಡಲು ಕಳುಹಿಸುತ್ತಾನೆ. ಅಂದಿನ ತತ್ವ "ನಾನು" ದುಡಿಯಬೇಕು. "ನಾವೆಲ್ಲ" ಉಣ್ಣಬೇಕು. ಕಾಯಕ ದಾಸೋಹದ ನೀತಿ ಇದು.

ಬಸವ, ವಿವೇಕಾನಂದ, ಗಾಂಧಿ ಜಾಗತಿಕ ಮಹಾಪುರುಷರು. ಬಸವ ಕನ್ನಡಿಗನೆಂಬ ಹೆಮ್ಮೆ ನಮ್ಮೆಲ್ಲರದು. ಒಮ್ಮೆ ವಿವೇಕಾನಂದರಿಗೆ ಒಬ್ಬ ಭಕ್ತ ಸ್ವಾಮಿ "ಈ ಗುಹೆಯಲ್ಲಿ ಒಬ್ಬ ಸಂನ್ಯಾಸಿ ೨೦ ವರ್ಷದಿಂದ ತಪಸ್ಸು ಮಾಡುತ್ತಿದ್ದಾನೆ. ಅದರ ಬಗ್ಗೆ ನಿಮ್ಮ ಅಭಿಪ್ರಾಯವೇನು?' ಎಂದು ಕೇಳಿದರು. ಅವರು ಅಲ್ಲಿದ್ದ ಬಂಡೆಯೊಂದನ್ನು ತೋರಿಸಿ "ಅದು ಸಾವಿರ ವರ್ಷ ತಪಸ್ಸು ಮಾಡಿದೆ. ಅದರಿಂದೇನು ಪ್ರಯೋಜನ?' ಎಂದರು.


ಬಸವ ಕನಸು ಕಂಡ. ಕಟ್ಟುವ ಕಾಯಕದಲ್ಲಿ ಕಲ್ಯಾಣ ನಿರ್ಮಿಸಿದ. ಅದಕ್ಕೆ ಭೃತ್ಯಾಚಾರ, ಬಾಗುವ ಗುಣ ಅನುಸರಿಸಿ ಬೀಗುವ ಅಹಂಕಾರ ದೂರ ಇಟ್ಟ. 'ಮೇಲಾಗಲೊಲ್ಲೆನು, ಕೀಳಾಗಲೊಲ್ಲೆನಲ್ಲದೆ....ಮೇಲಿಂಗೆ ಕರೆವುದೇ ಹಯನು? ಮೇಲಾಗಿ ನರಕದಲಿ ಓಲಾಡಲೊಲ್ಲೆನು. ದೇವಾಲಯ, ಕಳಸ ಬೇಡ. ಶಿರ ಹೊನ್ನ ಕಳಸ' ಎಂದ. ಕಳಸದ ಮೇಲೆ ಕಾಗೆ ಕೂರುತ್ತೆ. 'ಎನ್ನನು ಶರಣರ ಚಮ್ಮಾವಿಗೆ ಮಾಡು' ಎಂದ. ಎಲ್ಲರ ಜೊತೆ ಬೆಂದರೆ ಶಿವಸುಖ. ಶಿವಸಾರ. ಗೆದ್ದು ಸೋಲುವುದಕ್ಕಿಂತ ಸೋತು ಗೆಲ್ಲುವುದು ಮುಖ್ಯ. ಕಾಲು ಕೀಳಲ್ಲ, ಶಿರ ಶ್ರೇಷ್ಠ ಅಲ್ಲ. ಎಲ್ಲರೂ ಎಲ್ಲದೂ ಸಮಾನ ಎನ್ನುವ ಸಮ-ಸಮಾಜ ಕಟ್ಟಿದ. ಬಸವ ವಿನೀತ ಮನೋಭಾವದವ. ಸಕಲ ಜೀವಾತ್ಮರಿಗೆ ಲೇಸ ಬಯಸಿ, 'ಇವ ನಮ್ಮವ, ಇವ ನಮ್ಮವ' ಎಂದು ದಯವೇ ಧರ್ಮದ ಮೂಲ ಎಂದು ನಂಬಿ ಬಾಳಿ, ಅನುಷ್ಠಾನಕ್ಕೆ ತಂದವ. ನಾವೆಲ್ಲರೂ ವಚನಗಳ ದಾರಿಯಲ್ಲಿ ಬಸವನ ದಾರಿಯಲ್ಲಿ ನಡೆಯಲು ಪವಿತ್ರ ದಿನವಾದ ಬಸವ ಜಯಂತಿಯಂದು ಪಣ ತೊಡೋಣ. ಎಲ್ಲರಿಗೂ ವಂದನೆ, ನಮಸ್ಕಾರ.

(ಧ್ವನಿಯಿಂದ ಲಿಪಿಗೆ: **ಶಿವನಕೆರೆ ಬಸವಲಿಂಗಪ್ಪ**)

ಪುಸ್ತಕಾವಲೋಕನ

ಪು: ಕಾಮ್ರೇಡ್ ಕೆ.ಎಂ. ಶ್ರೀನಿವಾಸ್ (ಅಭಿನಂದನಾ ಗ್ರಂಥ) ಸಂ: ಕೆ.ಆರ್. ದಯಾನಂದ ಮತ್ತು ಡಾ. ಬಿ. ಗಣಪತಿ ಉತ್ತುಂಗ ಪ್ರ: ಕಾಳಮ್ಮನಗುಡಿ ಕೆ.ಎಂ. ಶ್ರೀನಿವಾಸ್ ಅಭಿನಂದನಾ ಸಮಿತಿ, ತೀರ್ಥಹಳ್ಳಿ ಪು : ೧೮೨ ಬೆಲೆ: ರೂ. ೩೦೦/-

ಬಗ್ಗಡದಾಳದ ತಿಳಿನೀರಿನಂತಹ ಬದುಕು



ಮೊದಲಿನಿಂದಲೂ ತೀರ್ಥಹಳ್ಳಿ ತಾಲ್ಲೂಕು ತಾತ್ವಿಕ ರಾಜಕೀಯ ಹೋರಾಟಗಳಿಗೆ ಪ್ರಸಿದ್ಧವಾಗಿದೆ. ಜನ ಸಮೂಹ ಮತ್ತು ನಾಯಕತ್ವದಲ್ಲಿ ಪರಸ್ಪರ ಸಮತೋಲನ, ತಿಳಿವಳಿಕೆ, ಕ್ರಿಯಾಶೀಲತೆಗಳಿದ್ದರೆ ಇಂತಹ ರಾಜಕೀಯ-ಸಾಮಾಜಿಕ ಜೀವಂತಿಕೆ ಸಾಧ್ಯವಾಗುತ್ತದೆ. ಇದೇ ತಾಲ್ಲೂಕಿನ ರಾಜಕೀಯ ಕ್ರೀಯಾಶೀಲತೆ, ಎಚ್ಚರಗಳನ್ನು ಜೀವಂತವಾಗಿರುವುವಲ್ಲಿ ಶ್ರಮಿಸಿದ ನಾಯಕ ಕೆ.ಎಂ. ಶ್ರೀನಿವಾಸ ಅವರದ್ದು ಅವಿಸ್ಮರಣೀಯ ಹೋರಾಟ ಮತ್ತು ವ್ಯಕ್ತಿತ್ವ. ಶಾಂತವೇರಿ ಗೋಪಾಲ ಗೌಡರಂತೆಯೇ ನಮ್ಮ ನೆನಪಲ್ಲಿ ಹಸಿರಾಗಿರುವ ಶ್ರೀಯುತರ ಯಶೋಗಾಥೆಯನ್ನು ಈ ಅಭಿನಂದನಾ ಗ್ರಂಥ ಕಟ್ಟಿಕೊಡುತ್ತದೆ.

ಈ ಗ್ರಂಥದ ಕೇಂದ್ರ ವ್ಯಕ್ತಿ ಕೆ.ಎಂ.ಶ್ರೀ ಅವರನ್ನು ಒಳಗೊಂಡಂತೆ ೩೪ ಮಂದಿ ಲೇಖಕರು ಬರೆದಿರುವ ಲೇಖನಗಳು ಈ ಧೀಮಂತ ನಾಯಕನ ವ್ಯಕ್ತಿತ್ವ, ಬದುಕು, ಪ್ರೀತಿಯ 'ನಂಟು', ವಿಚಾರಧಾರೆ ಇವುಗಳನ್ನು ನಿರೂಪಿಸುತ್ತವೆ. ಇವುಗಳೊಂದಿಗೆ ಕುಟುಂಬದ, ನಾನಾ ಹೋರಾಟದ ವಿವರಗಳು, ಚಿತ್ರಗಳು ಗ್ರಂಥದ ಆಕರ್ಷಣೆಯನ್ನು ಹೆಚ್ಚಿಸಿವೆ.

ಸರಳತೆ, ನಿಷ್ಠಾವಂತ ಹೋರಾಟದ ಮನೋಧರ್ಮ, ನಿಸ್ವಾರ್ಥತೆ, ಕಮ್ಯುನಿಸ್ಟ್ ಸಿದ್ಧಾಂತದ ಬಲವಾದ ತಳಹದಿ ಇವುಗಳ ಎರಕದಿಂದ ಮೂಡಿಬಂದಿರುವ ಕೆ.ಎಂ.ಶ್ರೀ ಒಬ್ಬ ಹೃದಯವಂತ ನಾಯಕ. ಆರಗದ ಕಾಳಮ್ಮನಗುಡಿಯ ಗ್ರಾಮೀಣ ಭಾಗದಲ್ಲಿ ಹುಟ್ಟಿ ಬೆಳೆದು ಬಾಲ್ಯದ ವಿದ್ಯಾಭ್ಯಾಸವನ್ನು ಅಲ್ಲಿಯೇ ಪೂರೈಸಿದವರು. ತೀರ್ಥಹಳ್ಳಿ, ಶಿವಮೊಗ್ಗ, ಮೈಸೂರಿನಲ್ಲಿ ಮುಂದಿನ ಶಿಕ್ಷಣವನ್ನು ಪಡೆದು ಶಿವಮೊಗ್ಗದಲ್ಲಿ ಸ್ವಲ್ಪ ಕಾಲ ವಕೀಲಿ ವೃತ್ತಿಯನ್ನು ಮಾಡಿದವರು. ಈ ವೃತ್ತಿಯಲ್ಲಿ ಬೇಸರಗೊಂಡು ತಮ್ಮ ಹಳ್ಳಿಗೆ ಹಿಂದಿರುಗಿದರು. ಆ ಕಾಲಕ್ಕಾಗಲೇ ಶಾಂತವೇರಿ ಗೋಪಾಲಗೌಡರ ಪ್ರಭಾವ ದಟ್ಟವಾಗುತ್ತಿತ್ತು. ಕೆ.ಎಂ.ಶ್ರೀ ಅವರು ಅವರೊಂದಿಗೆ ಚುನಾವಣಾ ಪ್ರಚಾರ, ಚಳವಳಿಗಳಲ್ಲಿ ಭಾಗವಹಿಸುತ್ತಾ ಬಂದರು. ನಂತರ ಅವರ ಸ್ವಭಾವದಲ್ಲಿ ಅಡಕವಾಗಿದ್ದ ಕ್ರಾಂತಿಕಾರಿ ವಿಚಾರಗಳಿಂದಾಗಿ ಕಮ್ಯುನಿಸ್ಟ್ ಪಕ್ಷವನ್ನು ಬಲಪಡಿಸುವತ್ತ ತಮ್ಮನ್ನು ತೊಡಗಿಸಿಕೊಂಡರು.

ತಮ್ಮ ಬಗ್ಗೆ 'ನನ್ನ ಬದುಕು - ಬಗ್ಗಡದಾಳದ ತಿಳಿ ನೀರು' ಎಂಬ ಲೇಖನದಲ್ಲಿ ಕೆ.ಎಂ.ಶ್ರೀ ಅವರು ತುಂಬ ನೇರವಾಗಿ (ಡಾ॥ ಬಿ.ಎಸ್.ನಾಗೇಶ್ ನಿರೂಪಿಸಿರುವಂತೆ) ತಮ್ಮ ಮನ ಬಿಚ್ಚಿಟ್ಟಿದ್ದಾರೆ: '..... ಗಾಂಧಿ, ನೆಹರು ಕ್ರಾಂತಿಯನ್ನು ತಡೆದವರು. ಅದರ ಪರಿಣಾಮವೇ ಈ ದೇಶದ ಇವತ್ತಿನ ಪರಿಸ್ಥಿತಿ, ಲೋಹಿಯಾ ಕೂಡ ನನಗೆ ಸರಿಕಾಣಲಿಲ್ಲ. ಅವರು ಒಬ್ಬ ಅರಾಜಕವಾದಿ ಅಂತ ನನ್ನ ಅಭಿಪ್ರಾಯ. ಅವರೂ ಕ್ರಾಂತಿಯನ್ನು ಇಚ್ಛಿಸಿರಲಿಲ್ಲ. ಕ್ರಾಂತಿ ಅಂತಂದ್ರೆ ಸಂಪೂರ್ಣ ಬದಲಾವಣೆ. ಲೋಹಿಯಾವಾದ ಒಂಥರಾ ಗಾಳಿಗೋಪುರ ಕಟ್ಟಿದಂತೆ.....' ಆದರೆ ಗಾಳಿಗೋಪುರದಂತಹ ಮಾತುಗಳನ್ನಾಡದೆ, ನೇರವಾಗಿ ಜನರ ಜೊತೆ ಬೆರೆಯುತ್ತ, ಕಾರ್ಯಾಚರಣೆಗೆ ಇಳಿಯುತ್ತಿದ್ದ ಶಾಂತವೇರಿಯವರೊಂದಿಗೆ ಬೆರೆಯಲು ಕಾರಣವಾಗಿದ್ದವು ಎಂದೂ ಅವರು ಹೇಳಲು ಮರೆಯುವುದಿಲ್ಲ.

೧೯೫೨, ೧೯೫೭ ಮತ್ತು ನಂತರದ ಚುನಾವಣೆಗಳಲ್ಲಿ ಕಾಂಗ್ರೆಸ್, ಸಮಾಜವಾದಿ ಪಕ್ಷ, ಕಮ್ಯುನಿಸ್ಟ್ ಪಕ್ಷಗಳ ಸ್ಪರ್ಧೆ, ಪರಸ್ಪರ ತೀವ್ರ ಆರೋಪ - ಪ್ರತ್ಯಾರೋಪ, ಶ್ರೀಮಂತ - ಬಡವರ ಪರ-ವಿರೋಧ, ಜಾತಿಯ ಮೇಲಾಟಗಳು. ಇವೆಲ್ಲ ತೀರ್ಥಹಳ್ಳಿ, ಸಾಗರ, ಹೊಸನಗರ ಮುಂತಾದ ಮಲೆನಾಡ ಭಾಗಗಳಲ್ಲಿ ನಮ್ಮ ಪ್ರಜಾಪ್ರಭುತ್ವದ ಅನಿವಾರ್ಯ ಸವಾಲುಗಳೆಂಬಂತೆ ವ್ಯಾಪಿಸಿದ್ದವು. ಇಂತಹ ಪರಿಸ್ಥಿತಿಯಲ್ಲಿ ಕೆ.ಎಂ.ಶ್ರೀ ಅವರಿಗೆ ನೇರ ಕಾರ್ಯಾಚರಣೆಯೇ ನಿಜವಾದ ಕ್ರಾಂತಿಯ ಮಾರ್ಗವೆನಿಸಿ 'ರೈತ ಸಂಘ'ದ ಮೂಲಕ ಅನೇಕ ಗೇಣಿದಾರರ ಸಂಕಟವನ್ನು ಪರಿಹರಿಸಿದರು.

ಸಮಾಜವಾದಿಗಳ ಹೋರಾಟದ ಇತಿಮಿತಿಯನ್ನು ಅವರು ಹೀಗೆ ಗುರುತಿಸುತ್ತಾರೆ: 'ಒಂದೆಡೆ ಗೋಪಾಲಗೌಡರು, ಮತ್ತೊಂದು ಕಡೆ ಕಾಗೋಡು ಹೋರಾಟದ ನಂತರದ ಸಮಾಜವಾದಿ ಚಳುವಳಿಗಳು. ಇವುಗಳ ನಡುವೆ ನಾನು ಕಮ್ಯುನಿಸ್ಟಾಗಿ ಬೆಳೆದೆ. ಈ ಸಮಾಜವಾದ ಅಪೂರ್ಣ ಅಂತಲೇ ನನಗೆ ಅನ್ನಿಸೋದು...... ಸಮಾಜವಾದಿಗಳು ಅಂದುಕೊಂಡು ಹೇಳಿದ್ದನ್ನು ಪೂರ್ಣವಾಗಿಸಲು ಬದ್ಧತೆಯಿಂದ ಮುಂದಾಗುವುದಿಲ್ಲ ಎಂಬುದು ನನ್ನ ತಕರಾರು.' ಗೋಪಾಲಗೌಡರು ಚುನಾವಣೆಯಲ್ಲಿ ಗೆದ್ದು ಬಂದುದು ಕಾಗೋಡು ಚಳುವಳಿಯ ಪರಿಣಾಮವೇ ಹೊರತು ಸಮಾಜವಾದದ ಪರಿಣಾಮವಲ್ಲ, ಗೋಪಾಲಗೌಡರು ಯಾಕೆ ಸೋತರು ಎಂದರೆ ಸಮಾಜವಾದವನ್ನು ಕಾಯ್ದುಕೊಳ್ಳುವ ವ್ಯವಸ್ಥೆ ಬೆಳೆಯಲಿಲ್ಲ, ಒಳಶಕ್ತಿಯೂ ಇರಲಿಲ್ಲ ಎನ್ನುವುದು ಸಮಾಜವಾದಿಗಳ ಜೊತೆಯಲ್ಲೇ ಕಮ್ಯುನಿಸ್ಟ್ ಆಗಿ ಬೆಳೆದ ಕೆ.ಎಂ.ಶ್ರೀ ಅವರ ಖಚಿತ ನಿಲುವುಗಳು. ಇದಲ್ಲದೆ, ಡಾ॥ ಅಂಬೇಡ್ಕರ್ ಮಾರ್ಗವೂ ಸಮರ್ಥವಾದುದಲ್ಲ, ಅದೊಂದು ಮಧ್ಯಮ ಮಾರ್ಗ ಎನ್ನುತ್ತಾರೆ. ತಮ್ಮ ರಾಜಕೀಯ - ಸಾಮಾಜಿಕ ವಿಶ್ಲೇಷಣೆಗೆ ಮಾರ್ಕ್ಸ್‌ವಾದದ ವೈಜ್ಞಾನಿಕ ವಿಧಾನ ಮುಖ್ಯ ಕಾರಣ ಎನ್ನುತ್ತಾರೆ ಕೆ.ಎಂ.ಶ್ರೀ.

ಭೂಸುಧಾರಣೆ ಜಾರಿಗೆ ಬಂದಾಗ ಗೇಣಿದಾರರು ಭೂಮಿಯನ್ನು ಪಡೆಯಲು ಎಂ.ಅಪ್ಪಣ್ಣ ಹೆಗ್ಗಡೆಯವರೊಂದಿಗೆ ಶ್ರಮಿಸಿದ್ದು, ನ್ಯಾಯಮಂಡಳಿಗಳಲ್ಲಿ ಗೇಣಿದಾರರ ಪರ ವಾದಿಸಿದ್ದು, ೧೯೬೨ರ ಚುನಾವಣೆ (ಅಭ್ಯರ್ಥಿ : ಎಂ.ಅಪ್ಪಣ್ಣ ಹೆಗ್ಗಡೆ)ಯ ಭರಾಟೆ, ನಂಬೂದರಿಪಾದರು ಅವಿಸ್ಮರಣೀಯವಾದ ಭಾಷಣ ಮಾಡಿದುದು, ಕೆ.ಎಂ.ಶ್ರೀ ಎರಡು ಬಾರಿ ಚುನಾವಣೆಯಲ್ಲಿ ಸ್ಪರ್ಧಿಸಿ, ಶ್ರೀಮಂತ ಭೂ-ಮಾಲಿಕರು ಹಣವಂತರ ಪ್ರಭಾವದಿಂದ ಪರಾಭವಗೊಂಡಿದ್ದು - ಇಂತಹ ಘಟನೆಗಳನ್ನು ಜಿ.ಎಸ್.ನಾಗರಾಜ್, ಕಲ್ಕುಳಿ ವಿಠಲ ಹೆಗ್ಗಡೆ ದಾಖಲಿಸಿದ್ದಾರೆ. ವರಾಹಿ ಯೋಜನೆಯ ಸಂದರ್ಭದಲ್ಲಿ ಮುಳುಗಡೆಯಾದ ಮಲೆನಾಡಿನ ೨೦೦೦ ರೈತ ಕುಟುಂಬಗಳ ಪುನರ್ವಸತಿಗಾಗಿ ಕೆ.ಎಂ.ಶ್ರೀ ನಡೆಸಿದ ಯಶಸ್ವಿ ಹೋರಾಟವನ್ನು ಅನೇಕ ಲೇಖಕರು ಸ್ಮರಿಸುತ್ತಾರೆ.

ಕೆ.ಎಂ.ಶ್ರೀ ಒಡನಾಡಿಗಳು ತಾವು ಕಂಡಂತೆ ಅವರ ಅಂತಃಕರಣದ ಗುಣ, ಮಾನವೀಯತೆ, ಅಪಾರವಾದ ಓದು ಇವುಗಳನ್ನು ತಿಳಿಸುತ್ತಾರೆ. ಆರಗದ ಪ್ರೌಢಶಾಲೆಯನ್ನು ಪ್ರಾರಂಭಿಸಲು ಪಾದಯಾತ್ರೆ ಮೂಲಕ ಹಣ ಸಂಗ್ರಹಿಸಿದ್ದು, ಶಾಲಾ ಗ್ರಂಥಾಲಯವನ್ನು ಹಠದಿಂದ ಶಿವರಾಮ ಕಾರಂತರಿಂದ ಉದ್ಘಾಟಿಸಿದ್ದು, ಕೆಲವು ಮತಾಂಧ ಶಕ್ತಿಗಳ ವಿರೋಧವಿದ್ದರೂ ಹಿಮ್ಮೆಟ್ಟದೆ ದಿಟ್ಟತೆಯಿಂದ 'ಸಮುದಾಯ'ದ ಸಾಂಸ್ಕೃತಿಕ ಜಾಥಾವನ್ನು ಯಶಸ್ವಿಗೊಳಿಸಿದುದು- ಇಂತಹ ವಿವರಗಳು ಕೆ.ಎಂ.ಶ್ರೀ ಅವರ ಬದ್ಧತೆಯನ್ನು ತಿಳಿಸುತ್ತವೆ.

ಡಾ॥ ಸಿದ್ಧನಗೌಡ ಪಾಟೀಲರ ಭಾರತ ಕಮ್ಯುನಿಸ್ಟ್ ಪಕ್ಷದ ಹೋರಾಟದ ಪರಂಪರೆ ಕುರಿತ ಲೇಖನ, ಈ ಗ್ರಂಥಕ್ಕೊಂದು ಸೂಕ್ತ ಪರಿಪ್ರೇಕ್ಷ್ಯವನ್ನು ಒದಗಿಸುತ್ತದೆ. ಕೆ.ಎಂ.ಶ್ರೀ ಅವರ ಮಗಳು, ಮೊಮ್ಮಕ್ಕಳು ಬರೆದಿರುವ ಕಿರುಬರಹಗಳು ಆತ್ಮೀಯವಾಗಿವೆ. ಕೊನೆಯಲ್ಲಿ ಕೆ.ಎಂ.ಎಶ್ರೀ ರವರ 'ನಾಕಂಡ ಭಾರತ' ಎಂಬ ೧೯೫೪ರ ಪ್ರವಾಸ ಲೇಖನವನ್ನು ಸೇರಿಸುವುದು ಒಂದು ಉತ್ತಮ ದಾಖಲಾತಿ - ಹಳೆಯದರ ಹೊಸ ಮೆಲುಕು!

ಸಮಾಜವಾದಿಗಳು ಮತ್ತು ಕಮ್ಯುನಿಸ್ಟರ ನಡುವಣ. ಪ್ರೀತಿ-ದ್ವೇಷಗಳ ರಾಜಕಾರಣಕ್ಕೆ ಒಂದು ದೊಡ್ಡ ಇತಿಹಾಸವೇ ಇದೆ. ತೀರ್ಥಹಳ್ಳಿ ಸುತ್ತಮುತ್ತಲಿನ ಇಂತಹ ರಾಜಕಾರಣದ ಕುತೂಹಲಕಾರಿ ಚಿತ್ರಣವನ್ನು ಈ ಕೃತಿ ಕಟ್ಟಿಕೊಡುತ್ತವೆ.

ಕೆ.ಎಂ.ಶ್ರೀ. ಅವರ ಬದುಕಿನ ಅನೇಕ ಘಟನೆಗಳು, ಅವರ ಬಗೆಗಿನ ಅಭಿಪ್ರಾಯಗಳು ಇಲ್ಲಿನ ಅನೇಕ ಲೇಖನಗಳಲ್ಲಿ ಪುನರಾವರ್ತನೆಯಾಗುತ್ತವೆ. ಅಭಿನಂದನಾ ಗ್ರಂಥಗಳಲ್ಲಿ ಇದು ಸಹಜವೇ. ಅಗತ್ಯವಾಗಿದ್ದ ಇಂತಹುದೊಂದು ಮೌಲಿಕ ಗ್ರಂಥವನ್ನು ಹೊರ ತರಲು ಶ್ರಮಿಸಿರುವ ಸಂಪಾದಕರು ಮತ್ತು ಅಭಿನಂದನಾ ಸಮಿತಿಯೂ ಕೃತಜ್ಞಾರ್ಹರು.

-ಎಂ.ಬಿ.ನಟರಾಜ್

'ಹೊಸ ಮನುಷ್ಯ' ಓದುಗರೆಲ್ಲರಿಗೂ
ದೀಪಾವಳಿಯ ಶುಭಾಶಯಗಳು



–ಜಾಕೀರ್ ಹುಸೇನ್ ಟಿ. ಶಿಬಾರಗಟ್ಟಿ
ಮೊದಲ ದರ್ಜೆ ಸಿವಿಲ್ ಗುತ್ತಿಗೆದಾರರು
ಲಕ್ಷ್ಮಿಸಿಂಗನಕೇರಿ, ನಗರ್‌ಕರ್ ಕಾಲೋನಿ
ಧಾರವಾಡ

'ಹೊಸ ಮನುಷ್ಯ' ಓದುಗರೆಲ್ಲರಿಗೂ
ರಾಜ್ಯೋತ್ಸವದ ಶುಭಾಶಯಗಳು



–ಜಿ.ಎಸ್. ಜಯದೇವ
ದೀನಬಂಧು ಅನಾಥಾಶ್ರಮ
ಚಾಮರಾಜನಗರ

'ಹೊಸ ಮನುಷ್ಯ' ಓದುಗರೆಲ್ಲರಿಗೂ
ರಾಜ್ಯೋತ್ಸವದ ಶುಭಾಶಯಗಳು



-ಸಿ. ಪ್ರಶಾಂತ್
ದೀಪಾ ಪ್ರಶಾಂತ್
ಹಾಗೂ ಕು. ಅನಘ
ಬೆಂಗಳೂರು

ತಿಂಗಳ ಸಾಲುಗಳು...



ರಾಜ್ಯಗಳಿಗೆ ಸ್ವಾಯತ್ತತೆ ಅಗತ್ಯ, ಅಮೆರಿಕಾದ ಸಂಸ್ಥಾನಗಳಿಗಿರುವಂತೆ. ಅಲ್ಲಿ ಹೊಸ ಹೊಸ ಸಂಸ್ಥಾನಗಳು ಉದ್ಭವಿಸುತ್ತಲೇ ಇವೆ. ಅವುಗಳಿಗೂ ಸ್ವಾತಂತ್ರ್ಯವಿರುತ್ತದೆ. ರಾಷ್ಟ್ರಕ್ಕೂ ಭದ್ರತೆ ಇರುತ್ತದೆ. ನಮ್ಮದು ಯುನೈಟೆಡ್ ಸ್ಟೇಟ್ಸ್ ಆಫ್ ಇಂಡಿಯಾ ಆಗಬೇಕೆಂಬುದೇ ನನ್ನ ದೃಢವಾದ ಅಭಿಪ್ರಾಯ. ರಾಜ್ಯಗಳು ಸ್ವಾಯತ್ತವಾಗಿರಲಿ; ಸೈನ್ಯ ಮುಂತಾದ ವ್ಯವಸ್ಥೆಗಳು ಕೇಂದ್ರದ ಕೈಯಲ್ಲಿರಲಿ.

-ಕುವೆಂಪು

ಪತ್ರಿಕೆಗೆ ಶುಭ ಕೋರುತ್ತಾ...

-ಬಿ.ಸುರೇಶ

ಡಾ. ವಿಜಯಾ

HOSA MANUSHYA, a kannada monthly solely owned, edited, published and printed by D. S. Nagabhushana, at HIG-5, Kallahally Extn., Vinoba Nagara, SHIVAMOGGA-577204. Printed at Ila Mudrana, Bengaluru-560 026 Ph.: 080-26757159

Regd. News Paper RNI No. KARKAN/2012/47568
Rgd No. KA/SK/SMG-1209/2013-15
ಇವರಿಗೆ \ To

If undelivered, please return to D.S. Nagabhushana, Editor, 'Hosa Manushya', 'HIG-5, 'Nudi', Kallahalli Extension, Vinoba Nagara, Shivamogga -577204(Karnataka)